# ತೀರ್ಪುಗಾರರ ವರದಿ

ಜೂನ್ 6, 2026 ರಂದು ಗಾಂಧಿ ಭವನ, ಬೆಂಗಳೂರಿನಲ್ಲಿ ನಡೆದ

**ಕರ್ನಾಟಕ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ (ಕೆಲವು ಜಮೀನುಗಳ ವರ್ಗಾವಣೆ ನಿಷೇಧ) ಕಾಯ್ದೆ, 1978(PTCL)**

**ಕಾಯ್ದೆ 1978 ಅನುಷ್ಠಾನದಲ್ಲಿರುವ ಸಮಸ್ಯೆಗಳ ಕುರಿತು ಸಾರ್ವಜನಿಕ ಅಹವಾಲು ಕಾರ್ಯಕ್ರಮ**

## ತೀರ್ಪುಗಾರರ ಸಮಿತಿ

- **ನ್ಯಾಯಮೂರ್ತಿ ಗೋಪಾಲ ಗೌಡರವರು**
  ಮಾಜಿ ನ್ಯಾಯಮೂರ್ತಿಗಳು , ಸರ್ವೋಚ್ಚ ನ್ಯಾಯಾಲಯ
- **ಶ್ರೀ ಡಿ. ತಂಗರಾಜ್ ರವರು**– ಐಎಎಸ್ (ನಿವೃತ್ತ)
- **ಡಾ. ಎಸ್. ಎಂ. ಜಮದಾರ್ ರವರು**– ಐಎಎಸ್ (ನಿವೃತ್ತ)
- **ಶ್ರೀಮತಿ ಜ್ಯೋತಿ ರಾಜ್** ರವರು– ಅಧ್ಯಕ್ಷರು, ಭೂಶಕ್ತಿ ಕೇಂದ್ರ
- **ಶ್ರೀ ಎಚ್. ಎಲ್. ವೆಂಕಟೇಶ್ ರವರು** – ಪಿಟಿಸಿಎಲ್ ಕಾಯಿದೆ ತಜ್ಞರು ಹಾಗೂ ವಕೀಲರು

## ಆಯೋಜಕರು

- **ಅಖಿಲ ಭಾರತ ನ್ಯಾಯಕ್ಕಾಗಿ ವಕೀಲರ ಸಂಘ (All India Lawyers Association for Justice – AILAJ)**
- **ಮಂಥನ್ ಲಾ (Manthan Law)**
- **ಆಲ್ಟರ್ನೇಟಿವ್ ಲಾ ಫೋರಂ (Alternative Law Forum – ALF)**
- **ಪಿಟಿಸಿಎಲ್ ಕಾಯ್ದೆ ಭೂಮಿ ವಂಚಿತರ ಹೋರಾಟ ಸಮಿತಿ**
- **ಸ್ವತಂತ್ರ ಪ್ರಗತಿಪರ ಸಂಶೋಧಕರು**

ಬೆಂಗಳೂರಿನ ಗಾಂಧಿ ಭವನದಲ್ಲಿ
06.06.2026 ರಂದು ನಡೆದ
ಪಿಟಿಸಿಎಲ್ ಕಾಯ್ದೆ, 1978ರ ಅನುಷ್ಠಾನದ ಕುರಿತಾದ ಸಾರ್ವಜನಿಕ
ಅಹವಾಲು ಕಾರ್ಯಕ್ರಮದ ಜ್ಯೂರಿ ಸಮಿತಿಯ ವರದಿ

ಬಿಡುಗಡೆಯಾದ ದಿನ 25 ಆಗಸ್ಟ್ 2026

1. ಹಿನ್ನೆಲೆ 5

2. ಕರ್ನಾಟಕ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ (ಕೆಲವು ಜಮೀನುಗಳ ವರ್ಗಾವಣೆ ನಿಷೇಧ) ಕಾಯ್ದೆ, 1978 6

2.1 ಧ್ಯೇಯೋದ್ದೇಶ ಮತ್ತು ಸಾಂವಿಧಾನಿಕ ಆಧಾರ 6

2.2 ಕಾನೂನು ಚೌಕಟ್ಟು (The Legal Framework) 10

3. ಸಾರ್ವಜನಿಕ ಅಹವಾಲಿನ ಟೆಸ್ಟಿಮೋನಿಗಳು (ಸಂತ್ರಸ್ತರು ಮಂಡಿಸಿದ ವಾಸ್ತಾವಾಂಶಗಳು ) 13

3.1 ಪ್ರಕರಣಗಳ ಸಾರಾಂಶ 13

ಪ್ರಕರಣ 1: ನೆಕ್ಕಂಟಿ ತೀರ್ಪಿನಲ್ಲಿನ ಮಂಜೂರಾತಿದಾರರ ಕಾನೂನುಬದ್ಧ ವಾರಸುದಾರರಾದ ಶ್ರೀ ರಾಜಪ್ಪ ಅವರ ಪ್ರಕರಣ 13

ಪ್ರಕರಣ 2: ಶ್ರೀ ಕರುಣೇಶ್ (ಕೋಲಾರ) 15

ಪ್ರಕರಣ 3: ಶ್ರೀ ನವೀನ್ (ಬೆಂಗಳೂರು ನಗರ) 15

ಪ್ರಕರಣ 4: ಶ್ರೀಮತಿ ಜಯಮ್ಮ (ಬೆಂಗಳೂರು ನಗರ) 16

ಪ್ರಕರಣ 5: ಶ್ರೀ ನರಸಿಂಹಯ್ಯ (ಬೆಂಗಳೂರು ಗ್ರಾಮಾಂತರ) 17

ಪ್ರಕರಣ 6: ಶ್ರೀ ಪಿ. ವೆಂಕಟೇಶ್ (ಕೋಲಾರ) 18

ಪ್ರಕರಣ 7: ಶ್ರೀ ರಂಗನಾಯ್ಕ್ (ಚಿತ್ರದುರ್ಗ) 19

ಪ್ರಕರಣ 8: ಶ್ರೀ ಕಿರಣ್ ಕುಮಾರ್ (ರಾಮನಗರ) 20

ಪ್ರಕರಣ 9: ಶ್ರೀ ಶಾಂತಕುಮಾರ್ (ಚಿತ್ರದುರ್ಗ) 21

ಪ್ರಕರಣ 10: ಶ್ರೀಮತಿ ಗಂಗಮ್ಮ (ತುಮಕೂರು) 22

3.2 ಸಾಮಾಜಿಕ ವಾಸ್ತವಗಳು: ವಂಚಿತಗೊಳಿಸುವಿಕೆಯ ಪರಿಸ್ಥಿತಿಗಳು 22

ಅನಕ್ಷರತೆಯ ದುರುಪಯೋಗ ಮತ್ತು ವಂಚನೆ 22

ಜೀತ ಪದ್ಧತಿ ಮತ್ತು ಊಳಿಗಮಾನ್ಯ ಪದ್ಧತಿ ಸೃಷ್ಟಿಸಿರುವ ಅವಲಂಬನೆ 23

ಬಲವಂತ, ಬೆದರಿಕೆಗಳು ಮತ್ತು ಹಿಂಸಾಚಾರ 24

3.3 ವ್ಯವಸ್ಥಿತ ಹಿನ್ನಡೆಯಾಗಿ ಮಾರ್ಪಟ್ಟ ಕಾಲವಿಳಂಬ 25

3.4 ವ್ಯವಸ್ಥಿತ ಮತ್ತು ಅಧಿಕಾರಶಾಹಿ ಅಡೆತಡೆಗಳು 26

ಕಾಣೆಯಾದ ಮತ್ತು ಅಲಭ್ಯ ದಾಖಲೆಗಳು 26

| | | | |
|---|---|---|---|
| | | ಭ್ರಷ್ಟಾಚಾರ ಮತ್ತು ಶಾಮೀಲಾತಿ | 27 |
| | | ಕಾನೂನು ಪ್ರಾತಿನಿಧ್ಯದಲ್ಲಿಯೂ ವಂಚನೆ | 28 |
| | 3.5 | ಕಂದಾಯ ಇಲಾಖೆ ವ್ಯವಸ್ಥೆಯ ಪಾತ್ರ<br>ಅನುಕೂಲಕರ ಆದೇಶಗಳನ್ನು ಜಾರಿಗೊಳಿಸಲು ನಿರಾಕರಣೆ | 28 |
| | 3.6 | ಕಾನೂನು ಹೋರಾಟ ಹಾಗೂ ಬಡತನದ ಸುಳಿಚಕ್ರ | 30 |
| 4. | | ಪ್ರಮುಖ ಸಮಸ್ಯೆಗಳು | 30 |
| | 4.1 | ಮಂಜೂರಾದ ಜಮೀನು ಎಂದರೇನು: ಕಾಯ್ದೆಯ ವ್ಯಾಪ್ತಿ | 31 |
| | 4.2 | ಕಾಲಮಿತಿಯ ಪ್ರಶ್ನೆ: ಡಿಲೇ ಮತ್ತು ಲ್ಯಾಚಸ್<br>(ಕಾಲಮಿತಿ ಮತ್ತು ಬೇಜವಾಬ್ದಾರಿ ವಿಳಂಬ) | 32 |
| | 4.3 | ಜಾತಿಯ ಸಾಮಾಜಿಕ ಹಿನ್ನೆಲೆ ಮತ್ತು ಕಾಯಿದೆಯ<br>ಕಲ್ಯಾಣೋದ್ದೇಶವನ್ನು ಗುರುತಿಸುವಲ್ಲಿ ನ್ಯಾಯಾಂಗದ ವಿಫಲತೆ | 42 |
| | 4.4 | ಕಾಯಿದೆಯಡಿ ತನ್ನ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ಸರ್ಕಾರದ ವಿಫಲತೆ | 51 |
| | 4.5 | ವ್ಯಾಪಕ ಪರಿಣಾಮಗಳು: ಭೂಮಿ, ಜಾತಿ ಮತ್ತು ವಿತರಣಾ ನ್ಯಾಯದ<br>(ಡಿಸ್ಟ್ರಿಬ್ಯೂಟಿವ್ ಜಸ್ಟಿಸ್) ಸೋಲು | 53 |
| 5. | | ಶಿಫಾರಸುಗಳು | 55 |
| | 5.1 | ಸುಪ್ರೀಂ ಕೋರ್ಟ್ ಮುಂದೆ ಇರುವ ಮರುಪರಿಶೀಲನಾ ಅರ್ಜಿ | 56 |
| | 5.2 | ಉನ್ನತ ಮಟ್ಟದ ಸಮಿತಿ | 56 |
| | 5.3 | ಪರ್ಯಾಯ ಭೂಮಿ ನೀಡುವ ಮೂಲಕ ಭೂಮಿ ಕಳೆದುಕೊಂಡವರ<br>ಪುನರ್ವಸತಿ | 56 |
| | 5.4 | ಮಂಜೂರಾತಿದಾರರಿಗೆ ಕಾನೂನು ನೆರವು ಮತ್ತು ಸಾಂಸ್ಥಿಕ ಬೆಂಬಲ | 56 |
| | 5.5. | ಸೆಕ್ಷನ್ 8 ರ ಅನುಷ್ಠಾನ: ಕ್ರಿಮಿನಲ್ ಮೊಕದ್ದಮೆ | 57 |
| | 5.6 | ಸೆಕ್ಷನ್ 6 ರ ಅನುಷ್ಠಾನ: ನೋಂದಣಿಗೆ ನಿಷೇಧ | 57 |
| | 5.7 | ಪಿ.ಟಿ.ಸಿ.ಎಲ್ ಕಾಯ್ದೆ ಮತ್ತು ಉದ್ದೇಶದ ಕುರಿತು<br>ಕಂದಾಯ ಅಧಿಕಾರಿಗಳಿಗೆ ತರಬೇತಿ | 57 |
| | 5.8 | ಕಂದಾಯ ಅಧಿಕಾರಿಗಳಿಗೆ ನಿರ್ದೇಶನಗಳು | 58 |
| | 5.9 | ಕಾಯ್ದೆಯ ಅನುಷ್ಠಾನ | 58 |

## 1. ಹಿನ್ನೆಲೆ

ಈ ವರದಿಯನ್ನು ಬೆಂಗಳೂರಿನ ಗಾಂಧಿ ಭವನದಲ್ಲಿ 06.06.2026 ರಂದು ನಡೆದ ಕರ್ನಾಟಕ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ (ಕೆಲವು ಜಮೀನುಗಳ ವರ್ಗಾವಣೆ ನಿಷೇಧ) ಕಾಯ್ದೆ, 1978 ("ಪಿಟಿಸಿಎಲ್ ಕಾಯ್ದೆ") ಅನುಷ್ಠಾನದ ಕುರಿತಾದ ಸಾರ್ವಜನಿಕ ಅಹವಾಲು ಕಾರ್ಯಕ್ರಮದ ಜ್ಯೂರಿ ಸಮಿತಿಯು ಸಿದ್ಧಪಡಿಸಿದೆ.

ಜ್ಯೂರಿ ಸಮಿತಿಯು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳಾದ ವಿ. ಗೋಪಾಲಗೌಡರು, ಮಾಜಿ ಐಎಎಸ್ ಅಧಿಕಾರಿ ಶ್ರೀ ಎಸ್.ಎಂ. ಜಾಮದಾರ್ ಅವರು, ಮಾಜಿ ಐಎಎಸ್ ಅಧಿಕಾರಿ ಡಿ. ತಂಗರಾಜ್ ಅವರು, ಹಿರಿಯ ಹೋರಾಟಗಾರ್ತಿ ಶ್ರೀಮತಿ ಜ್ಯೋತಿ ರಾಜ್ ಅವರು ಮತ್ತು ಪಿಟಿಸಿಎಲ್ ಪ್ರಕರಣಗಳ ಕಾನೂನು ತಜ್ಞರಾದ ಎಚ್.ಎಲ್. ವೆಂಕಟೇಶ್ ಅವರನ್ನು ಒಳಗೊಂಡಿತ್ತು.



ತೀರ್ಪುಗಾರರ ಮಂಡಳಿಯ ಸದಸ್ಯರು - ಜೂನ್ 6, 2026

ಕರ್ನಾಟಕದ ಏಳು ಜಿಲ್ಲೆಗಳಾದ ಬೆಂಗಳೂರು ನಗರ ಮತ್ತು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ರಾಮನಗರ ಮತ್ತು ದಾವಣಗೆರೆಯಲ್ಲಿ ಪಿಟಿಸಿಎಲ್ ಕಾಯ್ದೆಯ ಅನುಷ್ಠಾನದಲ್ಲಿ ಎದುರಾಗುತ್ತಿರುವ ಸವಾಲುಗಳ ಕುರಿತು ಏಳು ತಿಂಗಳ ಕಾಲ ನಡೆಸಿದ ಸಂಶೋಧನೆಯ ಫಲಿತಾಂಶಗಳನ್ನು ಪ್ರಸ್ತುತಪಡಿಸಲು ಈ ಸಾರ್ವಜನಿಕ ಅಹವಾಲು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಜ್ಯೂರಿ ಸಮಿತಿಯ ಸದಸ್ಯರು ಈ ಏಳು ಜಿಲ್ಲೆಗಳ ಹತ್ತು ಮಂಜೂರಾತಿದಾರರು ಮತ್ತು ಅವರ ವಾರಸುದಾರರ ಟೆಸ್ಟಿಮೋನಿಗಳನ್ನು ಆಲಿಸಿದರು. ಭೂ ವಂಚಿತರಾದ ಇತರೆ ಕುಟುಂಬಗಳ ಪ್ರತಿನಿಧಿಗಳೂ ಸಹ ಈ ಅಹವಾಲು ಕಾರ್ಯಕ್ರಮದಲ್ಲಿ ಜ್ಯೂರಿ ಸಮಿತಿಯನ್ನು ಉದ್ದೇಶಿಸಿ ಮಾತನಾಡಿದರು.

ಈ ಸಾರ್ವಜನಿಕ ಅಹವಾಲನ್ನು ಭಾರತೀಯ ಸಂವಿಧಾನದ ಮೂಲ ತತ್ವಗಳನ್ನು ರಕ್ಷಿಸಲು ಶ್ರಮಿಸುವ ಕಾನೂನು ವೃತ್ತಿಪರರ ಸಂಘಟನೆಯಾದ 'ಆಲ್ ಇಂಡಿಯಾ ಲಾಯರ್ಸ್ ಅಸೋಸಿಯೇಷನ್ ಫಾರ್ ಜಸ್ಟಿಸ್' (A I L A J ), ನಮ್ಮ ಸಂವಿಧಾನದ ಪ್ರಸ್ತಾವನೆಯ ಮೌಲ್ಯಗಳನ್ನು ಎತ್ತಿಹಿಡಿಯಲು ಕೆಲಸ ಮಾಡುವ ನೋಂದಾಯಿತ ಸಂಸ್ಥೆಯಾದ 'ಆಲ್ಟರ್ನೇಟಿವ್ ಲಾ ಫೋರಮ್' ಮತ್ತು ತಮಗೆ ಮಂಜೂರಾಗಿದ್ದ ಭೂಮಿಯಿಂದ ವಂಚಿತರಾದ ಎಸ್‌ಸಿ/ಎಸ್‌ಟಿ ಸಮುದಾಯಗಳ ಸದಸ್ಯರ ನೋಂದಾಯಿತ ಸಂಘಟನೆಯಾದ 'ಪಿಟಿಸಿಎಲ್ ಕಾಯ್ದೆ ಭೂಮಿ ವಂಚಿತರ ಹೋರಾಟ ಸಮಿತಿ', ಜಂಟಿಯಾಗಿ ಆಯೋಜಿಸಿದ್ದವು.

ಈ ವರದಿಯು ಸಾರ್ವಜನಿಕ ಅಹವಾಲಿನಲ್ಲಿ ಆಲಿಸಿದ ಟೆಸ್ಟಿಮೋನಿಗಳ ಆಧಾರದ ಮೇಲೆ ಜ್ಯೂರಿ ಸಮಿತಿ ಕಂಡುಕೊಂಡ ಫಲಿತಾಂಶಗಳು ಪ್ರಸ್ತುತಪಡಿಸುತ್ತದೆ. ಜ್ಯೂರಿ ಸಮಿತಿಯು ಟೆಸ್ಟಿಮೋನಿಗಳು, ಪೂರಕ ದಾಖಲೆಗಳು ಮತ್ತು ಪಿಟಿಸಿಎಲ್ ಕಾಯ್ದೆಯು ಕಾರ್ಯನಿರ್ವಹಿಸುವ ಕಾನೂನು ಹಾಗೂ ಸಾಂವಿಧಾನಿಕ ಚೌಕಟ್ಟನ್ನು ಪರಿಶೀಲಿಸಿದೆ. ಕಾಯ್ದೆಯ ಅನುಷ್ಠಾನದ ಸ್ಥಿತಿಗತಿಯ ಬಗ್ಗೆ ಜ್ಯೂರಿ ಸಮಿತಿಯು ಗಂಭೀರವಾಗಿ ಪರಿಶೀಲಿಸಿ ಫಲಿತಾಂಶಗಳನ್ನು ಮತ್ತು ಶಿಫಾರಸುಗಳನ್ನು ಮಂಡಿಸಿದೆ. ಪಿ.ಟಿ.ಸಿ.ಎಲ್ ಕಾಯ್ದೆಯನ್ನು ಸಂವಿಧಾನದಲ್ಲಿ ಅಡಕವಾಗಿರುವ ವಿತರಣಾ ನ್ಯಾಯದ (distributive justice) ಸಾಧನವನ್ನಾಗಿ ಮರುಸ್ಥಾಪಿಸಲು ಅಗತ್ಯವಿರುವ ಕ್ರಮಗಳನ್ನು ಈ ವರದಿಯು ಸೂಚಿಸುತ್ತದೆ.

## 2. ಕರ್ನಾಟಕ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ (ಕೆಲವು ಜಮೀನುಗಳ ವರ್ಗಾವಣೆ ನಿಷೇಧ) ಕಾಯ್ದೆ, 1978

### 2.1 ಧ್ಯೇಯೋದ್ದೇಶ ಮತ್ತು ಸಾಂವಿಧಾನಿಕ ಆಧಾರ

ಕರ್ನಾಟಕ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ (ಕೆಲವು ಜಮೀನುಗಳ ವರ್ಗಾವಣೆ ನಿಷೇಧ) ಕಾಯ್ದೆ, 1978 ಎಂಬುದು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಪ್ರಬಲವಾಗಿರುವ ವರ್ಗಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮಂಜೂರಾದ ಜಮೀನುಗಳ ಪರಭಾರೆಯನ್ನು (ಹಸ್ತಾಂತರ) ತಡೆದು, ಅವುಗಳನ್ನು ರಕ್ಷಿಸಲು ಜಾರಿಗೆ ತರಲಾದ ಒಂದು ಕಲ್ಯಾಣ ಕಾಯ್ದೆಯಾಗಿದೆ. ಪಿಟಿಸಿಎಲ್ ಕಾಯ್ದೆಯ ಧ್ಯೇಯೋದ್ದೇಶಗಳೇ ಅಸ್ತಿತ್ವದಲ್ಲಿದ್ದ ಭೂ ಮಂಜೂರಾತಿ ನಿಯಮಗಳಲ್ಲಿದ್ದ ಪರಭಾರೆ ನಿಷೇಧ (non-alienation) ಷರತ್ತುಗಳು ಅಶಕ್ತವಾಗಿವೆ ಎಂಬುದನ್ನು ಶಾಸಕಾಂಗವು ಗುರುತಿಸಿದೆ:

" ಪ್ರಸ್ತುತ ಅಸ್ತಿತ್ವದಲ್ಲಿರುವ ಭೂ ಮಂಜೂರಾತಿ ನಿಯಮಗಳಲ್ಲಿ ಮತ್ತು ಮಂಜೂರಾತಿ ರದ್ದತಿ ಉಪಬಂಧಗಳಲ್ಲಿ ಒಳಗೊಂಡಿರುವಂತಹ ಪರಭಾರೆ ನಿಷೇಧ ಖಂಡಗಳನ್ನು ಉಲ್ಲಂಘಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಭೂ ಮಂಜೂರಾತಿದಾರರ ಮುಗ್ಧತೆ , ಬಡತನ ಮತ್ತು ಮೌಢ್ಯವನ್ನು ಬಲಿಷ್ಠ ವ್ಯಕ್ತಿಗಳು ದುರುಪಯೋಗಿಸಿಕೊಂಡು ಸಾಮಾನ್ಯ ದರಕ್ಕಾಗಲಿ ಅಥವಾ ಯಾವುದೇ ದರ ರಹಿತವಾಗಿ ಮಾರಾಟ ಅಥವಾ ಅಡಮಾನ ಮಾಡಿಸಿಕೊಳ್ಳುವ ಮತ್ತು ಇಂತಹ ಸನ್ನಿವೇಶದ ಬಲಿಪಶುಗಳಾಗುವ ಪ್ರವೃತ್ತಿ ಬರುತ್ತದೆ. ಇದನ್ನು

ತಡೆಗಟ್ಟಲು ಭೂ ಮಂಜೂರಾತಿ ನಿಯಮಗಳಲ್ಲಿ ಮತ್ತು ಮಂಜೂರಾತಿ ರದ್ದತಿ ಉಪಬಂಧಗಳಲ್ಲಿ ಒಳಗೊಂಡಿರುವಂತಹ ಪರಭಾರೆ ನಿಷೇಧ ಖಂಡಗಳು ಸಾಲದೆಂಬ ಅಂಶವು ಕಂಡು ಬಂದಿರುತ್ತದೆ. ಆದ್ದರಿಂದ ಮಂಜೂರಾತಿಯ ಉದ್ದೇಶವನ್ನು ಪೂರ್ಣಗೊಳಿಸುವ ಸಲುವಾಗಿ, ಅಂತಹ ಭೂಮಿಯು ಪರಭಾರೆಯಾಗಿದ್ದಾಗ್ಯೂ ಸಹ, ಅದನ್ನು ಮೂಲ ಮಂಜೂರಾತಿದಾರನಿಗಾಗಲೀ ಅಥವಾ ಆತನ ಉತ್ತರಾಧಿಕಾರಿಗಳಿಗಾಗಲಿ ಪುನರ್ ಸ್ಥಾಪಿಸಬೇಕು.

ಭಾರತ ಸರ್ಕಾರವು ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವ್ಯಕ್ತಿಗಳಿಗೆ ಸರ್ಕಾರದಿಂದ ಮಂಜೂರಾದ ಭೂಮಿಯ ಪರಭಾರೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ರೂಪಿಸಿರುವ ರೀತಿಯಲ್ಲಿಯೇ ಕಾಯ್ದೆಯನ್ನು ರೂಪಿಸಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತಿದೆ ಮತ್ತು ಈ ನಿಟ್ಟಿನಲ್ಲಿ ಅದು ರೂಪಿಸಿರುವಂತಹ ಮಾದರಿ ಕಾಯ್ದೆಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಿದೆ.

ಆದ್ದರಿಂದ ಈ ವಿಧೇಯಕ "

ಪಿಟಿಸಿಎಲ್ ಕಾಯ್ದೆಯ ಉದ್ದೇಶವನ್ನು ಅರ್ಥ ಮಾಡಿಕೊಳ್ಳಲು, ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಭೂಮಿಯನ್ನು ಮಂಜೂರು ಮಾಡಿದ ಐತಿಹಾಸಿಕ ಹಿನ್ನೆಲೆಯನ್ನು ಅರ್ಥ ಮಾಡಿಕೊಳ್ಳುವುದು ಅತ್ಯಗತ್ಯ. ಶತ-ಶತಮಾನಗಳಿಂದಲೂ ನಡೆದುಬಂದ ಜಾತಿ ಆಧಾರಿತ ತಾರತಮ್ಯ ಮತ್ತು ಶೋಷಣೆಯ ಕಾರಣದಿಂದಾಗಿ ಎಸ್‌ಸಿ/ ಎಸ್‌ಟಿ ಸಮುದಾಯಗಳನ್ನು ಭೂ ಮಾಲೀಕತ್ವದಿಂದ ವ್ಯವಸ್ಥಿತವಾಗಿ ಹೊರಗಿಡಲಾಗಿತ್ತು ಎಂಬುದನ್ನು ಭಾರತದಾದ್ಯಂತ ಇದ್ದಂತೆಯೇ ಕರ್ನಾಟಕದಲ್ಲಿಯೂ ಇತ್ತು ಎಂಬುದನ್ನು ಸ್ವಾತಂತ್ರ್ಯೋತ್ತರ ಭೂ ಸುಧಾರಣಾ ಯೋಜನೆಯು ಒಪ್ಪಿಕೊಂಡಿದೆ.

ಇದನ್ನು ಸರಿಪಡಿಸಲು, ರಾಜ್ಯ ಸರ್ಕಾರವು ವಿವಿಧ ಯೋಜನೆಗಳ ಅಡಿಯಲ್ಲಿ ಎಸ್‌ಸಿ/ಎಸ್‌ಟಿ ವ್ಯಕ್ತಿಗಳಿಗೆ ಸರ್ಕಾರಿ ಜಮೀನುಗಳನ್ನು ಮಂಜೂರು ಮಾಡಿತು. ಈ ಮಂಜೂರಾತಿಗಳು ಸಾಮಾಜಿಕ ಮತ್ತು ಆರ್ಥಿಕ ನ್ಯಾಯವನ್ನು ಖಾತ್ರಿಪಡಿಸುವ ಹಾಗೂ ಭೌತಿಕ ಸಂಪನ್ಮೂಲಗಳನ್ನು ಹಂಚಿಕೆ ಮಾಡಬೇಕೆಂಬ ಸಾಂವಿಧಾನಿಕ ನಿರ್ದೇಶನಗಳನ್ನು ಆಧರಿಸಿ ಕೈಗೊಂಡ ಕ್ರಮಗಳಾಗಿದ್ದವು. ಮಂಜೂರಾತಿದಾರರಿಗೆ ಮತ್ತು ಅವರ ಕುಟುಂಬಕ್ಕೆ ಜೀವನೋಪಾಯವನ್ನು ಹಾಗೂ ಭೂಮಿಯಲ್ಲಿ ಪಾಲನ್ನು ನೀಡುವುದು ಇದರ ನಿರ್ದಿಷ್ಟ ಉದ್ದೇಶವಾಗಿತ್ತು. ಅದರಂತೆ, ಈ ಮಂಜೂರಾತಿಗಳು ಸಾಮಾನ್ಯವಾಗಿ ಒಂದು ನಿರ್ದಿಷ್ಟ ಅವಧಿಗೆ ಮತ್ತು ಕೆಲವು ಸಂದರ್ಭಗಳಲ್ಲಿ ಶಾಶ್ವತವಾಗಿ ಜಮೀನನ್ನು ವರ್ಗಾವಣೆ ಮಾಡುವುದನ್ನು ನಿಷೇಧಿಸುವ 'ಪರಭಾರೆ ನಿಷೇಧ' ಷರತ್ತುಗಳನ್ನು ಹೊಂದಿದ್ದವು. ಈ ಸಮುದಾಯಗಳನ್ನು ಭೂಹೀನರನ್ನಾಗಿ ಮಾಡಿದ ಸಾಮಾಜಿಕ ಮತ್ತು ಆರ್ಥಿಕ ದುರ್ಬಲತೆಗಳನ್ನು ಅಳಿಸದೆಯೇ ಹಾಗೇ ಬಿಟ್ಟರೆ, ಮಂಜೂರಾದ ಜಮೀನುಗಳು ಮತ್ತೊಮ್ಮೆ ಸಮಾಜದ ಪ್ರಬಲ ವರ್ಗಗಳ ಪಾಲಾಗುತ್ತವೆ ಎಂಬುದನ್ನು ಸರ್ಕಾರವು ಗುರುತಿಸಿ ಈ

ಷರತ್ತುಗಳನ್ನು ಮಂಜೂರಾತಿಯ ಭಾಗವಾಗಿಸಿತ್ತು.

ಈ ಹಿನ್ನೆಲೆಯಲ್ಲಿ ಪಿಟಿಸಿಎಲ್ ಕಾಯ್ದೆಯನ್ನು ಜಾರಿಗೆ ತರಲಾಯಿತು. 1978 ರಲ್ಲಿ ಈ ಕಾಯ್ದೆ ಜಾರಿಗೆ ಬರುವ ಹೊತ್ತಿಗೆ, ಮಂಜೂರಾತಿ ನಿಯಮಗಳಲ್ಲಿದ್ದ ಪರಭಾರೆ ನಿಷೇಧ ಷರತ್ತುಗಳು ಮಾತ್ರವೇ ಸಾಕಾಗುತ್ತಿಲ್ಲ ಎಂಬುದು ಸ್ಪಷ್ಟವಾಗಿತ್ತು. ವಂಚನೆ, ತಪ್ಪು ಮಾಹಿತಿ ನೀಡುವುದು, ಬಲವಂತ ಮತ್ತು ಅಜ್ಞಾನ ಹಾಗೂ ಆರ್ಥಿಕ ಹತಾಶೆಯ ದುರುಪಯೋಗದ ಮೂಲಕ ವ್ಯಾಪಕ ಪ್ರಮಾಣದಲ್ಲಿ ಜಮೀನುಗಳು ಪರಭಾರೆಯಾಗಿದ್ದವು. ಆದ್ದರಿಂದ, ಇಂತಹ ಪರಭಾರೆಗಳನ್ನು ಅನೂರ್ಜಿತ ಎಂದು ಘೋಷಿಸಲು, ಜಮೀನಿನ ಮರುಸ್ಥಾಪನೆಗೆ ಅವಕಾಶ ಕಲ್ಪಿಸಲು ಮತ್ತು ಕಾನೂನು ಉಲ್ಲಂಘಿಸಿ ಮಂಜೂರಾದ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡವರನ್ನು ಕಾನೂನಿನ ಅಡಿಯಲ್ಲಿ ಶಿಕ್ಷೆಗೆ ಗುರಿಪಡಿಸಲು ಸಮಗ್ರವಾದ ಒಂದು ಶಾಸನಬದ್ಧ ಚೌಕಟ್ಟನ್ನು ಒದಗಿಸಲು ಈ ಕಾಯ್ದೆಯನ್ನು ಜಾರಿಗೆ ತರಲಾಯಿತು.

ಸದರಿ ಕಾಯ್ದೆಯು ವಿತರಣಾ ನ್ಯಾಯದ ಮೂಲಕ ಸಂವಿಧಾನವು ನಿರ್ದೇಶಿಸುವಂತಹ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಜಾರಿಗೆ ತರಲು ಕೈಗೊಳ್ಳಲಾದ ಸಕಾರಾತ್ಮಕ ಕ್ರಮ(affirmative action)ವಾಗಿದೆ. ಸಂವಿಧಾನದ ವಿಧಿ 15(4) ರ ಅಡಿಯಲ್ಲಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪ್ರಗತಿಗಾಗಿ ವಿಶೇಷ ಪ್ರಾವಿಧಾನಗಳನ್ನು ರೂಪಿಸಲು ಪ್ರಭುತ್ವಕ್ಕೆ ಅಧಿಕಾರ ನೀಡುತ್ತದೆ. ವಿಧಿ 39(b) ಭೌತಿಕ ಸಂಪನ್ಮೂಲಗಳ ಮಾಲೀಕತ್ವ ಮತ್ತು ನಿಯಂತ್ರಣವನ್ನು ಸಾರ್ವಜನಿಕ ಹಿತಾಸಕ್ತಿಗೆ ಪೂರಕವಾಗುವಂತೆ ವಿತರಿಸುವುದನ್ನು ಖಾತ್ರಿಪಡಿಸಿಕೊಳ್ಳವಂತೆ ಸರ್ಕಾರಕ್ಕೆ  ನಿರ್ದೇಶಿಸುತ್ತದೆ. ವಿಧಿ 39(c) ಯು ಸಂಪತ್ತು ಮತ್ತು ಉತ್ಪಾದನಾ ಸಾಧನಗಳು ಸಾರ್ವಜನಿಕ ಹಿತಕ್ಕೆ ಧಕ್ಕೆಯಾಗುವಂತೆ ಒಂದೆಡೆ ಕೇಂದ್ರೀಕೃತವಾಗುವುದನ್ನು ತಡೆಯಲು ಪ್ರಭುತ್ವಕ್ಕೆ ನಿರ್ದೇಶಿಸುತ್ತದೆ. ವಿಧಿ 46 ಯು ದುರ್ಬಲ ವರ್ಗಗಳ, ಅದರಲ್ಲೂ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ಉತ್ತೇಜಿಸಲು ಮತ್ತು ಅವರನ್ನು ಸಾಮಾಜಿಕ ಅನ್ಯಾಯ ಹಾಗೂ ಎಲ್ಲಾ ರೀತಿಯ ಶೋಷಣೆಗಳಿಂದ ರಕ್ಷಿಸುವ ಕರ್ತವ್ಯವನ್ನು ಪ್ರಭುತ್ವದ ಮೇಲೆ ಹೊರಿಸುತ್ತದೆ.

ಈ ಕಾಯ್ದೆಗೆ ಸಂವಿಧಾನದ ವಿಧಿ 31C ಅಡಿಯಲ್ಲಿ ಹೆಚ್ಚಿನ ರಕ್ಷಣೆ ಇದೆ. ವಿಧಿ 31C ಯು ನಿರ್ದೇಶಕ ತತ್ವಗಳನ್ನು ಅನುಷ್ಠಾನಗೊಳಿಸಲು ರೂಪಿಸಲಾದ ಕಾನೂನುಗಳನ್ನು ವಿಧಿ 14 ಅಥವಾ 19 ರ ಅಡಿಯಲ್ಲಿ ಪ್ರಶ್ನಿಸದಂತೆ ರಕ್ಷಿಸುತ್ತದೆ. ಕಾಯ್ದೆಯ ಸೆಕ್ಷನ್ 2 ಅಡಿಯಲ್ಲೇ ಈ ಬಗ್ಗೆ ಘೋಷಣೆಯನ್ನೂ ಮಾಡಲಾಗಿದೆ.

**ಸ್ವಯಂ-ಸಂಪೂರ್ಣ ಸಂಹಿತೆ (Self-Contained Code) ಮತ್ತು ವಿಶೇಷ ಶಾಸನ ( Special Enactment)**

ಪಿಟಿಸಿಎಲ್ ಕಾಯ್ದೆಯು ಒಂದು ಸ್ವಯಂ-ಸಂಪೂರ್ಣ ಸಂಹಿತೆ ಮತ್ತು ವಿಶೇಷ ಶಾಸನವಾಗಿದ್ದು, ಮಂಜೂರಾದ ಜಮೀನುಗಳ ರಕ್ಷಣೆಗಾಗಿ ಒಂದು ಸಂಪೂರ್ಣ ಮತ್ತು

ವಿಶೇಷ ಚೌಕಟ್ಟಾಗಿ ಕಾರ್ಯನಿರ್ವಹಿಸಲು ವಿನ್ಯಾಸಗೊಳಿಸಲಾಗಿದೆ. ಒಂದು ವಿಶೇಷ ಶಾಸನವಾಗಿ, ಸಾಮಾನ್ಯ ಕಾನೂನುಗಳು ಮತ್ತು ಇದರ ನಡುವೆ ಹೊಂದಾಣಿಕೆ ಆಗದಿದ್ದಲ್ಲಿ ಈ ಕಾಯ್ದೆಯೇ ಮೇಲುಗೈ ಸಾಧಿಸುತ್ತದೆ.

ಇದಕ್ಕೆ ಸೆಕ್ಷನ್ 11 ರಲ್ಲಿ ಸ್ಪಷ್ಟ ಶಾಸನಬದ್ಧ ರೂಪವನ್ನು ನೀಡಲಾಗಿದ್ದು, ಅದನ್ನು ಇಲ್ಲಿ ಉಲ್ಲೇಖಿಸಲಾಗಿದೆ:

**ಸೆಕ್ಷನ್ 11: ಇತರೆ ಕಾನೂನುಗಳ ಮೇಲೆ ಕಾಯ್ದೆಯ ಪ್ರಾಬಲ್ಯ**

ಪ್ರಸ್ತುತ ಜಾರಿಯಲ್ಲಿರುವಂತಹ ಇನ್ನಾವುದೇ ಇತರ ಕಾಯಿದೆಗಳಲ್ಲಿ ಅಥವಾ ಸಂಪ್ರದಾಯಗಳಲ್ಲಿ, ಪದ್ಧತಿಗಳಲ್ಲಿ ಅಥವಾ ಯಾವುದೇ ಒಡಂಬಡಿಕೆ ಅಥವಾ ಯಾವುದೇ ನ್ಯಾಯಮಂಡಳಿಗಳ, ಪ್ರಾಧಿಕಾರಗಳ ಡಿಕ್ರಿ ಅಥವಾ ನ್ಯಾಯಾಲಯದ ಆದೇಶಗಳಲ್ಲೇ ಏನೇ ಭಿನ್ನತೆಯನ್ನು ಒಳಗೊಂಡಿದ್ದಾಗ್ಯೂ ಈ ಅಧಿನಿಯಮದ ಉಪಬಂಧಗಳು ಪರಿಣಾಮ ಹೊಂದಿರತಕ್ಕದ್ದು.

ಸೆಕ್ಷನ್ 11 ರ ವ್ಯಾಪ್ತಿಯು ಸಮಗ್ರವಾಗಿದೆ. ಇದು ಇತರ ಶಾಸನಗಳನ್ನು ಮಾತ್ರವಲ್ಲದೆ ಜಾರಿಯಲ್ಲಿರುವ ಸಂಪ್ರದಾಯಗಳನ್ನೂ, ರೂಢಿಗಳನ್ನೂ, ಒಪ್ಪಂದಗಳನ್ನೂ ಮತ್ತು ನ್ಯಾಯಾಲಯ ಹಾಗೂ ಟ್ರಿಬ್ಯುನಲ್‌ಗಳ ಆದೇಶಗಳನ್ನೂ ಬದಿಗೆ ಸರಿಸುತ್ತದೆ. ಈ ಕಾಯ್ದೆಯು ಎಸ್‌ಸಿ/ಎಸ್‌ಟಿ ಮಂಜೂರಾತಿದಾರರಿಗೆ ವಿಸ್ತರಿಸುವಂತಹ ರಕ್ಷಣೆಯು ಬೇರೆ ಯಾವುದೇ ಕಾನೂನಿನ ಮೂಲದಿಂದ ದುರ್ಬಲಗೊಳ್ಳದಂತೆ ರಕ್ಷಿಸಲ್ಪಟ್ಟಿದೆ.

ಪಿಟಿಸಿಎಲ್ ಕಾನೂನು ಹೋರಾಟಗಳಲ್ಲಿ ಸೆಕ್ಷನ್ 11 ಅತ್ಯಂತ ನಿರ್ಣಾಯಕ ಪಾತ್ರವನ್ನು ವಹಿಸಿದೆ. ನ್ಯಾಯಾಲಯಗಳು ಹಲವಾರು ಸಂದರ್ಭಗಳಲ್ಲಿ ಸಾಮಾನ್ಯ ಆಸ್ತಿ ಕಾನೂನು ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆಯಿಂದ ಕಾಲಮಿತಿ (limitation), ಪ್ರತಿಕೂಲ ಸ್ವಾಧೀನ (adverse possession), ರೆಸ್ ಜುಡಿಕಾಟಾ (res judicata - ಈಗಾಗಲೇ ಸಮರ್ಥ ನ್ಯಾಯಾಲಯವು ಅಂತಿಮವಾಗಿ ತೀರ್ಮಾನಿಸಿರುವ ಅದೇ ವಿಷಯವನ್ನು, ಅದೇ ಪಕ್ಷಗಳ ನಡುವೆ ಮತ್ತೆ ವಿಚಾರಣೆಗೆ ಒಳಪಡಿಸಬಾರದು ಎಂಬ ಕಾನೂನು ತತ್ವವೇ 'res judicata') ಮುಂತಾದ ಸಿದ್ಧಾಂತಗಳನ್ನು ಪಿಟಿಸಿಎಲ್ ನಡಾವಳಿಗಳಲ್ಲಿ ಸೇರಿಸಿಕೊಂಡಿವೆ . ಹೀಗೆ ಮಾಡುವುದು ಸೆಕ್ಷನ್ 11 ಕ್ಕೆ ವಿರುದ್ಧವಾಗಿದೆ. ಈ ಕಾಯ್ದೆಯೇ ಒಂದು ಸಂಪೂರ್ಣ ಸಂಹಿತೆಯಾಗಿದೆ. ಇದು ಸೃಷ್ಟಿಸುವ ಹಕ್ಕುಗಳು, ಇದು ಒಪ್ಪಿಕೊಳ್ಳುವ ಪ್ರತಿರಕ್ಷಣೆಗಳು ಮತ್ತು ಇದು ಒದಗಿಸುವ ಪರಿಹಾರಗಳನ್ನು ಅದರದೇ ಆದ ಚೌಕಟ್ಟಿನೊಳಗೆ ಕೂಲಂಕಷವಾಗಿ ವ್ಯಾಖ್ಯಾನಿಸಲಾಗಿದೆ. ಈ ವರದಿಯ ಸೆಕ್ಷನ್ 4 ರಲ್ಲಿ ವಿವರಿಸಲಾದಂತೆ, ಸೆಕ್ಷನ್ 11 ಅನ್ನು ನಿರ್ಲಕ್ಷಿಸಿರುವುದರಿಂದಲೇ ನ್ಯಾಯಾಲಯಗಳು ಕಾಯ್ದೆಯು ನಿಷೇಧಿಸಿರುವ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಈ ಮೂಲಕ ಕಾಯ್ದೆಯ ಮೂಲ ಉದ್ದೇಶವನ್ನೇ ಸೋಲಿಸಿದೆ.

**ಕಾಯ್ದೆಯು ಕಲ್ಯಾಣ ಮತ್ತು ಪರಿಹಾರಾತ್ಮಕ ಶಾಸನವಾಗಿದೆ**

ಪಿಟಿಸಿಎಲ್ ಕಾಯ್ದೆಯು ವಿಶೇಷವಾಗಿ ಗುರುತಿಸಲ್ಪಟ್ಟಿರುವ ಕಲ್ಯಾಣ ಮತ್ತು

ಪರಿಹಾರಾತ್ಮಕ ಶಾಸನಗಳ ವರ್ಗಕ್ಕೆ ಸೇರಿದೆ. ಇದನ್ನು ದುರ್ಬಲ ವರ್ಗಗಳ ರಕ್ಷಣೆಗಾಗಿ ಜಾರಿಗೆ ತರಲಾಗಿದ್ದು, ಆ ಚೌಕಟ್ಟಿನಲ್ಲಿಯೇ ಈ ಕಾಯ್ದೆಯನ್ನು ಅರ್ಥೈಸಬೇಕಿದೆ. ಕಲ್ಯಾಣ ಶಾಸನಗಳನ್ನು ವಿಸ್ತಾರವಾಗಿ, ಅದು ಯಾರ ರಕ್ಷಣೆಗಾಗಿ ರೂಪಿಸಲಾಗಿದೆಯೋ, ಆ ವರ್ಗದ ಪರವಾಗಿ ಅರ್ಥೈಸಬೇಕು. ಅಲ್ಲದೇ, ಯಾವುದೇ ಸಂದಿಗ್ಧತೆಯನ್ನು ಕಾಯ್ದೆಯು ಯಾರ ವಿರುದ್ಧ ಕಾರ್ಯನಿರ್ವಹಿಸುತ್ತದೆಯೋ ಅವರ ಪರವಾಗಿ ಅಲ್ಲದೆ ಫಲಾನುಭವಿಯ ಪರವಾಗಿಯೇ ಬಗೆಹರಿಸಬೇಕು ಎಂಬುದು ಕಾನೂನಿನ ಸ್ಥಾಪಿತ ನಿಯಮ. ಪಿಟಿಸಿಎಲ್ ಕಾಯ್ದೆಯ ಫಲಾನುಭವಿಗಳು ಐತಿಹಾಸಿಕವಾಗಿ ಭೂವಂಚಿತರಾದ ಸಮುದಾಯಗಳ ಸದಸ್ಯರಾಗಿದ್ದಾರೆ ಮತ್ತು ತಮ್ಮ ಹಕ್ಕುಗಳನ್ನು ಪ್ರತಿಪಾದಿಸಿಕೊಳ್ಳಲು ಕಾನೂನು ವ್ಯವಸ್ಥೆಯ ಮೊರೆಹೋಗುವ ಅವಕಾಶದಿಂದಲೂ ಅವರನ್ನು ತಡೆಯಲಾಗರುವ ಕಾರಣ ಈ ಸ್ಥಾಪಿತ ನಿಯಮವು ಪಿಟಿಸಿಎಲ್ ಕಾಯ್ದೆಗೆ ವಿಶೇಷವಾಗಿ ಅನ್ವಯಿಸುತ್ತದೆ.

ಸುಪ್ರೀಂ ಕೋರ್ಟ್ ಮಂಚೇಗೌಡ ಮತ್ತು ಇತರರು ವಿರುದ್ಧ ಕರ್ನಾಟಕ ಸರ್ಕಾರ [(1984) 3 SCC 301] ಪ್ರಕರಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವ, ರಕ್ಷಿಸುವ ಮತ್ತು ಉತ್ತೇಜಿಸುವ ಪ್ರಭುತ್ವದ ನೀತಿಯು ಸಂವಿಧಾನದ ರಾಜ್ಯ ನಿರ್ದೇಶಕ ತತ್ವಗಳಿಗೆ ಅನುಗುಣವಾಗಿದೆ ಎಂದು ದೃಢೀಕರಿಸಿ ಕಾಯ್ದೆಯ ಪರಿಹಾರಾತ್ಮಕ ಸ್ವರೂಪದ ಕಾರಣದಿಂದಾಗಿಯೇ ಅದರ ಸಿಂಧುತ್ವವನ್ನು ಎತ್ತಿಹಿಡಿಯಿತು. ಲಿಂಗಪ್ಪ ಪೋಚಣ್ಣ ವಿರುದ್ಧ ಮಹಾರಾಷ್ಟ್ರ ಸರ್ಕಾರ [AIR 1985 SC 389] ಪ್ರಕರಣದಲ್ಲಿ ನ್ಯಾಯಾಲಯವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಮಹಾರಾಷ್ಟ್ರದ ಇಂತಹುದೇ ಒಂದು ಶಾಸನವನ್ನು ಅಸಮಾನರ ನಡುವಿನ ವಹಿವಾಟುಗಳಿಂದ ಉಂಟಾದ ಅನ್ಯಾಯವನ್ನು ಸರಿಪಡಿಸುವ ವಿತರಣಾ ನ್ಯಾಯದ ಸಾಧನ ಎಂದು ಬಣ್ಣಿಸಿತು. ಅಲ್ಲದೇ, ಸಾಮರ್ಥ್ಯ ಹಾಗೂ ಅಗತ್ಯದ ಆಧಾರದಲ್ಲಿ ಸಂಪತ್ತಿನ ನ್ಯಾಯೋಚಿತ ವಿಭಜನೆಯನ್ನು ಖಚಿತಪಡಿಸಿಕೊಳ್ಳುವ ತತ್ವವನ್ನು ಎತ್ತಿಹಿಡಿಯಿತು.

ಸಾಮಾಜಿಕ ಮತ್ತು ಆರ್ಥಿಕ ನ್ಯಾಯದ ಸಾಂವಿಧಾನಿಕ ಸಾಧನವಾಗಿ, ಸಾಮಾನ್ಯ ಕಾನೂನನ್ನು ಮೀರಿಸುವ ಸ್ವಯಂ-ಸಂಪೂರ್ಣ ವಿಶೇಷ ಶಾಸನವಾಗಿ ಮತ್ತು ಕಾನೂನನ್ನು ವಿಸ್ತಾರವಾಗಿ ಅರ್ಥೈಸುವ ಮೂಲಕ ಫಲಾನುಭವಿಗಳ ಪರ ವಹಿಸಬೇಕಾದ ಕಲ್ಯಾಣ ಶಾಸನವಾಗಿದೆ ಈ ಪಿಟಿಸಿಎಲ್ ಕಾಯ್ದೆ. ಈ ಚೌಕಟ್ಟಿನಲ್ಲಿಯೇ ಪಿಟಿಸಿಎಲ್ ಕಾಯ್ದೆಯನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಅನುಷ್ಠಾನಗೊಳಿಸಬೇಕು.

**2.2 ಕಾನೂನು ಚೌಕಟ್ಟು (The Legal Framework)**

ಎಸ್‌ಸಿ/ಎಸ್‌ಟಿ ಸಮುದಾಯಗಳಿಗೆ ಮಂಜೂರಾದ ಜಮೀನುಗಳನ್ನು ಪರಭಾರೆಯಿಂದ ರಕ್ಷಿಸುವುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ಪರಭಾರೆಯಾದ ಸಂದರ್ಭದಲ್ಲಿ ಅದನ್ನು ಮೂಲ ಮಂಜೂರಾತಿದಾರರಿಗೆ ಅಥವಾ ಅವರ ಕಾನೂನುಬದ್ಧ ವಾರಸುದಾರರಿಗೆ ಹಿಂದಿರುಗಿಸುವ ಒಂದೇ ಉದ್ದೇಶದಿಂದ, ಪಿಟಿಸಿಎಲ್ ಕಾಯ್ದೆಯನ್ನು ವಿನ್ಯಾಸಗೊಳಿಸಿ ಸಮಗ್ರ ಶಾಸನಬದ್ಧ ಚೌಕಟ್ಟು ಒಂದನ್ನು ನಿರ್ಮಿಸಲಾಗಿದೆ

ಪಿಟಿಸಿಎಲ್ ಕಾಯ್ದೆಯನ್ನು, ಅಂದರೆ ಅದರ ಮೂಲ ಶಾಸನವನ್ನು ಮತ್ತು 1984 ರಲ್ಲಿ ಕಾಯ್ದೆಗೆ ತರಲಾದ ತಿದ್ದುಪಡಿಯನ್ನು ಸಂವಿಧಾನದ 9 ನೇ ಶೆಡ್ಯೂಲ್‌ನ ನಮೂದು (Entry) 222 (ದಿನಾಂಕ 07.06.1990) ಮತ್ತು ನಮೂದು (Entry) 267 (ದಿನಾಂಕ 30.08.1995) ರ ಅಡಿಯಲ್ಲಿ ಸೇರಿಸಲಾಗಿದೆ.

**ಸೆಕ್ಷನ್ 4(1):** ಯಾವುದೇ ಕಾಯಿದೆ, ಕರಾರು ಒಪ್ಪಂದ ಅಥವಾ ಲಿಖಿತ ಪತ್ರದಲ್ಲಿ ಏನೇ ಒಳಗೊಂಡಿದ್ದಾಗ್ಯೂ ಸಹ,

ಮಂಜೂರಾತಿಯ ಷರತ್ತುಗಳನ್ನು ಉಲ್ಲಂಘಿಸಿ, ಇಲ್ಲವೇ ಅಂತಹ ಮಂಜೂರಾತಿಗೆ ಅವಕಾಶ ಕಲ್ಪಿಸುವ ಕಾನೂನನ್ನು ಉಲ್ಲಂಘಿಸಿ ಯಾವುದೇ ಮಂಜೂರಾದ ಜಮೀನನ್ನು ವರ್ಗಾಯಿಸುವುದು "ಅನೂರ್ಜಿತ ಮತ್ತು ಪರಿಣಾಮಶೂನ್ಯವಾಗಿರುತ್ತದೆ ಮತ್ತು ಅಂತಹ ಭೂಮಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು, ಅಧಿಕಾರ ಅಥವಾ ಹಿತಾಸಕ್ತಿಯನ್ನು ನೀಡತಕ್ಕದ್ದಲ್ಲ ಅಥವಾ ಅಂತಹ ಪರಭಾರೆಗೆ ಸಂಬಂಧಿಸಿದಂತೆ ನೀಡಲಾಗಿದೆಯೆಂದು ಪರಿಭಾವಿಸತಕ್ಕದ್ದಲ್ಲ." ಎಂದು ಕಾಯ್ದೆಯ ಸೆಕ್ಷನ್ 4(1) ನಿಬಂಧಿಸುತ್ತದೆ. ಶಾಸನವು ಜಾರಿಯಾಗುವ ಮೂಲಕ ಸ್ವಯಂಚಾಲಿತವಾಗಿಯೇ ಇದರ ಪರಿಣಾಮವೂ ಜಾರಿಗೆ ಬರುತ್ತದೆ. ವರ್ಗಾವಣೆಯು ಪ್ರಾರಂಭದಿಂದಲೇ ಪರಿಣಾಮ ಶೂನ್ಯವಾಗಿರುತ್ತದೆ (void ab initio). ಈ ವಹಿವಾಟು ಕಾನೂನಿನ ಅಡಿಯಲ್ಲಿ ಶೂನ್ಯವಾಗಿರುವ ಕಾರಣ, ಈ ವಹಿವಾಟಿನ ಮೂಲಕ ಯಾವುದೇ ಹಕ್ಕು, ಶೀರ್ಷಿಕೆ ಅಥವಾ ಹಿತಾಸಕ್ತಿಯು ಖರೀದಿದಾರನಿಗೆ ವರ್ಗಾವಣೆಯಾಗುವುದಿಲ್ಲ.

ಇದಕ್ಕೆ ಇರುವ ಕೇವಲ ಎರಡು ವಿನಾಯಿತಿಗಳೆಂದರೆ - ಸರ್ಕಾರದ ಪೂರ್ವ ಅನುಮತಿಯೊಂದಿಗೆ ಮಾಡಿದ ವರ್ಗಾವಣೆಗಳು [ಸೆಕ್ಷನ್ 4(2)], ಮತ್ತು ಸುಪ್ರೀಂ ಕೋರ್ಟ್ ಮಂಚೇಗೌಡ ಪ್ರಕರಣದಲ್ಲಿ ಗುರುತಿಸಿದಂತೆ, ಕಾಯ್ದೆ ಜಾರಿಗೆ ಬರುವ ಮುನ್ನವೇ prescription ಆಧಾರದ ಮೇಲೆ ಹಕ್ಕುಗಳು ಪರಿಪೂರ್ಣತೆ ಪಡೆದುಕೊಂಡಿರುವುದು. ಈ ಎರಡು ವಿನಾಯಿತಿಗಳನ್ನು ಹೊರತುಪಡಿಸಿ, ಮಂಜೂರಾದ ಜಮೀನಿನ ಯಾವುದೇ ವರ್ಗಾವಣೆಯನ್ನು ಮಾನ್ಯ ಮಾಡಲು ಸಾಧ್ಯವಿಲ್ಲ.

ಸಿವಿಲ್ ನ್ಯಾಯಾಲಯ ಅಥವಾ ಯಾವುದೇ ಇತರ ಪ್ರಾಧಿಕಾರದ ಡಿಕ್ರಿ ಅಥವಾ ಆದೇಶದ ಅನುಷ್ಠಾನದ ಮೂಲಕ ಮಂಜೂರಾದ ಜಮೀನಿನ ಮಾರಾಟವನ್ನು ಕಾಯ್ದೆಯು ನಿಷೇಧಿಸುತ್ತದೆ [ಸೆಕ್ಷನ್ 4(3)]. ಇದು ನ್ಯಾಯಾಲಯದ ನಿರ್ದೇಶನದ ಮೇರೆಗೆ ನಡೆಯುವ ವಹಿವಾಟುಗಳನ್ನು ಸಹ ಮಂಜೂರಾತಿದಾರರ ಹಕ್ಕುಗಳನ್ನು ಸೋಲಿಸುವ ಸಾಧನವಾಗಿ ಬಳಸದಂತೆ ಖಚಿತಪಡಿಸುತ್ತದೆ.

ಜಮೀನು ಮಂಜೂರಾತಿಯ ಷರತ್ತುಗಳಿಗೆ ವಿರುದ್ಧವಾದ ಅಥವಾ ಅಂತಹ ಮಂಜೂರಾತಿಯನ್ನು ಅನುವುಮಾಡು ಕೊಡುವ ಕಾನೂನಿಗೆ ವಿರುದ್ಧವಾದ, ಇಲ್ಲವೇ ಪಿಟಿಸಿಎಲ್ ಕಾಯ್ದೆಯ ಸೆಕ್ಷನ್ 4(2) ಕ್ಕೆ ವಿರುದ್ಧವಾದ ಯಾವುದೇ ವಹಿವಾಟು ಕೇವಲ ಶೂನ್ಯ ಮತ್ತು ಅಸಿಂಧು ಮಾತ್ರವಲ್ಲದೆ, ಸೆಕ್ಷನ್ 8 ರ ಅಡಿಯಲ್ಲಿ ಕ್ರಿಮಿನಲ್ ಅಪರಾಧವಾಗಿದ್ದು, ಅದಕ್ಕೆ

ಶಿಕ್ಷೆಯಾಗಿ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು/ಅಥವಾ ದಂಡ ವಿಧಿಸಬಹುದಾಗಿದೆ. ಅದರಂತೆ, ಪಿಟಿಸಿಎಲ್ ಕಾಯ್ದೆಯ ಚೌಕಟ್ಟಿನೊಳಗೆ "ಕಾನೂನು ಮಾನ್ಯ ಖರೀದಿದಾರ" (bonafide purchaser) ಎಂಬ ಪರಿಕಲ್ಪನೆಗೆ ಅವಕಾಶವಿಲ್ಲ.

ಆಸಕ್ತ ವ್ಯಕ್ತಿಗಳು ಅರ್ಜಿ ಸಲ್ಲಿಸುವ ಮೂಲಕ ಅಥವಾ ಯಾವುದೇ ವ್ಯಕ್ತಿಯು ಲಿಖಿತವಾಗಿ ನೀಡಿದ ಮಾಹಿತಿಯ ಮೂಲಕ ಇಲ್ಲವೇ ಸ್ವಯಂಪ್ರೇರಿತವಾಗಿ (suo-motu) ಪಿಟಿಸಿಎಲ್ ಕಾಯ್ದೆಯ ಸೆಕ್ಷನ್ 4 ರ ಉಲ್ಲಂಘನೆ ಕಂಡುಬಂದಲ್ಲಿ, ಸಹಾಯಕ ಕಮಿಷನರ್ (Assistant Commissioner) ಅವರು ಪ್ರಕರಣ ದಾಖಲಿಸಿಕೊಂಡು, ವಿಚರಣೆ ನಡೆಸಿ ನಂತರ ಅಗತ್ಯ ಆದೇಶಗಳನ್ನು ಹೊರಡಿಸಬೇಕಾಗುತ್ತದೆ.

ಕಾಯ್ದೆಯ ಸೆಕ್ಷನ್ 5(1)ರ ಅಡಿಯಲ್ಲಿ ಜಮೀನನ್ನು ಮೂಲ ಮಂಜೂರಾತಿದಾರರಿಗೆ ಅಥವಾ ಅವರ ಕಾನೂನುಬದ್ಧ ವಾರಸುದಾರರಿಗೆ ಮರುಸ್ಥಾಪಿಸಬೇಕಾಗುತ್ತದೆ. ಹಿಂದಿರುಗಿಸಲು ಸಾಧ್ಯವಿಲ್ಲದಿದ್ದಲ್ಲಿ, ಎಲ್ಲ ಋಣಭಾರಗಳಿಂದ ಮುಕ್ತವಾಗಿ (free from encumbrances) ಜಮೀನು ಸರ್ಕಾರದ ವಶವಾಗುತ್ತದೆ.

ಕಾಯ್ದೆಯ ಇನ್ನೂ ಎರಡು ವೈಶಿಷ್ಟ್ಯತೆಗಳಿಗೆ ವಿಶೇಷ ಒತ್ತು ನೀಡಬಹುದಾದರೆ :

- **ಮೊದಲನೆಯದಾಗಿ,** ಮಂಜೂರಾದ ಜಮೀನನ್ನು ವರ್ಗಾಯಿಸುವ ಯಾವುದೇ ದಾಖಲೆಯ ನೋಂದಣಿಯನ್ನು ನೊಂದಣಿ ಪ್ರಾಧಿಕಾರಗಳ ಅಧಿಕಾರಿಗಳು ನಿರಾಕರಿಸುವುದು ಕಾನೂನಿನ ಅಡಿಯಲ್ಲಿ ಅವರ ಕರ್ತವ್ಯವಾಗಿರುತ್ತದೆ ಎಂಬುದಾಗಿ ಕಾಯ್ದೆಯು [ ಸೆಕ್ಷನ್ 6] ನಿರ್ದಿಷ್ಟವಾಗಿ ಸೂಚಿಸುತ್ತದೆ. ಸಬ್-ರೆಜಿಸ್ಟ್ರಾರ್ (Sub-Registrar) ಅವರು ಕಾವಲುಗಾರನಾಗಿ ಕಾರ್ಯ ನಿರ್ವಹಿಸ ಬೇಕಾಗಿದ್ದು, ನೋಂದಣಿ ಹಂತದಲ್ಲೇ ಪರಭಾರೆಗಳನ್ನು ತಡೆಯಲು ಅವರು ಕಾನೂನು ಪಾಲಿಸುವುದು ಅತ್ಯಗತ್ಯವಾಗಿದೆ. ಆದರೆ ಈ ಕರ್ತವ್ಯ ನಿರ್ವಹಣೆಯಲ್ಲಿನ ವ್ಯವಸ್ಥಿತ ವೈಫಲ್ಯದಿಂದಾಗಿ, ಸಬ್-ರೆಜಿಸ್ಟ್ರಾರ್‌ಗಳು ಮಂಜೂರಾದ ಜಮೀನುಗಳ ವರ್ಗಾವಣೆಯನ್ನು ನಿಯಮಿತವಾಗಿ ನೋಂದಾಯಿಸುತ್ತಿದ್ದು, ಇದರಿಂದಾಗಿ ಕಾಯ್ದೆಯು ತಡೆಯಲು ಬಯಸಿದ್ದ ಪರಭಾರೆಗಳಿಗೆ ಅವಕಾಶ ಮಾಡಿಕೊಡಲಾಗಿದೆ.
- **ಎರಡನೆಯದಾಗಿ,** ಕಾಯ್ದೆಯು ಸೆಕ್ಷನ್ 11 ರ ಅಡಿಯಲ್ಲಿ ಇತರ ಯಾವುದೇ ಕಾನೂನು, ಸಂಪ್ರದಾಯ, ರೂಢಿ, ಒಪ್ಪಂದ ಮತ್ತು ಯಾವುದೇ ನ್ಯಾಯಾಲಯ, ಟ್ರಿಬ್ಯುನಲ್ ಅಥವಾ ಇತರ ಪ್ರಾಧಿಕಾರದ ಡಿಕ್ರಿ ಅಥವಾ ಆದೇಶವನ್ನೂ ಮೀರಿರುತ್ತದೆ. ಇಂತಹ ಸರ್ವೋಚ್ಚ ಪ್ರಾಬಲ್ಯದ ಉದ್ದೇಶವೇ ಎಸ್‌ಸಿ/ಎಸ್‌ಟಿ ಮಂಜೂರಾತಿ ಜಮೀನುಗಳ ರಕ್ಷಣೆಯಾಗಿದ್ದು, ಯಾವುದೇ ಇತರ ಕಾನೂನುಗಳಲ್ಲಿರುವ ವಿರುದ್ಧ ನಿಬಂಧನೆಗಳಿಂದಲೋ ಅಥವಾ ಮಂಜೂರಾತಿದಾರರ ಅರಿವಿಲ್ಲದೆ ಅಥವಾ ಭಾಗವಹಿಸುವಿಕೆಯಿಲ್ಲದೆಯೇ ಪಡೆದಿರಬಹುದಾದ ಸಿವಿಲ್ ನ್ಯಾಯಾಲಯಗಳ ಆದೇಶಗಳಿಂದ ದುರ್ಬಲಗೊಳ್ಳದಂತೆ ತಡೆಯುವುದಾಗಿದೆ.

ಮುಂದಿನ ವಿಭಾಗಗಳಲ್ಲಿ ದಾಖಲಿಸಲಾಗಿರುವ ಕಾಯ್ದೆಯ ಅನುಷ್ಠಾನದ ವೈಫಲ್ಯಗಳನ್ನು ಈ ಕಾನೂನು ಚೌಕಟ್ಟಿನ ಹಿನ್ನೆಲೆಯಲ್ಲಿಯೇ ಮೌಲ್ಯಮಾಪನ ಮಾಡಬೇಕಿರುತ್ತದೆ.

## 3. ಸಾರ್ವಜನಿಕ ಅಹವಾಲಿನಲ್ಲಿ ಸಂತ್ರಸ್ತರ ಟೆಸ್ಟಿಮೋನಿಗಳು

ಸಾರ್ವಜನಿಕ ಅಹವಾಲಿನಲ್ಲಿ ಜ್ಯೂರಿ ಸಮಿತಿಯು ಏಳು ಜಿಲ್ಲೆಗಳಾದ ಬೆಂಗಳೂರು ನಗರ ಮತ್ತು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ರಾಮನಗರ ಮತ್ತು ದಾವಣಗೆರೆಯ ಹತ್ತು ಮಂದಿ ಮಂಜೂರಾತಿದಾರರು ಹಾಗೂ ಅವರ ಕಾನೂನುಬದ್ಧ ವಾರಸುದಾರರ ಟೆಸ್ಟಿಮೋನಿಗಳನ್ನು ಆಲಿಸಲಾಯಿತು. ಒಟ್ಟಾಗಿ ನೋಡಿದಾಗ, ಈ ಟೆಸ್ಟಿಮೋನಿಗಳು ಪಿಟಿಸಿಎಲ್ ಕಾಯ್ದೆಯ ಅನುಷ್ಠಾನದಲ್ಲಿ ನಿರಂತರವಾಗಿ ಕಂಡುಬರುವ ಮತ್ತು ಅತ್ಯಂತ ಕಳವಳಕಾರಿಯಾದ ಒಂದು ಧೋರಣೆಯನ್ನು ಬಹಿರಂಗಪಡಿಸುತ್ತವೆ.

### 3.1 ಪ್ರಕರಣಗಳ ಸಾರಾಂಶ

ಪ್ರತಿಯೊಂದು ಪ್ರಕರಣವನ್ನು ಇಲ್ಲಿ ಕೆಳಗೆ ಸಂಕ್ಷಿಪ್ತವಾಗಿ ನೀಡಲಾಗಿದೆ:

### ಪ್ರಕರಣ 1: ನೆಕ್ಕಂಟಿ ತೀರ್ಪಿನಲ್ಲಿನ ಮಂಜೂರಾತಿದಾರರ ಕಾನೂನುಬದ್ಧ ವಾರಸುದಾರರಾದ ಶ್ರೀ ರಾಜಪ್ಪ ಅವರ ಪ್ರಕರಣ

ಬಹುಶಃ ಶ್ರೀ ರಾಜಪ್ಪ ಅವರ ಪ್ರಕರಣದಿಂದ ಪ್ರಾರಂಭಿಸುವುದೇ ಅತ್ಯಂತ ಸೂಕ್ತವೆನಿಸುತ್ತದೆ. ನೆಕ್ಕಂಟಿ ರಾಮಲಕ್ಷ್ಮಿ ಪ್ರಕರಣದ ತೀರ್ಪಿಗೆ ಅಂತಿಮವಾಗಿ ಕಾರಣವಾದ ಪ್ರಕರಣದಲ್ಲಿ ಅವರು ಮಂಜೂರಾತಿದಾರರ ಕಾನೂನುಬದ್ಧ ವಾರಸುದಾರರಾಗಿದ್ದಾರೆ. ಈ ತೀರ್ಪು ಕರ್ನಾಟಕದಾದ್ಯಂತ ಪಿಟಿಸಿಎಲ್ ಕಾಯ್ದೆಯನ್ನು ವ್ಯವಸ್ಥಿತವಾಗಿ ದುರ್ಬಲಗೊಳಿಸಲು ದಾರಿ ಮಾಡಿಕೊಟ್ಟಿತು. ಇವರ ಪ್ರಕರಣವು ಕೇವಲ ವೈಯಕ್ತಿಕ ಅನ್ಯಾಯದ ಉದಾಹರಣೆಯಲ್ಲ; ಇದು ಈ ವರದಿಯು ದಾಖಲಿಸುವ ವೈಫಲ್ಯದ ಪ್ರತಿಯೊಂದು ಆಯಾಮವನ್ನು ಪ್ರದರ್ಶಿಸುತ್ತದೆ.



ರಾಜಪ್ಪ ಅವರ ಮನೆ - ದೊಡ್ಡಘಟ್ಟ ಗ್ರಾಮ, ಚನ್ನಗಿರಿ ತಾಲ್ಲೂಕು

ಇಂದು, ನಾವೆಲ್ಲರೂ ಈ ತೀರ್ಪನ್ನು ಖರೀದಿದಾರರಾದ ನೆಕ್ಕಂಟಿ ರಾಮಲಕ್ಷ್ಮಿ ಅವರ ಹೆಸರಿನಿಂದ ಗುರುತಿಸುತ್ತೇವೆ, ಆದರೆ ಮಂಜೂರಾತಿದಾರರಾದ ಶ್ರೀ ರಾಜಪ್ಪ ಯಾರಿಗೂ ತಿಳಿದಿಲ್ಲ. ಇದು ಆಕಸ್ಮಿಕವಲ್ಲ; ಈ ವಿವಾದದ ಎರಡೂ ಬದಿಗಳನ್ನು ಕಾನೂನು ಹೇಗೆ ಅರ್ಥೈಸಿದೆ ಮತ್ತು ಅನುಷ್ಠಾನಗೊಳಿಸಿದೆ ಎಂಬುದರ ನಿಖರವಾದ

ಪ್ರತಿಬಿಂಬವಾಗಿದೆ.

ಅವರ ಕುಟುಂಬವು ಪರಿಶಿಷ್ಟ ಜಾತಿಗೆ ಸೇರಿದೆ. ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ದೊಡ್ಡಘಟ್ಟ ಗ್ರಾಮದ 2.05 ಏಕರೆ ಜಮೀನನ್ನು 1963-64 ರಲ್ಲಿ ಅವರ ತಂದೆ ಕರಿಯಪ್ಪ ಅವರಿಗೆ ಹದಿನೈದು ವರ್ಷಗಳ ಪರಭಾರೆ-ರಹಿತ ಷರತ್ತಿನೊಂದಿಗೆ ಮಂಜೂರು ಮಾಡಲಾಗಿತ್ತು. 1977 ರಲ್ಲಿ, ಮೂಲ ಮಂಜೂರಾತಿದಾರರಂತೆ ನಟಿಸಿದ, ಅದೇ ಹೆಸರಿನ(ಕರಿಯಪ್ಪ) ಅಪರಿಚಿತ ವ್ಯಕ್ತಿಯೊಬ್ಬರು ವಂಚನೆಯಿಂದ ಮೇಕೆ ನರಸಿಂಹ ಮೂರ್ತಿ ಎಂಬುವವರಿಗೆ 1.02 ಏಕರೆ ಮಾತ್ರ ಕ್ರಯಪತ್ರ ಮಾಡಿಕೊಡುತ್ತಾರೆ. ನಂತರ ಮೇಕೆ ನರಸಿಂಹ ಮೂರ್ತಿಯವರು ತಾಲೂಕು ಕಚೇರಿಗೆ ದಾಖಲೆ ಬದಲಾವಣೆ ಮಾಡಿಕೊಳ್ಳಲು ಅರ್ಜಿ ಸಲ್ಲಿಸಿದರು. ಅದನ್ನು ಪರಿಶೀಲನೆ ಮಾಡಿದ ತಾಲೂಕು ಪ್ರಾಧಿಕಾರದವರು ಕ್ರಯ ಮಾಡಿಕೊಟ್ಟ ವ್ಯಕ್ತಿಗೂ ಮೂಲ ಮಂಜೂರುದಾರರಿಗೂ ಯಾವುದೇ ಸಂಬಂಧವಿಲ್ಲದ ಕಾರಣ ಅವರ ಅರ್ಜಿಯನ್ನು (MR ನಂಬರ್ 60/1977-78) ವಜಾ ಮಾಡಿರುತ್ತಾರೆ. ಏಳು ವರ್ಷದ ನಂತರ, 1984 ರಲ್ಲಿ ಪಕ್ಕದ ಗ್ರಾಮವಾದ ಕಬಳ್ಳದ ರೆಡ್ಡಿ ಸಮುದಾಯದ ಬಲಾಢ್ಯಯರಾದ ನೆಕ್ಕಂಟಿ ರಾಮಲಕ್ಷ್ಮಿ ಅವರು ತಿರಸ್ಕೃತ ಕ್ರಯ ಪತ್ರವನ್ನು ಆಧಾರವಾಗಿಟ್ಟುಕೊಂಡು, ಆ ಜಮೀನನ್ನು ಖರೀದಿ ಮಾಡಿ ತಮ್ಮ ಹೆಸರಿಗೆ ಕಂದಾಯ ದಾಖಲೆಗಳನ್ನು ಬಲವಂತವಾಗಿ ಬದಲಾಯಿಸಿಕೊಂಡರು. ನಂತರ ನೆಕ್ಕಂಟಿ ರಾಮಲಕ್ಷ್ಮಿ ಯವರು ಶ್ರೀ ರಾಜಪ್ಪ ಅವರ ಕುಟುಂಬವನ್ನು ಬಲವಂತವಾಗಿ ಒಕ್ಕಲೆಬ್ಬಿಸಿದರು. ಆಗ ಶ್ರೀ ರಾಜಪ್ಪನವರಿಗೆ ವಯಸ್ಸು 15 ವರ್ಷ. ಈ ಘಟನೆ ಸಮಯದಲ್ಲಿ ಅವರ ತಂದೆಯವರಿಗೆ ಊರಿನಲ್ಲಿ ಯಾರೂ ಕೂಡಾ ಸಹಾಯಕ್ಕೆ ಬರಲಿಲ್ಲ. ಪ್ರತಿವಾದಿಗಳು ಬಹಳ ಪ್ರಭಾವಿ ಕುಟುಂಬದವರಾಗಿದ್ದರಿಂದ ಹಾಗು ರಾಜಪ್ಪ ಅವರ ತಂದೆ ಕರಿಯಪ್ಪ ಅನಕ್ಷರಸ್ಥರಾಗಿದ್ದ ಕಾರಣ, ಅನ್ಯಾಯವನ್ನು ಎದುರಿಸಲು ಇವರಿಗೆ ಸಾಧ್ಯವಾಗಲಿಲ್ಲ.

ರಾಜಪ್ಪನವರಿಗೆ ತಿಳುವಳಿಕೆ ಬಂದ ನಂತರ ಆ ಕುಟುಂಬವು 2003-04 ರಲ್ಲಿ ಸಹಾಯಕ ಕಮಿಷನರ್ (AC) ಅವರನ್ನು ಸಂಪರ್ಕಿಸಿತು. ಎಸಿ ಅರ್ಜಿಯನ್ನು ತಿರಸ್ಕರಿಸಿದರು. ಡೆಪ್ಯುಟಿ ಕಮಿಷನರ್ (DC), ಮೇಲ್ಮನವಿಯಲ್ಲಿ ಎಸಿ ಆದೇಶವನ್ನು ರದ್ದುಗೊಳಿಸಿ ಜಮೀನು ಮರುಸ್ಥಾಪನೆಗೆ ನಿರ್ದೇಶಿಸಿದರು. ಆಗ ಕಂದಾಯ ಅಧಿಕಾರಿಗಳು ಬಂದು ಶ್ರೀ ರಾಜಪ್ಪನವರಿಗೆ ಭೂಮಿಯನ್ನು ಮರುಸ್ಥಾಪಿಸಿದರು ಹಾಗು ಖಾತೆ ಬದಲಾವಣೆ ಮಾಡಿಕೊಟ್ಟರು. ನಂತರ ಹೈಕೋರ್ಟ್ ಶ್ರೀ ರಾಜಪ್ಪ ಅವರ ಪರವಾಗಿ ಮರುಸ್ಥಾಪನೆ ಆದೇಶವನ್ನು ಎತ್ತಿಹಿಡಿಯಿತು. ಖರೀದಿದಾರರು 2006 ರಲ್ಲಿ ಸುಪ್ರೀಂ ಕೋರ್ಟ್ ಅನ್ನು ಸಂಪರ್ಕಿಸಿದರು, ಅಲ್ಲಿ ಪ್ರಕರಣವು ಹನ್ನೊಂದು ವರ್ಷಗಳ ಕಾಲ ಬಾಕಿ ಇತ್ತು. ಆ ನಡಾವಳಿಗಳಲ್ಲಿ ಯಾವುದೇ ಪ್ರಾತಿನಿಧ್ಯ ಹೊಂದಿರದ ಶ್ರೀ ರಾಜಪ್ಪ ಅವರಿಗೆ 2017 ರಲ್ಲಿ ತಮ್ಮ ವಿರುದ್ಧ ತೀರ್ಪು ಬಂದಿರುವುದು 2019 ರಲ್ಲಿ ನೆಕ್ಕಂಟಿ ರಾಮಲಕ್ಷ್ಮಿ ಅವರು ತಮ್ಮನ್ನು ಜಮೀನಿನಿಂದ ಹೊರಹಾಕುವವರೆಗೂ ತಿಳಿದಿರಲಿಲ್ಲ. ಕುಟುಂಬದ ಆರ್ಥಿಕ ಸ್ಥಿತಿ ಅತ್ಯಂತ ಹೀನಾಯವಾಗಿದ್ದು, ಅವರು ದೊಡ್ಡಘಟ್ಟ ಗ್ರಾಮದ ಸಣ್ಣ ಮನೆಯೊಂದರಲ್ಲಿ ವಾಸಿಸುತ್ತಿದ್ದಾರೆ.

**ಪ್ರಕರಣ 2:**

**ಶ್ರೀ ಕರುಣೇಶ್ (ಕೋಲಾರ)**


ಶ್ರೀ ಕರುಣೇಶ್ ಮತ್ತು ಅವರ ಪತ್ನಿ ಶ್ರೀಮತಿ ರತ್ನಮ್ಮ ಅವರ ಮನೆಯ ಮುಂದೆ

ಇವರು ಪರಿಶಿಷ್ಟ ಜಾತಿಗೆ ಸೇರಿದ್ದಾರೆ. ಕೋಲಾರ ಜಿಲ್ಲೆಯ ತಂಬಿಹಳ್ಳಿ ಗ್ರಾಮದ 2.15 acres ಜಮೀನನ್ನು ಮೂಲತಃ ಶ್ರೀ ಕರುಣೇಶ್ ಅವರ ತಾತ ಎ.ಕೆ. ಚೌಡಪ್ಪ ಅವರಿಗೆ ಮಂಜೂರು ಮಾಡಲಾಗಿತ್ತು. ತಾತನ ಮರಣದ ನಂತರ, ಕುಟುಂಬವು 1985 ರಲ್ಲಿ ಕುರುಬ ಸಮುದಾಯದ ವ್ಯಕ್ತಿಯೊಬ್ಬರಿಗೆ ವರ್ಷಕ್ಕೆ 1,000 ರೂ.ಗಳ ಗುತ್ತಿಗೆ ಮೊತ್ತಕ್ಕೆ ಹತ್ತು ವರ್ಷಗಳ ಅವಧಿಗೆ ಜಮೀನನ್ನು ಗುತ್ತಿಗೆಗೆ ನೀಡಿತು. ಕುಟುಂಬದ ತೀವ್ರ ಬಡತನ ಮತ್ತು ಇದು ಒಣ ಭೂಮಿಯಾಗಿದ್ದರಿಂದ ಹಾಗೂ ನೀರಾವರಿ ವ್ಯವಸ್ಥೆ ಮಾಡಲು ಹಣವಿಲ್ಲದ ಕಾರಣ ಮತ್ತು ಖರೀದಿದಾರರು ಒತ್ತಡ ಹೇರುತ್ತಿದ್ದರಿಂದ ಈ ರೀತಿ ಮಾಡಲಾಗಿತ್ತು. ಗುತ್ತಿಗೆದಾರರು 1994 ರಲ್ಲಿ ನಿಧನರಾದರು ಮತ್ತು ಅವರ ಮಗ ಈ ವ್ಯವಸ್ಥೆಯನ್ನು ಮುಂದುವರಿಸಿದರು. 2002-03 ರ ಸುಮಾರಿಗೆ, ಗುತ್ತಿಗೆದಾರನ ಮಗ ಇದ್ದಕ್ಕಿದ್ದಂತೆ ಪಾವತಿಯನ್ನು ನಿಲ್ಲಿಸಿ ಜಮೀನನ್ನು ಖರೀದಿಸಿರುವುದಾಗಿ ಹೇಳಿಕೊಂಡನು. ನಂತರ ಕುಟುಂಬಕ್ಕೆ ತಿಳಿದುಬಂದಿದ್ದೇನೆಂದರೆ, 1985 ರಲ್ಲಿ ಗುತ್ತಿಗೆ ಪತ್ರದ ಬದಲಿಗೆ ಕ್ರಯಪತ್ರವನ್ನು ನೋಂದಾಯಿಸಲಾಗಿತ್ತು, ಅದರಲ್ಲಿ ಮಂಜೂರಾತಿ ವರ್ಷ ಮತ್ತು ಚೆಕ್‌ಬಂದಿ ವಿವರಗಳು ಸೇರಿದಂತೆ ಹಲವಾರು ತಪ್ಪುಗಳಿದ್ದವು. ಎಸಿ 2020 ರಲ್ಲಿ ಮಂಜೂರಾತಿದಾರರ ಪರವಾಗಿ ತೀರ್ಪು ನೀಡಿದರು, ಆದರೆ ನಂತರ ಡಿಸಿ, ಹೈಕೋರ್ಟ್ ಮತ್ತು ಮತ್ತೆ ಎಸಿ ಎದುರು ನಡೆದ ನಡಾವಳಿಗಳು ಪ್ರಕರಣವನ್ನು ಕಾರ್ಯವಿಧಾನದ ಗೊಂದಲದ ಸ್ಥಿತಿಯಲ್ಲಿಟ್ಟಿವೆ; ಖರೀದಿದಾರರು ತಮ್ಮ ಪರವಾಗಿ ಯಾವುದೇ ಆದೇಶವಿಲ್ಲದಿದ್ದರೂ ತಮ್ಮ ಹೆಸರಿಗೆ ಖಾತಾ ಮತ್ತು ಆರ್‌ಟಿಸಿ ನಮೂದುಗಳನ್ನು ಪಡೆದುಕೊಂಡಿದ್ದಾರೆ. ಖರೀದಿದಾರನ ಮೊಮ್ಮಗ ಮತ್ತು ಮೊಮ್ಮಗನ ಪತ್ನಿ ಇಬ್ಬರೂ ಅದೇ ತಾಲ್ಲೂಕಿನಲ್ಲಿ ಗ್ರಾಮ ಲೆಕ್ಕಿಗರಾಗಿದ್ದಾರೆ ( VA). ಹೀಗಾಗಿ ದಾಖಲೆಗಳನ್ನು ಬದಲಾಯಿಸಲು ಅವರು ಅನಗತ್ಯ ಪ್ರಭಾವ ಬೀರಲು ಶಕ್ತರಾಗಿದ್ದರು.

**ಪ್ರಕರಣ 3: ಶ್ರೀ ನವೀನ್ (ಬೆಂಗಳೂರು ನಗರ)**

ಈ ಕುಟುಂಬವು ಪರಿಶಿಷ್ಟ ಪಂಗಡಕೆ ಸೇರಿದೆ. ಬೆಂಗಳೂರು ನಗರ ಜಿಲ್ಲೆಯ ಹೊಸಕೆರೆಹಳ್ಳಿ ಗ್ರಾಮದ 2 acres ಜಮೀನನ್ನು 1961 ರಲ್ಲಿ ಇವರ ತಾತ ಶ್ರೀ ಚಿಕ್ಕಸಿದ್ದಯ್ಯ ಅವರಿಗೆ ಮಂಜೂರು ಮಾಡಲಾಗಿತ್ತು. 1991 ರಲ್ಲಿ, ಪಶುಸಂಗೋಪನಾ ಸಾಲವನ್ನು ಕೊಡಿಸುವುದಾಗಿ ಸುಳ್ಳು ಭರವಸೆ ನೀಡಿ ತಾತನಿಂದ ಮಾರಾಟ ಒಪ್ಪಂದದ ದಾಖಲೆಗಳಿಗೆ ಸಹಿ ಹಾಕಿಸಿ ವಂಚಿಸಲಾಯಿತು. ತರುವಾಯ, ಖರೀದಿದಾರನು ಮಾರಾಟ ಒಪ್ಪಂದದ



ಶ್ರೀ ನವೀನ್ ಅವರ ತಾಯಿ, ಅವರ ಮನೆಯಲ್ಲಿ

ಅನುಷ್ಠಾನವನ್ನು ಕೋರಿ ಸಿವಿಲ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದನು. ನಂತರ ಅವನು ನವೀನ್ ಅವರ ತಂದೆಯನ್ನು ಥಳಿಸಿ ಮತ್ತು ತಾತನಿಗೆ ಬೆದರಿಕೆ ಹಾಕಿ ಸಿವಿಲ್ ನ್ಯಾಯಾಲಯದಲ್ಲಿ ರಾಜಿ ಅರ್ಜಿಯನ್ನು ಸಲ್ಲಿಸುವಂತೆ ಮಾಡಿದನು. ಭೂ ದಾಖಲೆಗಳನ್ನು ಮಾರ್ಪಡಿಸಲು ಸಿವಿಲ್ ನ್ಯಾಯಾಲಯದ ಡಿಕ್ರಿಯನ್ನು ಬಳಸಲಾಯಿತು. ಈ ಜಮೀನು ತರುವಾಯ ಹಲವಾರು ಬಾರಿ ಕೈ ಬದಲಾಯಿತು ಮತ್ತು ಕಾನೂನುಬಾಹಿರ ಲೇಔಟ್‌ನ ಭಾಗವಾಯಿತು. 2009ರಲ್ಲಿ ಪಿಟಿಸಿಎಲ್ ಕಾಯ್ದೆಯಡಿ ನಡಾವಳಿಗಳನ್ನು ಪ್ರಾರಂಭಿಸಲಾಯಿತು ಮತ್ತು 2012ರಲ್ಲಿ ಎಸಿಯಿಂದ ಅನುಕೂಲಕರ ಆದೇಶವನ್ನು ಪಡೆಯಲಾಯಿತು. ಕಾಲವಿಳಂಬದ ಆಧಾರದ ಮೇಲೆ ಡಿಸಿ ಈ ಆದೇಶವನ್ನು ರದ್ದುಗೊಳಿಸಿದರು. ಹೈಕೋರ್ಟ್‌ನಲ್ಲಿ ಸಲ್ಲಿಕೆಯಾದ ರಿಟ್ ಅರ್ಜಿಯನ್ನು ಒಂಬತ್ತು ವರ್ಷಗಳ ಕಾಲ ಆಲಿಸಿ, ನೆಕ್ಕಂಟಿ ರಾಮಲಕ್ಷ್ಮಿ ತೀರ್ಪನ್ನು ಉಲ್ಲೇಖಿಸಿ ವಜಾಗೊಳಿಸಲಾಯಿತು. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಎದುರಿನ ಮುಂದಿನ ಮೇಲ್ಮನವಿಗಳೂ ಸಹ ಕಾಲಮಿತಿಯ ಆಧಾರದ ಮೇಲೆ ವಜಾಗೊಂಡವು. ಸುಮಾರು ಹದಿನೈದು ವರ್ಷಗಳ ಸುದೀರ್ಘ ಕಾನೂನು ಹೋರಾಟದಲ್ಲಿ ಈ ಕುಟುಂಬವು ತನ್ನ ಇಡೀ ಜೀವಮಾನದ ಉಳಿತಾಯವನ್ನು ಕಳೆದುಕೊಂಡು, ತೀವ್ರ ಸಾಲದ ಸುಳಿಗೆ ಸಿಲುಕಿತು. ಅಷ್ಟೇ ಅಲ್ಲದೆ, ಈ ಅವಧಿಯಲ್ಲಿ ಕುಟುಂಬದ ಹಲವು ಸದಸ್ಯರನ್ನು ಕಳೆದುಕೊಂಡು, ಕೊನೆಗೆ ತಮ್ಮದೇ ಗ್ರಾಮದಿಂದ ವಲಸೆ ಹೋಗಬೇಕಾಯಿತು. ಪ್ರಸ್ತುತ ಈ ಕುಟುಂಬವು ಭೂಹೀನವಾಗಿಯೇ ಉಳಿದಿದ್ದು, ಬಾಡಿಗೆ ಮನೆಯಲ್ಲಿ ವಾಸಿಸುತ್ತಿದೆ.

**ಪ್ರಕರಣ 4: ಶ್ರೀಮತಿ ಜಯಮ್ಮ (ಬೆಂಗಳೂರು ನಗರ)**

ಇವರು ಪರಿಶಿಷ್ಟ ಜಾತಿಗೆ ಸೇರಿದ್ದಾರೆ. ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಉತ್ತರ ತಾಲ್ಲೂಕಿನ ಮಾಚೋಹಳ್ಳಿ ಗ್ರಾಮದ 2 ಎಕರೆ ಜಮೀನನ್ನು 1954 ರಲ್ಲಿ ಇವರ ದಿವಂಗತ ಮಾವನವರಿಗೆ (ಗಂಡನ ತಂದೆಯವರಿಗೆ) ಮಂಜೂರು ಮಾಡಲಾಗಿತ್ತು. ಇವರ ಮರಣದ ಮುಂಚೆ, ಇವರ ಸಹೋದರರು ಆಸ್ತಿ ವಿಭಜನೆಯ ನಡಾವಳಿಗಳನ್ನು ಬಳಸಿ 1996 ರಲ್ಲಿ ಮಾರಾಟ ದಾಖಲೆಗಳಿಗೆ ಸಹಿ ಹಾಕುವಂತೆ ಪ್ರೇರೇಪಿಸಿದರು, ಆ ಮೂಲಕ ಜಮೀನನ್ನು ಪರಿಶಿಷ್ಟ ಜಾತಿ ಸಮುದಾಯದ ವ್ಯಕ್ತಿಯೊಬ್ಬರಿಗೆ ವರ್ಗಾಯಿಸಲಾಯಿತು. ಶ್ರೀಮತಿ ಜಯಮ್ಮ



ಶ್ರೀಮತಿ ಜಯಮ್ಮ ಅವರ ಕುಟುಂಬ ಸದಸ್ಯರೊಂದಿಗೆ, ಅವರ ಮನೆಯ ಮುಂದೆ

ಅವರಿಗೆ ಪತಿಯ ಮರಣದ ನಂತರವೇ ಮಾರಾಟದ ಬಗ್ಗೆ ತಿಳಿಯಿತು ಆದರೆ ಕಾನೂನುನಿನ ಹೋರಾಟ ಕೈಗೊಳ್ಳಲು ಇವರ ಬಳಿ ಯಾವುದೇ ಸೌಕರ್ಯವಿರಲಿಲ್ಲ. ನಂತರ, ಶ್ರೀಮತಿ ಜಯಮ್ಮ ಅವರಿಗೆ ಯಾವುದೇ ನೋಟಿಸ್ ನೀಡದೆ 2002 ರಲ್ಲಿ ಎಸಿ ಪ್ರಾರಂಭಿಸಿದ ಸ್ವಯಂಪ್ರೇರಿತ (suo motu) ನಡಾವಳಿಗಳನ್ನು ಯಾವುದೇ ಸಮಂಜಸ ಕಾರಣವಿಲ್ಲದೆ ಕೈಬಿಡಲಾಯಿತು. ಇವರ ಮಗ ಬೆಳೆದ ನಂತರವೇ ಕುಟುಂಬವು 2015 ರಲ್ಲಿ ಎಸಿ ಅವರನ್ನು ಸಂಪರ್ಕಿಸಿತು; ತದನಂತರ ಕಾರ್ಯವಿಧಾನದ ಗೊಂದಲಗಳು ಉಂಟಾದವು, ಇದರಲ್ಲಿ ಖರೀದಿದಾರನು ಎಸಿಗೆ ಮಾಹಿತಿ ನೀಡದೆ ತಡೆಯಾಜ್ಞೆ (stay) ಪಡೆದುಕೊಂಡಿದ್ದು ಮತ್ತು ಹೈಕೋರ್ಟ್ ನಿರ್ದೇಶನವನ್ನು ಅಂತಿಮ ತೀರ್ಮಾನ ಎಂದು ಡಿಸಿ ಆದೇಶದಲ್ಲಿ ತಪ್ಪಾಗಿ ಓದಿಕೊಂಡಿದ್ದು ಸೇರಿದೆ. ಹೈಕೋರ್ಟ್ ಎದುರಿನ ಮುಂದಿನ ರಿಟ್ ನಡಾವಳಿಗಳನ್ನು 'ರೆಸ್ ಜುಡಿಕಾಟಾ' (ಪೂರ್ವನಿರ್ಣಿತ ವಿಷಯ) ಆಧಾರದ ಮೇಲೆ ವಜಾಗೊಳಿಸಲಾಯಿತು. ಈ ವಿಷಯವು ಪ್ರಸ್ತುತ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇದೆ.

**ಪ್ರಕರಣ 5: ಶ್ರೀ ನರಸಿಂಹಯ್ಯ (ಬೆಂಗಳೂರು ಗ್ರಾಮಾಂತರ)**

ಈ ಕುಟುಂಬವು ಪರಿಶಿಷ್ಟ ಜಾತಿಗೆ ಸೇರಿದೆ. ಶ್ರೀ ನರಸಿಂಹಯ್ಯ ಅವರು ಎಪ್ಪತ್ತೈದು ವರ್ಷದ ಕೃಷಿ ಕಾರ್ಮಿಕರಾಗಿದ್ದು, ಇವರ ತಂದೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಬಿದಲೂರು ಗ್ರಾಮದಲ್ಲಿ 3 acres ಜಮೀನು ಮಂಜೂರಾಗಿತ್ತು. ಮಂಜೂರಾದ ಜಮೀನನ್ನು 1996 ರಲ್ಲಿ ವಂಚನೆಯಿಂದ ವರ್ಗಾಯಿಸಲಾಯಿತು; ಖರೀದಿದಾರರು ಸಾಲ ಪಡೆಯಲು ಸಹಾಯ ಮಾಡುವ ನೆಪದಲ್ಲಿ



ಕ್ರಯದಾರರ ದಬ್ಬಾಳಿಕೆಯಿಂದ ಗಾಯಗೊಂಡು ಹಾಗೂ ಅನಾರೋಗ್ಯದಿಂದ ನರಳುತ್ತಿರುವ ನರಸಿಂಹಯ್ಯನವರ ಪತ್ನಿ ಹಾಗೂ ನರಸಿಂಹಯ್ಯನವರು

ಮಂಜೂರಾತಿದಾರರ ಕುಟುಂಬದಿಂದ ಹೆಬ್ಬೆಟ್ಟಿನ ಗುರುತುಗಳನ್ನು ಪಡೆದುಕೊಂಡರು ಮತ್ತು ಕುಟುಂಬದ ಮಹಿಳಾ ಸದಸ್ಯರನ್ನು ವಹಿವಾಟಿನಿಂದ ಉದ್ದೇಶಪೂರ್ವಕವಾಗಿ ಹೊರಗಿಟ್ಟು ಅವರ ಹೆಸರಿನಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆದರು. ಕುಟುಂಬವನ್ನು 2008 ರಲ್ಲಿ ಬಲವಂತವಾಗಿ ಒಕ್ಕಲೆಬ್ಬಿಸಲಾಯಿತು. ಎಸಿ 2010 ರಲ್ಲಿ ಅನುಕೂಲಕರ ಆದೇಶವನ್ನು ಹೊರಡಿಸಿದರು ಮತ್ತು ಕಂದಾಯ ದಾಖಲೆಗಳ ಮರುಸ್ಥಾಪನೆ ಹಾಗೂ ಸ್ವಾಧೀನ ಪ್ರಕ್ರಿಯೆಗಳು ನಡೆದವು. ಆದಾಗ್ಯೂ, ಖರೀದಿದಾರರು ತಮ್ಮ ಪ್ರಭಾವವನ್ನು ಬಳಸಿ ಆದೇಶದ ಜಾರಿಗೆ ಅಡ್ಡಿಪಡಿಸುವ ಹಲವಾರು ಕಾನೂನು ನಡಾವಳಿಗಳನ್ನು ಪ್ರಾರಂಭಿಸಿದರು. ಸ್ಥಳೀಯ ಪೊಲೀಸರು ಎಫ್ಐಆರ್ (FIR) ದಾಖಲಿಸಲು ಪದೇ ಪದೇ ನಿರಾಕರಿಸಿದರು, ಕೇವಲ ಎನ್‌ಸಿಆರ್ (NCR) ದೂರುಗಳನ್ನು ಮಾತ್ರ ದಾಖಲಿಸಿಕೊಂಡರು ಮತ್ತು ಡಿವೈಎಸ್‌ಪಿ ಹಾಗೂ ದಲಿತ ನಾಯಕರ ಹಸ್ತಕ್ಷೇಪದ ನಂತರವೇ ಎಫ್ಐಆರ್ ದಾಖಲಿಸಿದರು. ಖರೀದಿದಾರರು ತರುವಾಯ ಡಿಸಿ ನ್ಯಾಯಾಲಯಕ್ಕೆ ಹೋದರು, ಅಲ್ಲಿ ವಿಷಯವನ್ನು ಮತ್ತೆ ಎಸಿ ನ್ಯಾಯಾಲಯಕ್ಕೆ ಮರುಪರಿಶೀಲನೆಗೆ ಕಳುಹಿಸಲಾಯಿತು. ಹಿಂದಿನ ನಡಾವಳಿಗಳು ದಾಖಲೆಗಳನ್ನು ಒಪ್ಪಿಕೊಂಡು ಮರುಸ್ಥಾಪನೆಗೆ ನಿರ್ದೇಶಿಸಿದ್ದಾಗ್ಯೂ, ಮೂಲ ಮಂಜೂರಾತಿ ದಾಖಲೆಗಳು ಲಭ್ಯವಿಲ್ಲ ಎಂದು ಪ್ರತಿಪಾದಿಸಿ ಎಸಿ ತರುವಾಯ 2018 ರಲ್ಲಿ ಮಂಜೂರಾತಿದಾರರ ವಿರುದ್ಧ ಆದೇಶ ಹೊರಡಿಸಿದರು. ನಡೆಯುತ್ತಿರುವ ಬೆದರಿಕೆಗಳು ಮತ್ತು ಜಮೀನಿನ ಕಾನೂನುಬಾಹಿರ ಅಭಿವೃದ್ಧಿಯ ಪರಿಸ್ಥಿತಿಗಳ ನಡುವೆಯೂ ಕುಟುಂಬವು ಸುಪ್ರೀಂ ಕೋರ್ಟ್‌ನಲ್ಲಿ ಹೋರಾಟವನ್ನು ಮುಂದುವರಿಸಿದೆ.

**ಪ್ರಕರಣ 6: ಶ್ರೀ ಪಿ. ವೆಂಕಟೇಶ್ (ಕೋಲಾರ)**

ಇವರು ಪರಿಶಿಷ್ಟ ಜಾತಿಗೆ ಸೇರಿದ್ದಾರೆ. ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಜಯಮಂಗಲ ಗ್ರಾಮದ 5 acres ಜಮೀನನ್ನು ಮೂಲತಃ 1947 ರಲ್ಲಿ ಇವರ ತಾತನಿಗೆ ಮಂಜೂರು ಮಾಡಲಾಗಿತ್ತು. ತಾತನು ಅನಕ್ಷರಸ್ಥನಾಗಿದ್ದ ಮತ್ತು ತನ್ನ ಕಾನೂನುಬದ್ಧ ಹಕ್ಕುಗಳ ಬಗ್ಗೆ ಯಾವುದೇ ತಿಳುವಳಿಕೆ ಇರದ ಸಮಯದಲ್ಲಿ, ಯಾವುದೇ ಪಾವತಿಯಿಲ್ಲದೆ, ತಾನು ಜೀತದಾಳುವಾಗಿ ಕೆಲಸ ಮಾಡುತ್ತಿದ್ದ ಒಕ್ಕಲಿಗ ಜಮೀನ್ದಾರನೊಬ್ಬನು ಮರುವರ್ಷವೇ ಈ ಜಮೀನನ್ನು ವಶಪಡಿಸಿಕೊಂಡನು. ಪಿಟಿಸಿಎಲ್ ಕಾಯ್ದೆ ಜಾರಿಗೆ ಬಂದ ನಂತರ, ಕುಟುಂಬವು 1982 ರಷ್ಟು ಮುಂಚಿತವಾಗಿಯೇ ಎಸಿ ಅವರನ್ನು ಸಂಪರ್ಕಿಸಿತು, ಆದರೆ ಪ್ರತಿಕೂಲ ಸ್ವಾಧೀನ ಮತ್ತು ಮೂವತ್ತು ವರ್ಷಗಳ ಕಾಲಮಿತಿಯ ತತ್ವದ ಆಧಾರದ ಮೇಲೆ 1983 ರಲ್ಲಿ ಪ್ರಕರಣವನ್ನು ವಜಾಗೊಳಿಸಲಾಯಿತು. ಡಿಸಿ ಮತ್ತು ಹೈಕೋರ್ಟ್ ಎದುರಿನ ಮುಂದಿನ ಮೇಲ್ಮನವಿಗಳೂ ಸಹ ಕಾಲಮಿತಿಯ ಆಧಾರದ ಮೇಲೆ ತಿರಸ್ಕರಿಸಲ್ಪಟ್ಟವು. ಪ್ರಸ್ತುತ ಕನಿಷ್ಠ ಐವತ್ತು ಎಕರೆ ಜಮೀನನ್ನು ಹೊಂದಿರುವ ಖರೀದಿದಾರನ ಕುಟುಂಬದಿಂದ ಈ



**ಶ್ರೀ ಪಿ ವೆಂಕಟೇಶ್ ಅವರ ಮನೆಯ ಮುಂದೆ**







ಕುಟುಂಬವು ಇಂದಿಗೂ ಬೆದರಿಕೆಯ ನೆರಳಿನಲ್ಲಿ ಬದುಕುತ್ತಿದೆ.

**ಪ್ರಕರಣ 7: ಶ್ರೀ ರಂಗನಾಯ್ಕ್ (ಚಿತ್ರದುರ್ಗ)**

ಇವರು ಪರಿಶಿಷ್ಟ ಜಾತಿಗೆ ಸೇರಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಚಿನ್ನಾಪುರ ಗ್ರಾಮದಲ್ಲಿ 1953-54 ರಲ್ಲಿ 3.00 ಏಕರೆ ಮತ್ತು 1955 ರಲ್ಲಿ 4.00 ಏಕರೆ ಜಮೀನಿನ ಎರಡು ಮಂಜೂರಾತಿಗಳನ್ನು ಇವರ ತಾತ ಶ್ರೀ ಧರ್ಮನಾಯ್ಕ್ ಅವರಿಗೆ ಮಾಡಲಾಗಿತ್ತು. ಜೀತ ಪದ್ಧತಿಯ ಕೃಷಿ ಕಾರ್ಮಿಕರಾಗಿ ಕೆಲಸ ಮಾಡಿದ್ದ ಈ ಕುಟುಂಬಕ್ಕೆ ಜಮೀನಿನ ಸ್ವಾಧೀನವನ್ನು ಹೇಗೆ ಕಳೆದುಕೊಂಡಿತು ಎಂಬುದು ತಿಳಿದಿಲ್ಲ. ಲಂಚದ ಹಣ ಪಾವತಿಸುವವರೆಗೆ ತಾಲ್ಲೂಕು ಕಚೇರಿ ಅಧಿಕಾರಿಗಳು ದಾಖಲೆಗಳನ್ನು ತಡೆಹಿಡಿದಿದ್ದರು, ಅದರ ನಂತರ 2009 ರಲ್ಲಿ ದಾಖಲೆಗಳನ್ನು ಪಡೆಯಲಾಯಿತು. ಮೊದಲ ಪ್ರಕರಣದಲ್ಲಿ, ತಹಶೀಲ್ದಾರರ ವರದಿಯೇ ಪಿಟಿಸಿಎಲ್ ಕಾಯ್ದೆಯ ಉಲ್ಲಂಘನೆಯನ್ನು ಪತ್ತೆಹಚ್ಚಿದ್ದಾಗ್ಯೂ, ಎಸಿ ಆದೇಶವು ಮಂಜೂರಾತಿ ವರ್ಷವನ್ನು 1953-54 ರಿಂದ 1957 ಕ್ಕೆ ತಪ್ಪಾಗಿ ದಾಖಲಿಸಿತು ಮತ್ತು ಮಂಜೂರಾತಿಯನ್ನು ರಿಯಾಯಿತಿ ಬೆಲೆಗೆ (upset price) ನೀಡಲಾಗಿದೆ ಎಂದು ಚಿತ್ರಿಸಿತು. ಎರಡನೇ ಪ್ರಕರಣದಲ್ಲಿ, ಖರೀದಿದಾರರು ಡೆಪ್ಯುಟಿ ಕಮಿಷನರ್ ಅವರ ಅನುಮತಿ ಪತ್ರದ ಮೇಲೆ ಅವಲಂಬಿತರಾಗಿದ್ದರು, ಆದರೆ ಆರ್‌ಟಿಐ (RTI) ಉತ್ತರಗಳು ಅಂತಹ ಪತ್ರ, ದಾಖಲೆಗಳಲ್ಲಿ



ಶ್ರೀ ಕಿರಣ್ ಕುಮಾರ್ ಅವರ ತಂದೆ
ಶ್ರೀ ವೆಂಕಟಾಚಲಯ್ಯ ಅವರು
ಶ್ರೀ ಕಿರಣ್ ಕುಮಾರ್ ಅವರ ಅಜ್ಜನಿಗೆ
ನೀಡಲಾದ ಭೂಮಿಯಲ್ಲಿ

ಅಸ್ತಿತ್ವದಲ್ಲಿಲ್ಲ ಎಂದು ತೋರಿಸಿವೆ ಮತ್ತು ಕಂದಾಯ ಅಧಿಕಾರಿಗಳು ಅದು ನಕಲಿ ಎಂದು ಮೌಖಿಕವಾಗಿ ಒಪ್ಪಿಕೊಂಡಿದ್ದಾರೆ. ಎರಡೂ ವಿಷಯಗಳು ಬಾಕಿ ಉಳಿದಿವೆ.

**ಪ್ರಕರಣ 8:**

**ಶ್ರೀ ಕಿರಣ್ ಕುಮಾರ್ (ರಾಮನಗರ)**



ಶ್ರೀ ಕಿರಣ್ ಕುಮಾರ್ ಅವರ ತಾಯಿ
ಶ್ರೀಮತಿ ಯಲಮ್ಮ ಅವರ ಮನೆಯ ಮುಂದೆ

ಇವರು ಪರಿಶಿಷ್ಟ ಜಾತಿಗೆ ಸೇರಿದ್ದಾರೆ. ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ನರಸಾಪುರ ಗ್ರಾಮದ 2 ಏಕರೆ ಜಮೀನನ್ನು ಇವರ ತಾತನಿಗೆ ಮಂಜೂರು ಮಾಡಲಾಗಿತ್ತು. ಶಕ್ತಿಶಾಲಿ ಸ್ಥಳೀಯ ರಾಜಕೀಯ ವ್ಯಕ್ತಿಯೊಬ್ಬರ ಬಳಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದ ಇವರ ತಂದೆಯು ಮಂಜೂರಾದ ಜಮೀನಿನ ಒಂದು ಎಕರೆಯನ್ನು ಪರಂಪರೆಯಾಗಿ ಪಡೆದು ಸಾಗುವಳಿ ಮಾಡುತ್ತಿದ್ದರು. 2017 ರಲ್ಲಿ, ಇವರ ತಂದೆ ಅನಾರೋಗ್ಯದ ಕಾರಣದಿಂದ ಈ ವ್ಯಕ್ತಿಯ ಬಳಿ ಕೆಲಸ ಮಾಡುವುದನ್ನು ನಿಲ್ಲಿಸಿದಾಗ, ಅವರನ್ನು ಆ ಒಂದು ಎಕರೆ ಜಮೀನನ್ನು ಸಾಗುವಳಿ ಮಾಡದಂತೆ ತಡೆಯಲಾಯಿತು ಮತ್ತು ಸದರಿ ಮಂಜೂರಾದ ಜಮೀನನ್ನು ಈಗಾಗಲೇ ಮಾರಾಟ ಮಾಡಲಾಗಿದೆ ಎಂದು ಹೇಳಲಾಯಿತು. ಬ್ಯಾಂಕ್ ಸಾಲದ ಸುಳ್ಳು ಭರವಸೆ ನೀಡಿ 1993 ರಲ್ಲಿ ತನ್ನ ತಂದೆಯಿಂದ ಮಾರಾಟ ದಾಖಲೆಗಳಿಗೆ ಸಹಿ ಹಾಕಿಸಿ ವಂಚಿಸಲಾಗಿದೆ ಎಂಬುದನ್ನು ಕುಟುಂಬವು ನಂತರ ಪತ್ತೆಹಚ್ಚಿತು. ಕುಟುಂಬವು ತಮ್ಮ ಹಕ್ಕುಗಳನ್ನು ಪ್ರತಿಪಾದಿಸಿದಾಗ, ಅವರಿಗೆ ಕೊಲೆ, ಅಪಹರಣ, ಮತ್ತು ಲಾರಿಯಿಂದ ತುಳಿಸುವ ಬೆದರಿಕೆಗಳನ್ನು ಹಾಕಲಾಯಿತು. ಅವರು ಎಸಿ ಮತ್ತು ಡಿಸಿ ಇಬ್ಬರ ಎದುರೂ ಜಯಗಳಿಸಿದರು. ಆದಾಗ್ಯೂ, ಖರೀದಿದಾರನ ರಾಜಕೀಯ ಪ್ರಭಾವದ ಕಾರಣದಿಂದಾಗಿ ತಹಶೀಲ್ದಾರರು ಸ್ವಾಧೀನವನ್ನು ಹಸ್ತಾಂತರಿಸಲು ನಿರಾಕರಿಸಿದರು. ಖರೀದಿದಾರನು ಹೈಕೋರ್ಟ್ ಅನ್ನು ಸಂಪರ್ಕಿಸಿದನು, ಅಲ್ಲಿ ಕುಟುಂಬವು ಕ್ಯಾವಿಯಟ್




(caveat) ಸಲ್ಲಿಸಿದ್ದಾಗ್ಯೂ ಅವರಿಗೆ ನೋಟಿಸ್ ನೀಡದೆ ಮಧ್ಯಂತರ ತಡೆಯಾಜ್ಞೆ ನೀಡಲಾಗಿದೆ ಎಂದು ವರದಿಯಾಗಿದೆ. ಕುಟುಂಬವು ಇಂದು ಕೃಷಿ ಭೂಮಿಯಾಗಲಿ ಅಥವಾ ಸ್ವಂತ ಮನೆಯಾಗಲಿ ಇಲ್ಲದೆ, ಸರ್ಕಾರದ ಗೋಮಾಳ ಜಮೀನಿನಲ್ಲಿ ಸಣ್ಣ ಮನೆಯೊಂದರಲ್ಲಿ ವಾಸಿಸುತ್ತಿದೆ.

**ಪ್ರಕರಣ 9: ಶ್ರೀ ಶಾಂತಕುಮಾರ್ (ಚಿತ್ರದುರ್ಗ)**

ಇವರು ಪರಿಶಿಷ್ಟ ಜಾತಿಗೆ ಸೇರಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಗ್ರಾಮದ 5.00 ಏಕರೆ ಜಮೀನನ್ನು 1940 ರಲ್ಲಿ ಇವರ ತಂದೆಗೆ ಶಾಶ್ವತ ಪರಭಾರೆ-ರಹಿತ ಷರತ್ತಿನೊಂದಿಗೆ ಮಂಜೂರು ಮಾಡಲಾಗಿತ್ತು. 1972 ರಲ್ಲಿ, ಕ್ಷಯರೋಗಕ್ಕೆ (tuberculosis) ಸಂಬಂಧಿಸಿದ ಕುಟುಂಬದ ವೈದ್ಯಕೀಯ ತುರ್ತು ಪರಿಸ್ಥಿತಿಯ ಕಾರಣದಿಂದಾಗಿ, ಸಾಲವನ್ನು ತೀರಿಸಲು ತಂದೆಯು ಜಮೀನನ್ನು ಮಾರಾಟ ಮಾಡಲು ಒತ್ತಾಯಿಸಲ್ಪಟ್ಟರು. ಕುಟುಂಬವು 1999 ರಲ್ಲಿ ಎಸಿ ಅವರನ್ನು ಸಂಪರ್ಕಿಸಿದಾಗ, ಅವರು 2000-01 ರಲ್ಲಿ ಎಸಿ ಮತ್ತು ಡಿಸಿ ಇಬ್ಬರಿಂದಲೂ ಅನುಕೂಲಕರ ಆದೇಶಗಳನ್ನು ಪಡೆದರು. ಖರೀದಿದಾರರು ಮಂಜೂರಾತಿ ವರ್ಷವನ್ನು 1956 (ಇದು ಪರಭಾರೆ-ರಹಿತ ಅವಧಿಯನ್ನು ಹದಿನೈದು ವರ್ಷಗಳಿಗೆ ಇಳಿಸುತ್ತಿತ್ತು) ಎಂದು ತಪ್ಪಾಗಿ ಬಿಂಬಿಸುವ ಮೂಲಕ ಹೈಕೋರ್ಟ್ ಅನ್ನು ದಾರಿ ತಪ್ಪಿಸಲು ಯತ್ನಿಸಿದರು,ಹೈಕೋರ್ಟ್ ವಿಷಯವನ್ನು ಮರುಪರಿಶೀಲನೆಗೆ ಕಳುಹಿಸಿತು; ಎಸಿ ದಾಖಲೆಗಳನ್ನು ಪರಿಶೀಲಿಸಿದ ನಂತರ ಮತ್ತೆ ಮಂಜೂರಾತಿದಾರರ ಪರವಾಗಿ ತೀರ್ಪು ನೀಡಿದರು ಮತ್ತು ಡಿಸಿ 2011 ರಲ್ಲಿ ಜಮೀನನ್ನು 1940 ರಲ್ಲಿ ಶಾಶ್ವತ ಪರಭಾರೆ-ರಹಿತ ಷರತ್ತಿನೊಂದಿಗೆ ಮಂಜೂರು ಮಾಡಲಾಗಿದೆ ಎಂದು ನಿರ್ಣಾಯಕವಾಗಿ ಪತ್ತೆಹಚ್ಚಿದರು. ಕಂದಾಯ ಪ್ರಾಧಿಕಾರಗಳ ಎದುರು ಹಲವಾರು ಬಾರಿ ಗೆದ್ದಾಗ್ಯೂ, ಹೈಕೋರ್ಟ್ ಅಂತಿಮವಾಗಿ 2018 ರಲ್ಲಿ ನೆಕ್ಕಂಟಿ ತೀರ್ಪನ್ನು ಅನುಸರಿಸಿ




ಕಾಲಮಿತಿಯ ಆಧಾರದ ಮೇಲೆ ವಿಷಯವನ್ನು ವಜಾಗೊಳಿಸಿತು. ವಿಭಾಗೀಯ ಪೀಠ, ಸುಪ್ರೀಂ ಕೋರ್ಟ್ ಎದುರಿನ ಮೇಲ್ಮನವಿಗಳು ಮತ್ತು ಮರುಪರಿಶೀಲನಾ ಅರ್ಜಿ ಎಲ್ಲವೂ ವಜಾಗೊಂಡವು. ಹಲವಾರು ಅನುಕೂಲಕರ ಆದೇಶಗಳಿದ್ದಾಗ್ಯೂ ಅಧಿಕಾರಿಗಳು ಜಮೀನನ್ನು ಹಸ್ತಾಂತರಿಸಲು ಪದೇ ಪದೇ ನಿರಾಕರಿಸಿದರು.

**ಪ್ರಕರಣ 10: ಶ್ರೀಮತಿ ಗಂಗಮ್ಮ (ತುಮಕೂರು)**

ಇವರು ಪರಿಶಿಷ್ಟ ಜಾತಿಗೆ ಸೇರಿದ್ದಾರೆ. ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಕಲ್ಲುಕೋಟೆ ಗ್ರಾಮದ 6 ಏಕರೆ 33 ಗುಂಟೆ ಜಮೀನನ್ನು 1956 ರಲ್ಲಿ ಇವರ ಪತಿಗೆ ಮಂಜೂರು ಮಾಡಲಾಗಿತ್ತು. ಕುಟುಂಬವು ಸುಮಾರು 1983-84 ರಲ್ಲಿ ಗಂಗಮ್ಮನವರ ಪತಿಯ ಮರಣದವರೆಗೂ ಜಮೀನನ್ನು ಸಾಗುವಳಿ ಮಾಡಿತು, ಅದರ ನಂತರ ಪ್ರಬಲ ಜಾತಿಯ ಕುಟುಂಬವೊಂದು ಒಂದು ವರ್ಷದ ಕಾಲ ಅವರಿಗೆ ಕಿರುಕುಳ ನೀಡಿ, ಅಂತಿಮವಾಗಿ ಇವರ ಮನೆಯನ್ನು ಸುಟ್ಟುಹಾಕಿತು; ಇದರಿಂದಾಗಿ ಗಂಗಮ್ಮ ಮತ್ತು ಇವರ ಮಕ್ಕಳು ಓಡಿಹೋಗುವಂತಾಯಿತು. ಇವರ ಮಕ್ಕಳು ಬೆಳೆದು ವಕೀಲರನ್ನು ನೇಮಿಸಿಕೊಂಡಾಗ, 1961 ರಲ್ಲಿ ಮಾರಾಟ ಪತ್ರ ನೋಂದಣಿಯಾಗಿರುವುದು ಬೆಳಕಿಗೆ ಬಂದಿತು. ಮಾರಾಟವು ಪರಭಾರೆ-ರಹಿತ ಅವಧಿಯೊಳಗೆ ನಡೆದಿದ್ದಾಗ್ಯೂ, ಎಸಿ ಮಂಚೇಗೌಡ ತೀರ್ಪನ್ನು ಉಲ್ಲೇಖಿಸಿ ಪ್ರಕರಣವನ್ನು ವಜಾಗೊಳಿಸಿದರು. ಮಂಜೂರಾತಿದಾರನ ವಿಧವೆ ಅನಕ್ಷರಸ್ಥಳಾಗಿದ್ದಳು ಮತ್ತು ಜಮೀನಿನಿಂದ ಹಿಂಸಾತ್ಮಕವಾಗಿ ಓಡಿಸಲ್ಪಟ್ಟಿದ್ದರಿಂದ ವಿಳಂಬವಾಗಿದೆ ಎಂಬ ಅಂಶವನ್ನು ಪರಿಗಣಿಸದೆ, ಕಾಲವಿಳಂಬ ಮತ್ತು ನೆಕ್ಕಂಟಿ ಆದೇಶವನ್ನು ಉಲ್ಲೇಖಿಸಿ ಡಿಸಿ ಈ ವಜಾವನ್ನು ಎತ್ತಿಹಿಡಿದರು. ಈ ವಿಷಯವು ಹೈಕೋರ್ಟ್‌ನಲ್ಲಿ ಬಾಕಿ ಇದೆ. ಇವರು ನೇಮಿಸಿಕೊಂಡ ಮೊದಲ ವಕೀಲರು ತಮ್ಮ ಫೀಸಿನ ರೂಪದಲ್ಲಿ ಜಮೀನಿನ ಒಂದು ಭಾಗವನ್ನು ತಮಗೆ ನೀಡಲು ಒಪ್ಪಿಕೊಳ್ಳುವಂತೆ ಶ್ರೀಮತಿ ಗಂಗಮ್ಮ ಅವರ ಮೇಲೆ ಒತ್ತಡ ಹೇರಿದ್ದರು. ನಂತರ ಈ ವಕೀಲರು ಎದುರು ಪಕ್ಷದೊಂದಿಗೆ ಶಾಮೀಲಾದ ಕಾರಣ ಈಗ ಈ ವಕೀಲರ ಹೆಸರಿನಲ್ಲಿ ಹತ್ತು ಗುಂಟೆ ಜಮೀನಿನ ಆರ್‌ಟಿಸಿಯಲ್ಲಿ ಕಾಣಿಸಿಕೊಳ್ಳುತ್ತಿದೆ.

### 3.2 ಸಾಮಾಜಿಕ ವಾಸ್ತವಗಳು: ಜನರನ್ನು ವಂಚಿತರನ್ನಾಗಿಸುವ ಪರಿಸ್ಥಿತಿಗಳು

ಜ್ಯೂರಿ ಸಮಿತಿಯ ಮುಂದಿರುವ ಟೆಸ್ಟಿಮೋನಿಗಳು ವೈಯಕ್ತಿಕವಾದ ಹತ್ತು ದುರದೃಷ್ಟಕರ ಪ್ರತ್ಯೇಕ ಪ್ರಕರಣಗಳ ಉದಾಹರಣೆಗಳಲ್ಲ. ಬದಲಿಗೆ ಈ ಪ್ರಕರಣಗಳು ಎಸ್‌ಸಿ/ಎಸ್‌ಟಿ ಮಂಜೂರಾತಿದಾರರನ್ನು ಯಾವ ಮಾದರಿಯಲ್ಲಿ ಅವರ ಜಮೀನುಗಳಿಂದ ಸತತವಾಗಿ ವಂಚಿತಗೊಳಿಸಲಾಗುತ್ತಿದೆ ಎಂಬುದನ್ನು ಬಹಿರಂಗಪಡಿಸುತ್ತವೆ. ಜನರನ್ನು ವಂಚಿಸುವ ಈ ಕಾರ್ಯವಿಧಾನಗಳು ಪಿಟಿಸಿಎಲ್ ಕಾಯ್ದೆಯು ಪರಿಹರಿಸಲು ಉದ್ದೇಶಿಸಿದ್ದ ಜಾತಿ, ಬಡತನ ಮತ್ತು ಅಧಿಕಾರದಂತಹ ಸಾಮಾಜಿಕ ಪರಿಸ್ಥಿತಿಗಳಲ್ಲಿಯೇ ಬೇರೂರಿವೆ.

### ಅನಕ್ಷರತೆಯ ದುರುಪಯೋಗ ಮತ್ತು ವಂಚನೆ

ಹೆಚ್ಚಿನ ಪ್ರಕರಣಗಳಲ್ಲಿ, ಮಂಜೂರಾತಿದಾರರ ಅನಕ್ಷರತೆ ಮತ್ತು ಆರ್ಥಿಕ ದುರ್ಬಲತೆಯ ಕಾರಣಕ್ಕಾಗಿಯೇ ಮೊದಲ ಬಾರಿಗೆ ಅವರು ತಮ್ಮ ಜಮೀನನ್ನು ಕಳೆದುಕೊಳ್ಳಬೇಕಾಯಿತು.

- ಶ್ರೀ ಕರುಣೇಶ್ ಅವರ ಪ್ರಕರಣದಲ್ಲಿ, ಕುಟುಂಬಕ್ಕೆ ಅವು ಸಹಿ ಹಾಕುತ್ತಿರುವುದು ಗುತ್ತಿಗೆ ಪತ್ರ ಎಂದು ಹೇಳಿ ಕ್ರಯಪತ್ರಕ್ಕೆ ಸಹಿ ಹಾಕಿಸಿಕೊಳ್ಳಲಾಗಿತ್ತು. ಅಲ್ಲದೇ, ಈ ವಿಚಾರ ತಿಳಿದುಬಂದದ್ದು ಗುತ್ತಿಗೆದಾರನ ಮಗ ವರ್ಷ ವರ್ಷವೂ ಕೊಡುತ್ತಿದ್ದ ಗುತ್ತಿಗೆ ಮೊತ್ತ ಕೊಡುವುದನ್ನು ನಿಲ್ಲಿಸಿ ಮಾಲೀಕತ್ವವನ್ನು ಕ್ಲೈಮ್ ಮಾಡಿದಾಗ ಮಾತ್ರ..
- ಶ್ರೀ ನವೀನ್ ಅವರ ಪ್ರಕರಣದಲ್ಲಿ, ಅವರ ತಾತ ಶ್ರೀ ಚಿಕ್ಕಸಿದ್ದಯ್ಯ ಅವರಿಗೆ ಪಶುಸಂಗೋಪನಾ ಸಾಲದ ಸುಳ್ಳು ಭರವಸೆ ನೀಡಿ ದಾಖಲೆಗಳಿಗೆ ಸಹಿ ಹಾಕುವಂತೆ ಪ್ರೇರೇಪಿಸಲಾಯಿತು; ನಂತರ ಇವರ ಜಮೀನನ್ನು ಸಂಪೂರ್ಣವಾಗಿ ಪರಭಾರೆ ಮಾಡಲು ಆ ದಾಖಲೆಗಳನ್ನು ಬಳಸಲಾಯಿತು.
- ಶ್ರೀ ಕಿರಣ್ ಕುಮಾರ್ ಅವರ ಪ್ರಕರಣದಲ್ಲಿ, ಅವರ ತಂದೆಯವರು 1993 ರಲ್ಲಿ ಅವು ಸಾಲದ ದಾಖಲೆಗಳು ಎಂದು ನಂಬಿ ಪತ್ರಗಳಿಗೆ ಸಹಿ ಹಾಕಿದ್ದರು. ಇದು ಅವರ ಗಮನಕ್ಕೆ ಬಂದದ್ದು ಇಪ್ಪತ್ತನಾಲ್ಕು ವರ್ಷಗಳ ನಂತರ.
- ಶ್ರೀ ಶಾಂತಕುಮಾರ್ ಅವರ ಪ್ರಕರಣದಲ್ಲಿ, ಶಾಶ್ವತ ಪರಭಾರೆ-ರಹಿತ ಷರತ್ತನ್ನು ಹೊಂದಿದ್ದ ಐದು ಎಕರೆ ಜಮೀನನ್ನು ವೈದ್ಯಕೀಯ ಬಿಕ್ಕಟ್ಟಿನಲ್ಲಿ ಸಿಲುಕಿದ್ದ ಕುಟುಂಬದವರಿಂದ ಕಸಿದುಕೊಳ್ಳಲಾಯಿತು.
- ಶ್ರೀಮತಿ ಗಂಗಮ್ಮ ಅವರ ಪ್ರಕರಣದಲ್ಲಿ, ಅವರ ಮೊದಲ ವಕೀಲರು ಜಮೀನಿನ ಒಂದು ಭಾಗವನ್ನು ತಮ್ಮ ಫೀಸಾಗಿ ನೀಡಲು ಒಪ್ಪಿಕೊಳ್ಳುವಂತೆ ಒತ್ತಡ ಹೇರಿದ್ದರು; ಆ ವಕೀಲರು ನಂತರದಲ್ಲಿ ಎದುರು ಪಕ್ಷದೊಂದಿಗೆ ಶಾಮೀಲಾದ ಕಾರಣ ಆ ವಕೀಲರಿಗೆ ಹತ್ತು ಗುಂಟೆ ಜಮೀನು ನೀಡಲಾಗಿದ್ದು, ಅವರ ಹೆಸರು ಆರ್.ಟಿ.ಸಿ.ಯಲ್ಲಿ ಕಾಣಿಸಿಕೊಳ್ಳುತ್ತಿದೆ.

ಈ ಪ್ರತಿಯೊಂದು ಪ್ರಕರಣದಲ್ಲೂ, ಮಂಜೂರಾತಿದಾರರ ಅನಕ್ಷರತೆ ಮತ್ತು ಅವರ ಆರ್ಥಿಕ ಹತಾಶೆ ಮತ್ತು ಹೆಚ್ಚಿನ ಸಾಮಾಜಿಕ ಅಧಿಕಾರ ಹೊಂದಿರುವ ವ್ಯಕ್ತಿಗಳ ಮೇಲಿನ ಅವಲಂಬನೆಯು ಅವರ ಆಸ್ತಿಯನ್ನು ಕಸಿದುಕೊಳ್ಳುವ ಸಾಧನವಾಗಿತ್ತು.

**ಜೀತ ಪದ್ಧತಿ ಮತ್ತು ಊಳಿಗಮಾನ್ಯ ಪದ್ಧತಿ ಸೃಷ್ಟಿಸುವ ಅವಲಂಬನೆ**

ಮೇಲೆ ವಿವರಿಸಿದಂತೆ ಜಾತಿ ಆಧಾರಿತ ವಂಚನೆಯ ಅತ್ಯಂತ ಕಳವಳಕಾರಿ ಆಯಾಮವೊಂದರ ಮೇಲೆ ಇಲ್ಲಿನ ಟೆಸ್ಟಿಮೋನಿಗಳು ಬೆಳಕುಚೆಲ್ಲುತ್ತದೆ. ಈ ಪ್ರಕರಣದಲ್ಲಿ ಮಂಜೂರಾತಿದಾರರು ಜೀತದಾಳಾಗಿ ಯಾರ ಬಳಿ ಕೆಲಸ ಮಾಡುತ್ತಿದ್ದರೋ, ಅವರೇ ಜಮೀನನ್ನು ಕಸಿದುಕೊಂಡಿದ್ದರು.

- ಶ್ರೀ ವೆಂಕಟೇಶ್ ಅವರ ಪ್ರಕರಣದಲ್ಲಿ, ಜೀತದಾಳಾಗಿದ್ದ ಅವರ ತಾತನವರು ಅನಕ್ಷರಸ್ಥರೂ ಆಗಿದ್ದರು. ಜಮೀನು ಮಂಜೂರಾದ ಮರು ವರ್ಷವೇ, ಯಾರ ಬಳಿ ಅವರು ಜೀತಕ್ಕಿದ್ದರೋ ಆ ಜಮೀನ್ದಾರನೇ ಜಮೀನನ್ನು ವಶಪಡಿಸಿ ಕೊಂಡರು. ಮುಂದೆಯೂ ಮಂಜೂರುದಾರರ ಕುಟುಂಬದ ಸದಸ್ಯರು ತಮ್ಮ ಜೀವನೋಪಾಯಕ್ಕಾಗಿ ಅದೇ ಜಮೀನ್ದಾರರ ಕುಟುಂಬದ ಮೇಲೆ ಅವಲಂಬಿತವಾಗಿ ಉಳಿದರು, ಹಾಗಾಗಿ ಅವರು ಹಕ್ಕುಗಳಿಗಾಗಿ ಹೋರಾಡುವುದು ಅಸಾಧ್ಯವಾಯಿತು .

ಮೇಲಿನ ಉದಾಹರಣೆಗಳು ಎಂತಹ ಊಳಿಗಮಾನ್ಯ ಸಮಾಜದಲ್ಲಿ ಈ ಜಮೀನುಗಳು ಮಂಜೂರಾದವು ಮತ್ತು ಇಂತಹ ಪಿಟಿಸಿಎಲ್ ಕಾಯ್ದೆ ಜಾರಿಗೆ ಬಂದಿತು ಎಂಬುದನ್ನು ತೋರುತ್ತದೆ. ಇಂತಹ ಸಮಾಜಗಳಲ್ಲಿ ಯಾರು ಮಂಜೂರಾತಿದಾರರ ಆರ್ಥಿಕ ಜೀವನವನ್ನು ನಿಯಂತ್ರಿಸುವರೋ ಅವರ ವಿರುದ್ಧವೇ ಮಂಜೂರಾತಿದಾರರು ತಮ್ಮ ಹಕ್ಕುಗಳನ್ನು ಪ್ರತಿಪಾದಿಸಬೇಕಿದೆ.

**ಬಲವಂತ, ಬೆದರಿಕೆಗಳು ಮತ್ತು ಹಿಂಸಾಚಾರ**

ದೌರ್ಜನ್ಯ ಮತ್ತು ಬೆದರಿಕೆಗಳ ಮೂಲಕವೇ ದಲಿತರ ಜಮೀನನ್ನು ಕಸಿದುಕೊಳ್ಳಲಾಗಿತ್ತು ಎಂಬುದನ್ನು ಹಲವು ಟೆಸ್ಟಿಮೋನಿಗಳು ಬಹಿರಂಗಪಡಿಸುತ್ತವೆ. ಅಲ್ಲದೇ ನಂತರ ಭೂಮಿಯನ್ನು ಮರಳಿ ಪಡೆಯಲು (ಮರುಸ್ಥಾಪನೆಗೆ) ನಡೆಸಿದ ಪ್ರಯತ್ನಗಳನ್ನು ಸಹ ಸಂಘಟಿತ ಹಿಂಸಾಚಾರ ಮತ್ತು ದಬ್ಬಾಳಿಕೆಯ ಮೂಲಕವೇ ಹತ್ತಿಕ್ಕಲಾಗಿತ್ತು ಎಂಬುದೂ ಕೂಡ ಇದರಿಂದ ಸ್ಪಷ್ಟವಾಗುತ್ತದೆ. ಪ್ರಬಲ ಜಾತಿಗಳ ವ್ಯಕ್ತಿಗಳು ಸಾಮಾನ್ಯವಾಗಿ ಎಸ್‌ಸಿ/ಎಸ್‌ಟಿ ಸಮುದಾಯಗಳು ತಮ್ಮ ಜಮೀನುಗಳನ್ನು ಬಿಟ್ಟುಕೊಡುವಂತೆ ಮಾಡಲು ಒತ್ತಾಯಿಸಲು ದಬ್ಬಾಳಿಕೆಯ ವಾತಾವರಣವನ್ನು ಸೃಷ್ಟಿಸುತ್ತಾರೆ. ಮಂಜೂರುದಾದರು ಜಮೀನು ಬಿಟ್ಟುಕೊಡದಿದ್ದರೆ, ಪರಭಾರೆಯನ್ನು ತಡೆಯಲು ಅಧಿಕಾರಿಗಳನ್ನು ಸಂಪರ್ಕಿಸಿದರೆ ಮತ್ತು ಪ್ರಕರಣ ದಾಖಲಿಸಲು ಮುಂದಾದರೆ ಅವರಿಗೆ ಬೆದರಿಕೆಯೊಡ್ಡಲಾಗುತ್ತದೆ.

- ಶ್ರೀ ನವೀನ್ ಅವರ ಪ್ರಕರಣದಲ್ಲಿ, ಅವರ ಕುಟುಂಬದವರ ಮೇಲೆ ದೈಹಿಕ ಹಲ್ಲೆಗಳನ್ನು ನಡೆಸಲಾಯಿತು ಮತ್ತು ಮಂಜೂರಾತಿದಾರನ ಮಗನನ್ನು (ನವೀನ್

ಅವರ ತಂದೆ) ಪೊಲೀಸ್ ಠಾಣೆಗೆ ಕರೆದೊಯ್ದು ಕೊಲೆ ಬೆದರಿಕೆಯೊಡ್ಡಲಾಯಿತು; ಕುಟುಂಬವು ನ್ಯಾಯಾಲಯದಲ್ಲಿ ಸುಳ್ಳು ಹೇಳಿಕೆಗಳನ್ನು ನೀಡಲು ಮತ್ತು ಯಾವುದೇ ಪ್ರತಿಫಲವಿಲ್ಲದೆ ರಾಜಿ ಅರ್ಜಿಗೆ ಸಹಿ ಹಾಕಲು ಈ ಹಿಂಸೆಯೇ ಕಾರಣವಾಯಿತು.

- ಶ್ರೀ ನರಸಿಂಹಯ್ಯ ಅವರ ಪ್ರಕರಣದಲ್ಲಿ, ಅವರ ಕುಟುಂಬದ ಮೇಲೆ ಸುಮಾರು ಮೂವತ್ತು ಮಂದಿ ಪುರುಷರು ದಾಳಿ ನಡೆಸಿದರು. ನಂತರ, ಸಂತ್ರಸ್ತರನ್ನೇ ಪೊಲೀಸರು ಮೂರು ದಿನಗಳ ಕಾಲ ವಶದಲ್ಲಿಟ್ಟುಕೊಂಡಿದ್ದರು.
- ಶ್ರೀ ಕಿರಣ್ ಕುಮಾರ್ ಅವರ ಪ್ರಕರಣದಲ್ಲಿ, ಅವರ ಕುಟುಂಬಕ್ಕೆ ಪಿಟಿಸಿಎಲ್ ಪ್ರಕರಣವನ್ನು ಮುಂದುವರಿಸಿದ್ದೇ ಆದಲ್ಲಿ ಕೊಲೆ, ಅಪಹರಣ, ಮೊಕದ್ದಮೆಗಳು ಸುಳ್ಳು ಕ್ರಿಮಿನಲ್ ಕೇಸುಗಳು ಮತ್ತು ಲಾರಿ ಹತ್ತಿಸಿಬಿಡುತ್ತೇವೆ ಎಂದು ಬೆದರಿಕೆ ಒಡ್ಡಲಾಯಿತು.
- ಶ್ರೀಮತಿ ಗಂಗಮ್ಮ ಅವರ ಪ್ರಕರಣದಲ್ಲಿ, ಅವರ ಮನೆಯನ್ನೇ ಸುಟ್ಟುಹಾಕಲಾಯಿತು. ಜೀವಕ್ಕೆ ಬೆದರಿ ಅವರು ತಮ್ಮ ಮಕ್ಕಳೊಂದಿಗೆ ಓಡಿಹೋಗಬೇಕಾದಂತಹ ಸಂದರ್ಭವನ್ನು ಸೃಷ್ಟಿಸಲಾಯಿತು.

ಇವು ವೈಯಕ್ತಿಕ ದಾಳಿಗಳ ಪ್ರತ್ಯೇಕ ಕೃತ್ಯ ಇಲ್ಲವೇ ಪ್ರಕರಣಗಳಲ್ಲ. ಬದಲಿಗೆ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಧಿಕಾರ ಹೊಂದಿರುವ ವ್ಯಕ್ತಿಗಳು ಯಾವುದೇ ಶಿಕ್ಷೆಯ ಭಯವಿಲ್ಲದೆ ಕಾನೂನುಬದ್ಧ ಹಕ್ಕುಗಳ ಪ್ರತಿಪಾದನೆಯನ್ನು ಹತ್ತಿಕ್ಕಲು ನಡೆಸುವ ವ್ಯವಸ್ಥಿತ ಪ್ರಯತ್ನಗಳಾಗಿವೆ ಎಂಬುದನ್ನು ಗುರುತಿಸಬೇಕು.

### 3.3 ವ್ಯವಸ್ಥಿತ ಹಿನ್ನಡೆಯಾಗಿ ಮಾರ್ಪಟ್ಟ ವಿಳಂಬ

ಟೆಸ್ಟಿಮೋನಿಗಳಲ್ಲಿ ಪದೇ ಪದೇ ಕಂಡುಬಂದಿರುವ ಒಂದು ಪ್ರಮುಖ ಅಂಶವೆಂದರೆ - ಜಮೀನನ್ನು ಕಸಿದುಕೊಂಡ ತಕ್ಷಣವೇ ಸಂತ್ರಸ್ತ ಕುಟುಂಬಗಳು ಅಧಿಕಾರಿಗಳನ್ನು ಸಂಪರ್ಕಿಸಲು ಸಾಧ್ಯವಾಗಿಲ್ಲ ಎಂಬುದು. ಈ ವಿಳಂಬವನ್ನೇ ಖರೀದಿದಾರರು ಜಮೀನು ಮರಳಿ ನೀಡುವುದನ್ನು ವಿರೋಧಿಸಲು ನೆಪವಾಗಿಸಿಕೊಂಡರು. ಅತ್ತ ನ್ಯಾಯಾಲಯಗಳೂ ಸಹ ಇದೇ 'ವಿಳಂಬ ಮತ್ತು ಲಾಚೆಸ್ ಅನ್ನೇ (delay and laches) ಕಾರಣವಾಗಿಟ್ಟುಕೊಂಡು ಸಂತ್ರಸ್ತರ ಅರ್ಜಿಗಳನ್ನು ವ್ಯವಸ್ಥಿತವಾಗಿ ವಜಾಗೊಳಿಸುತ್ತಿದ್ದಾರೆ. ಆದರೆ, ಪಿಟಿಸಿಎಲ್ (PTCL) ಪ್ರಕರಣಗಳಲ್ಲಿ ವಿಳಂಬವನ್ನು ಈ ರೀತಿಯ ಚೌಕಟ್ಟಿನಲ್ಲಿ ನೋಡುವುದೇ ಮೂಲಭೂತವಾಗಿ ತಪ್ಪು ಗ್ರಹಿಕೆಯಿಂದ ಕೂಡಿದೆ ಎಂಬುದು ಜ್ಯೂರಿ ಸಮಿತಿಯ (Jury Panel) ದೃಢ ಅಭಿಪ್ರಾಯವಾಗಿದೆ.

ಈ ಪ್ರಕರಣಗಳಲ್ಲಿ ಆಗಿರುವ ವಿಳಂಬವು ಸಮ್ಮತಿ ಅಥವಾ ನಿರ್ಲಕ್ಷ್ಯದ ಪುರಾವೆಯಲ್ಲ. ಬದಲಿಗೆ, ಯಾವ ಕಠಿಣ ಪರಿಸ್ಥಿತಿಗಳನ್ನು ನಿವಾರಿಸಲು ಪಿಟಿಸಿಎಲ್ (PTCL) ಕಾಯ್ದೆಯನ್ನು ರೂಪಿಸಲಾಗಿತ್ತೋ, ಅದೇ ಪರಿಸ್ಥಿತಿಗಳ ನೇರ ಪರಿಣಾಮವೇ ಈ ರೀತಿಯ ವಿಳಂಬಗಳಿಗೆ ಕಾರಣವಾಗಿದೆ. ಉದಾಹರಣೆಗೆ, ಶ್ರೀ ಶಾಂತಕುಮಾರ್ ಅವರ ಪ್ರಕರಣದಲ್ಲಿ,

1972 ರಲ್ಲಿ ಕುಟುಂಬದ ವೈದ್ಯಕೀಯ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಜಮೀನನ್ನು ಮಾರಾಟ ಮಾಡಲಾಗಿತ್ತು; ಆಗ ಶಾಂತಕುಮಾರ್ ಅವರು ಇನ್ನೂ ಹದಿಹರೆಯದವರಾಗಿದ್ದರು. ಕುಟುಂಬವು ಸುಮಾರು ಮೂರು ದಶಕಗಳ ನಂತರ, ಅಂದರೆ 1999 ರಲ್ಲಿ ಸಹಾಯಕ ಕಮಿಷನರ್ (A C) ಅವರನ್ನು ಸಂಪರ್ಕಿಸಿತು. ಇದಕ್ಕೆ ಕಾರಣ ಅವರು ಜಮೀನು ಕಳೆದುಕೊಂಡಿದ್ದನ್ನು ಒಪ್ಪಿಕೊಂಡಿದ್ದರು ಎಂದಲ್ಲ. ಬದಲಿಗೆ, 1978 ರಲ್ಲಿ ಜಾರಿಗೆ ಬಂದಿದ್ದ ಈ ಕಾಯ್ದೆಯಡಿ ತಮಗಿರುವ ಹಕ್ಕುಗಳ ಬಗ್ಗೆ ಹೆಚ್ಚಿನ ಜನರಿಗೆ ತಿಳಿದಿರಲಿಲ್ಲ ಮತ್ತು ಮುಂದಿನ ಪೀಳಿಗೆಗೆ ಈ ಬಗ್ಗೆ ತಿಳಿವಳಿಕೆ ಬರಲು ಅಷ್ಟು ಸುದೀರ್ಘ ಸಮಯ ಬೇಕಾಯಿತು. ಹಾಗೆಯೇ ಶ್ರೀಮತಿ ಗಂಗಮ್ಮ ಅವರ ಪ್ರಕರಣದಲ್ಲಿ, ಅವರು ಅನಕ್ಷರಸ್ಥ ವಿಧವೆಯಾಗಿದ್ದು, ಅವರ ಮನೆಗೆ ಬೆಂಕಿ ಹಚ್ಚಿದ ಕಾರಣದಿಂದಾಗಿ ಅವರು ತಮ್ಮ ಮಕ್ಕಳೊಂದಿಗೆ ಪ್ರಾಣಭಯದಿಂದ ಓಡಿಹೋಗಬೇಕಾಯಿತು. ಇಂತಹ ಸಂದರ್ಭಗಳಲ್ಲಿ ವಿಳಂಬಕ್ಕೆ ಇರುವ ಕಾರಣಗಳು ಬಹಳ ಸ್ಪಷ್ಟವಾಗಿದೆ. ಅವನ್ನು ವಿವರಿಸಬೇಕಾದ ಅಗತ್ಯವೇ ಇಲ್ಲ. ಆದರೂ, ಇಂತಹ ಕಾರಣಗಳನ್ನು ಪರಿಗಣಿಸಲು ಕಾನೂನು ವ್ಯವಸ್ಥೆಯು ವಿಫಲವಾಗಿರುವುದು ಕಾನೂನು ಯಾರ ರಕ್ಷಣೆಗಾಗಿ ಜಾರಿಗೆ ಬಂದಿತ್ತೋ ಆ ಜನರ ದೈನಂದಿನ ಬದುಕಿನ ವಾಸ್ತವಕ್ಕೂ ಮತ್ತು ನಮ್ಮ ನ್ಯಾಯಾಂಗ ವ್ಯವಸ್ಥೆಗೂ ನಡುವೆ ಇರುವ ದೊಡ್ಡ ಕಂದಕವನ್ನು ಎತ್ತಿ ತೋರುತ್ತದೆ.

ಈ ಮಾದರಿಯು ಟೆಸ್ಟಿಮೋನಿಗಳುದ್ದಕ್ಕೂ ಕಾಣುತ್ತದೆ. ಶ್ರೀ ವೆಂಕಟೇಶ್ ಅವರ ಪ್ರಕರಣದಲ್ಲಿ, ಇವರ ಕುಟುಂಬವು ಕಾಯ್ದೆ ಜಾರಿಗೆ ಬಂದ ಮೂರು ವರ್ಷಗಳ ಒಳಗೆ, ಅಂದರೆ 1982 ರಲ್ಲಿಯೇ ಎಸಿ ಅವರನ್ನು ಸಂಪರ್ಕಿಸಿತ್ತು. ಆಗಲೂ ಕಾಲಮಿತಿಯ ಆಧಾರದ ಮೇಲೆ ಪ್ರಕರಣವನ್ನು ವಜಾಗೊಳಿಸಲಾಯಿತು. ಶ್ರೀ ನವೀನ್ ಅವರ ಪ್ರಕರಣದಲ್ಲಿ, ಕುಟುಂಬವು ವಂಚಿತರಾಗಿ ಹತ್ತು-ಹಲವು ವರ್ಷಗಳ ನಂತರ 2009 ರಲ್ಲಿ ಪ್ರಕರಣ ದಾಖಲಿಸಿದರು; ಕಾರಣ, ತಮ್ಮ ಹಕ್ಕುಗಳನ್ನು ಅರ್ಥಮಾಡಿಕೊಂಡು, ಈಗಾಗಲೇ ಹಿಂಸಾಚಾರ ಹಾಗೂ ರಾಜಕೀಯ ಪ್ರಭಾವ ಬಳಸುವುದಾಗಿ ಬೆದರಿಕೆ ಹಾಕಿದ್ದ ವ್ಯಕ್ತಿಗಳಿಗೆ ಸವಾಲು ಹಾಕುವ ಧೈರ್ಯ ಮಾಡಲು, ಕಾನೂನು ಸಹಾಯ ಪಡೆದುಕೊಳ್ಳಲು ಅಷ್ಟು ಸಮಯ ಬೇಕಾಯಿತು.

### 3.4 ವ್ಯವಸ್ಥಿತ ಮತ್ತು ಅಧಿಕಾರಶಾಹಿ ಅಡೆತಡೆಗಳು

ಮಂಜೂರಾತಿದಾರರು ಮತ್ತು ಅವರ ಕಾನೂನುಬದ್ಧ ವಾರಸುದಾರರು ಪಿಟಿಸಿಎಲ್ ಕಾಯ್ದೆಯಡಿ ತಮ್ಮ ಹಕ್ಕುಗಳ ಬಗ್ಗೆ ತಿಳಿದುಕೊಂಡು ಪ್ರಕರಣ ದಾಖಲಿಸಿದಾಗಲೂ ಸಹ, ಜಮೀನನ್ನು ಮರಳಿ ಪಡೆಯುವ ಹಾದಿಯನ್ನು ವ್ಯವಸ್ಥಿತವಾಗಿ ತಡೆಯುವ ಸಾಂಸ್ಥಿಕ ಅಡೆತಡೆಗಳನ್ನು ಎದುರಿಸಬೇಕಾಗುತ್ತದೆ. ಆರಂಭಿಕ ಹಂತದಲ್ಲಿ ದಾಖಲೆಗಳನ್ನು ಸಂಗ್ರಹಿಸುವ ಪ್ರಯತ್ನದಿಂದ ಹಿಡಿದು ಅನುಕೂಲಕರ ಆದೇಶದ ಅನುಸಾರವಾಗಿ ಸ್ವಾಧೀನವನ್ನು ಪಡೆದುಕೊಳ್ಳುವ ಅಂತಿಮ ಪ್ರಯತ್ನದವರೆಗೂ ಪ್ರತಿಯೊಂದು ಹಂತದಲ್ಲಿಯೂ ಈ ಅಡೆತಡೆಗಳನ್ನು ಎದುರಿಸಬೇಕಾಗುತ್ತದೆ.

#### ಕಾಣೆಯಾದ ಮತ್ತು ಅಲಭ್ಯ ದಾಖಲೆಗಳು

ಮಂಜೂರಾತಿ ದಾಖಲೆಗಳೆ ಪಿಟಿಸಿಎಲ್ ದಾವೆ ಹಾಕಲು ಮೂಲಾಧಾರವಾಗಿವೆ.

ಮೂಲ ಮಂಜೂರಾತಿ ಮತ್ತು ಅಂತಹ ಮಂಜೂರಾತಿಯು ಯಾವೆಲ್ಲ ಷರತ್ತುಗಳಿಗೆ ಒಳಪಟ್ಟಿದ್ದವು ಎಂಬ ಪುರಾವೆಗಳಿಲ್ಲದೆ ಮಂಜೂರಾತಿದಾರರು ಕಾಯ್ದೆಯ ರಕ್ಷಣೆ ಪಡೆಯಲು ಅಗತ್ಯವಿರುವ ಕೆಲವು ಮೂಲಭೂತ ಸತ್ಯಗಳನ್ನು ಸ್ಥಾಪಿಸಲು ಸಾಧ್ಯವಿರುವುದಿಲ್ಲ. ಈ ದಾಖಲೆಗಳು ಅತ್ಯಂತ ಅವಶ್ಯಕತೆಯಿರುವ ಸಮಯದಲ್ಲಿಯೇ ಲಭ್ಯವಿರುವುದಿಲ್ಲ ಎಂಬುದನ್ನು ಹಲವಾರು ಟೆಸ್ಟಿಮೋನಿಗಳು ಬಹಿರಂಗಪಡಿಸುತ್ತವೆ.

- ಶ್ರೀ ರಂಗನಾಯ್ಕ್ ಅವರ ಪ್ರಕರಣದಲ್ಲಿ, ಯಾವುದೇ ದಾಖಲೆಗಳು ಲಭ್ಯವಿಲ್ಲ ಎಂದು ಅವರಿಗೆ ಪದೇ ಪದೇ ತಿಳಿಸಲಾಯಿತು. ತಾಲ್ಲೂಕು ಕಚೇರಿ ಅಧಿಕಾರಿಗಳಿಗೆ ಲಂಚದ ಹಣ ಪಾವತಿಸಿದ ನಂತರವಷ್ಟೇ ಕೆಲವು ದಾಖಲೆಗಳನ್ನು ಮಾತ್ರ ಅವರು ಪಡೆಯಲು ಸಾಧ್ಯವಾಯಿತು. ಅಂತಿಮವಾಗಿ ಏಸಿ ಆದೇಶವು ಮಂಜೂರಾತಿ ವರ್ಷವನ್ನು ತಪ್ಪಾಗಿ ದಾಖಲಿಸಿದೆ ಎಂಬುದು ಬಹಿರಂಗಗೊಂಡಿದ್ದು; ಈ ವ್ಯತ್ಯಾಸವು ಕುಟುಂಬದ ದಾವೆಗೆ ಮಾರಕವಾಗಿ ಪರಿಣಮಿಸಿತು.
- ಶ್ರೀ ನರಸಿಂಹಯ್ಯ ಅವರ ಪ್ರಕರಣದಲ್ಲಿ, ಎಸಿ ಆರಂಭದಲ್ಲಿ ಮಂಜೂರಾತಿ ದಾಖಲೆಗಳನ್ನು ಒಪ್ಪಿಕೊಂಡು ಅದರ ಆಧಾರದ ಮೇಲೆ ಜಮೀನನ್ನು ಹಿಂದಿರುಗಿಸಲು ನಿರ್ದೇಶಿಸಿದರು. ಆದರೆ, ತರುವಾಯ 2018 ರಲ್ಲಿ ಮೂಲ ಮಂಜೂರಾತಿ ದಾಖಲೆಗಳು ಲಭ್ಯವಿಲ್ಲ ಎಂದು ಪ್ರತಿಪಾದಿಸಿ ಮಂಜೂರಾತಿದಾರರ ವಿರುದ್ಧ ಆದೇಶ ಹೊರಡಿಸಿದರು. ವಾಸ್ತವವಾಗಿ, ದಾಖಲೆಗಳು ಹಿಂದಿನ ಲಭ್ಯವಿದ್ದವು ಮತ್ತು ಜಮೀನನ್ನು ಹಿಂದಿರುಗಿಸಬೇಕು ಎಂಬ ಆದೇಶಕ್ಕೆ ಅದುವೇ ಆಧಾರವಾಗಿದ್ದವು. ತದನಂತರದಲ್ಲಿ ಈ ದಾಖಲೆಗಳು ಅಲಭ್ಯವಾಗಿರುವುದು ಆಕಸ್ಮಿಕವಲ್ಲ, ಬದಲಿಗೆ, ಖರೀದಿದಾರರ ಹಿತಾಸಕ್ತಿಗಳಿಗೆ ಪೂರಕವಾಗಿ ಆಯ್ದ ದಾಖಲೆಗಳನ್ನು ಮಾತ್ರವೇ ನಿರ್ವಹಿಸುವ ಮಾದರಿ ಇದಾಗಿದೆ.

ಮಂಜೂರಾದ ಜಮೀನುಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನಿರ್ವಹಿಸುವ ಜವಾಬ್ದಾರಿ ಸರ್ಕಾರದ್ದಾಗಿದೆ ಎಂಬ ಅಂಶದ ಬೆಳಕಿನಲ್ಲಿಯೇ ಇದನ್ನು ನೋಡಬೇಕಿದೆ. ಬದಲಿಗೆ, ಜ್ಯೂರಿ ಸಮಿತಿಯ ಮುಂದೆ ಮಂಡಿಸಲಾದ ಪ್ರಕರಣಗಳಲ್ಲಿ, ಸಂಬಂಧಪಟ್ಟ ಕಂದಾಯ ಅಧಿಕಾರಿಗಳು ಖರೀದಿದಾರರೊಂದಿಗೆ ಶಾಮೀಲಾಗಿ ಅವರಿಗೆ ಅನುಕೂಲ ಮಾಡಿಕೊಡಲು ದಾಖಲೆಗಳನ್ನು ತಿದ್ದಿರುವುದು ಅಥವಾ ಮುಚ್ಚಿಟ್ಟಿರುವುದು ಬೆಳಕಿಗೆ ಬಂದಿದೆ.

**ಭ್ರಷ್ಟಾಚಾರ ಮತ್ತು ಶಾಮೀಲಾತಿ**

ಸಾರ್ವಜನಿಕ ಅಹವಾಲಿನ ಟೆಸ್ಟಿಮೋನಿಗಳು ವಿವಿಧ ಹಂತಗಳಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿರುವ ಭ್ರಷ್ಟಾಚಾರವನ್ನು ಬಹಿರಂಗಪಡಿಸುತ್ತವೆ. ಶ್ರೀ ರಂಗನಾಯಕ್ ಅವರ ಪ್ರಕರಣದಲ್ಲಿ ಸಹಾಯಕ ಕಮಿಷನರ್ (AC) ನ್ಯಾಯಾಲಯದ ಸಿಬ್ಬಂದಿಯು ಅವರ ಪರವಾಗಿ ತೀರ್ಪು ಕೊಡಿಸುವುದಾಗಿ ಹಣಕ್ಕೆ ಬೇಡಿಕೆಯಿಟ್ಟಿದ್ದರು. ಆದರೆ, ಹಣ ನೀಡಲು ನಿರಾಕರಿಸಿದಾಗ ತೀರ್ಪು ಮಂಜೂರಾತಿದಾರರ ವಿರುದ್ಧವಾಗಿ ಬಂದಿತು. ಅಷ್ಟೇ ಅಲ್ಲದೆ, ಸಹಾಯಕ ಕಮಿಷನರ್ (AC) ಅವರ ಆದೇಶದಲ್ಲಿ ಜಮೀನು ಮಂಜೂರಾದ ವರ್ಷವನ್ನೇ ತಪ್ಪಾಗಿ ದಾಖಲಿಸಲಾಗಿತ್ತು.

ಇದು ನೇರವಾಗಿ ಖರೀದಿಗಾರರಿಗೆ ಅನುಕೂಲ ಮಾಡಿಕೊಟ್ಟಿತು ಮತ್ತು ಪಿಟಿಸಿಎಲ್ (PTCL) ಕಾಯ್ದೆಯ ಉಲ್ಲಂಘನೆಯಾಗಿದೆ ಎಂದು ಸ್ಪಷ್ಟಪಡಿಸಿದ್ದ ತಹಶೀಲ್ದಾರರ ವರದಿಗೆ ವಿರುದ್ಧವಾಗಿತ್ತು. ಮತ್ತೊಂದು ಪ್ರಕರಣದಲ್ಲಿ, ಖರೀದಿದಾರರು ತಮಗೆ ಜಿಲ್ಲಾಧಿಕಾರಿಗಳು (DC) ಅನುಮತಿ ಪತ್ರ ನೀಡಿದ್ದಾರೆ ಎಂದು ಪ್ರತಿಪಾದಿಸಿದ್ದರು; ಆದರೆ ಮಾಹಿತಿ ಹಕ್ಕು (R T I ) ಕಾಯ್ದೆಯಡಿ ಪಡೆದ ಉತ್ತರದಲ್ಲಿ ಅಂತಹ ಯಾವುದೇ ಅನುಮತಿ ಪತ್ರ ಸರ್ಕಾರಿ ದಾಖಲೆಗಳಲ್ಲೇ ಇಲ್ಲ ಎಂಬುದು ಸಾಬೀತಾಗಿದೆ.

**ಕಾನೂನು ಪ್ರಾತಿನಿಧ್ಯಲ್ಲಿಯೂ ವಂಚನೆ**

ಮಂಜೂರಾತಿದಾರರಿಗೆ ಪರಿಣಾಮಕಾರಿ ಮತ್ತು ನಿಷ್ಠಾವಂತ ಕಾನೂನು ಪ್ರಾತಿನಿಧ್ಯವನ್ನು ಪಡೆಯಲು ಸಾಧ್ಯವಾಗದಿರುವುದು ಪದೇ ಪದೇ ಕಂಡುಬರುತ್ತದೆ

- ಶ್ರೀ ರಾಜಪ್ಪ ಅವರ ಪ್ರಕರಣದಲ್ಲಿ, ಬೆಂಗಳೂರು ಮೂಲದ ವಕೀಲರೊಬ್ಬರು ಸುಪ್ರೀಂ ಕೋರ್ಟ್‌ನಲ್ಲಿ ಅವರ ಪರವಾಗಿ ವಾದಿಸಲು ವಕೀಲರನ್ನು ನೇಮಿಸಿಕೊಡುವುದಾಗಿ ನಂಬಿಸಿದ್ದ ಕಾರಣ ಅವರು 25,000 ರೂ.ಗಳನ್ನು ಪಾವತಿಸಿದ್ದರು, ಆದರೆ ಆ ವಕೀಲರು ರಾಜಪ್ಪನವರ ಪರವಾಗಿ ವಕೀಲರನ್ನು ನೇಮಿಸಲೇ ಇಲ್ಲ. ಹೀಗಾಗಿ, ಸುಪ್ರೀಂ ಕೋರ್ಟು ರಾಜಪ್ಪ ಅವರ ಪ್ರಕರಣದಲ್ಲಿ ಅವರ ವಿರುದ್ಧ ತೀರ್ಪು ನೀಡುವ ವೇಳೆ ರಾಜಪ್ಪನವರ ಪರವಾಗಿ ವಾದಿಸಲು ವಕೀಲರೇ ಇರಲಿಲ್ಲ.
- ಶ್ರೀಮತಿ ಗಂಗಮ್ಮ ಅವರ ಪ್ರಕರಣದಲ್ಲಿ, ವಕೀಲರು ಕೇವಲ ಬೇಜವಾಬ್ದಾರಿತನ ಮೆರೆದಿದ್ದರು ಮಾತ್ರವಲ್ಲ, ಆ ವಕೀಲರು ಎದುರು ಪಕ್ಷದವರೊಂದಿಗೆ ಶಾಮೀಲಾಗಿ, ವಿವಾದಿತ ಜಮೀನಿನ ಒಂದು ಭಾಗವನ್ನು ತಾವೇ ಕಬಳಿಸಿದ್ದರು.

**3.5 ಕಂದಾಯ ಇಲಾಖಾ ವ್ಯವಸ್ಥೆಯ ಪಾತ್ರ**

ಗ್ರಾಮ ಲೆಕ್ಕಿಗ(ವಿ.ಎ), ಕಂದಾಯ ನಿರೀಕ್ಷಕ (ಆರ್.ಐ), ತಹಶೀಲ್ದಾರ್, ಸಹಾಯಕ ಕಮಿಷನರ್ ಮತ್ತು ಡೆಪ್ಯುಟಿ ಕಮಿಷನರ್ ಅವರನ್ನು ಒಳಗೊಂಡಿರುವ ಕಂದಾಯ ವ್ಯವಸ್ಥೆಯೇ ಪಿಟಿಸಿಎಲ್ (PTCL) ಕಾಯ್ದೆಯನ್ನು ಜಾರಿಗೊಳಿಸುವ ಪ್ರಮುಖ ಪ್ರಾಧಿಕಾರವಾಗಿದೆ. ಈ ಅಧಿಕಾರಿಗಳ ಮುಖಾಂತರವೇ ಜಮೀನನ್ನು ಹಿಂದಿರುಗಿಸುವ ಅರ್ಜಿಗಳ ವಿಚಾರಣೆ ನಡೆಯುತ್ತದೆ; ಅಷ್ಟೇ ಅಲ್ಲದೆ, ಸಂತ್ರಸ್ತರ ಪರವಾಗಿ ಆದೇಶ ಬಂದಾಗ ಜಮೀನಿನ ಸ್ವಾಧೀನವನ್ನು ಮೂಲ ಮಂಜೂರಾತಿದಾರರಿಗೆ ಹಸ್ತಾಂತರಿಸಬೇಕಿರುವುದೂ ಇವರ ಮೂಲಕವೇ ಆಗಿದೆ. ಆದರೆ, ಈ ಇಲಾಖಾ ವ್ಯವಸ್ಥೆಯು ಕೇವಲ ಮೂಕ ಪ್ರೇಕ್ಷಕನಂತೆ ನಿಷ್ಕ್ರಿಯವಾಗಿ ಉಳಿದು ವಿಫಲವಾಗಿಲ್ಲ, ಬದಲಿಗೆ ಈ ಕಾಯ್ದೆಯ ಮೂಲ ಉದ್ದೇಶವನ್ನೇ ವ್ಯವಸ್ಥಿತವಾಗಿ ಬುಡಮೇಲು ಮಾಡುವ ಮೂಲಕ ಸಕ್ರಿಯವಾಗಿ ದ್ರೋಹ ಬಗೆದಿದೆ ಎಂಬುದನ್ನು ಟೆಸ್ಟಿಮೋನಿಗಳು ಬಹಿರಂಗಪಡಿಸುತ್ತವೆ.

**ಅನುಕೂಲಕರ ಆದೇಶಗಳನ್ನು ಜಾರಿಗೊಳಿಸಲು ನಿರಾಕರಣೆ**

ಎಸಿ ಅಥವಾ ಡಿಸಿಯಿಂದ ಅನುಕೂಲಕರ ಆದೇಶವನ್ನು ಪಡೆಯುವುದು

ಮಂಜೂರಾತಿದಾರರ ಹೋರಾಟದ ಅಂತ್ಯವಲ್ಲ; ಆ ಆದೇಶವನ್ನು ಜಾರಿಗೊಳಿಸಲು ಇದು ಕೇವಲ ಮತ್ತೊಂದು ಹೋರಾಟದ ಆರಂಭವಾಗಿರುತ್ತದೆ.

- ಶ್ರೀ ಕಿರಣ್ ಕುಮಾರ್ ಅವರ ಪ್ರಕರಣದಲ್ಲಿ, ಎಸಿ ಮತ್ತು ಡಿಸಿ ಇಬ್ಬರಿಂದಲೂ ಸ್ಪಷ್ಟ ಆದೇಶಗಳಿದ್ದರೂ, ಖರೀದಿದಾರರ ರಾಜಕೀಯ ಪ್ರಭಾವವನ್ನು ಕಾರಣವಾಗಿ ಉಲ್ಲೇಖಿಸಿ ತಹಶೀಲ್ದಾರರು ಅವರ ಕುಟುಂಬಕ್ಕೆ ಸ್ವಾಧೀನ ಮತ್ತು ಮೂಲ ದಾಖಲೆಗಳನ್ನು ಹಸ್ತಾಂತರಿಸಲು ನಿರಾಕರಿಸಿದರು.
- ಶ್ರೀ ಶಾಂತಕುಮಾರ್ ಅವರ ಪ್ರಕರಣದಲ್ಲಿ, ಅವರ ಕುಟುಂಬವು ಒಂದು ದಶಕಕ್ಕೂ ಹೆಚ್ಚು ಕಾಲ ಕಂದಾಯ ಪ್ರಾಧಿಕಾರಗಳ ಎದುರು ಹಲವಾರು ಬಾರಿ ಗೆದ್ದಿದ್ದರೂ ಕೂಡಾ, ತಹಶೀಲ್ದಾರ್ ಮತ್ತು ಇತರ ಅಧಿಕಾರಿಗಳು ಜಮೀನನ್ನು ಹಸ್ತಾಂತರಿಸಲು ಸತತವಾಗಿ ನಿರಾಕರಿಸಿದರು.

ಇದರ ಫಲವಾಗಿ ಮಂಜೂರಾತಿದಾರರು ಕೇವಲ ದಾಖಲಾತಿಗಳಲ್ಲಿ ಜಯ ಸಾಧಿಸಿದ್ದರೂ ಕೂಡಾ, ವಾಸ್ತವದಲ್ಲಿ, ಅದನ್ನು ಸ್ವಾಧೀನವಾಗಿ ಪರಿವರ್ತಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.

**ಪೊಲೀಸರ ನಿಷ್ಕ್ರಿಯತೆ ಮತ್ತು ಶಾಮೀಲಾತಿ**

ಪ್ರಕರಣ ನಡೆಯುತ್ತಿರುವ ಸಮಯದಲ್ಲಿ ಮತ್ತು ಜಮೀನು ಹಿಂದಿರುಗಿಸಲು ಆದೇಶಗಳು ಹೊರಟ ನಂತರವೂ ಸ್ವಾಧೀನ ಪಡೆಯಲು ಪ್ರಯತ್ನಿಸುವಾಗ ಹಿಂಸಾಚಾರ ಹಾಗೂ ಬೆದರಿಕೆಗಳನ್ನು ಎದುರಿಸುವ ಮಂಜೂರಾತಿದಾರರನ್ನು ರಕ್ಷಿಸುವಲ್ಲಿ ಪೊಲೀಸರು ನಿರ್ಣಾಯಕ ಪಾತ್ರವನ್ನು ಹೊಂದಿದ್ದಾರೆ. ಟೆಸ್ಟಿಮೋನಿಗಳು ಪೊಲೀಸರ ವೈಫಲ್ಯವನ್ನು ಬಹಿರಂಗಪಡಿಸುತ್ತವೆ; ಇದಕ್ಕೆ ಕಾರಣ ನಿಷ್ಕ್ರಿಯತೆ ಮಾತ್ರವಲ್ಲ. ಬದಲಿಗೆ, ಮಂಜೂರುದಾರರ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಮತ್ತು ಮಂಜೂರುದಾರರನ್ನು ವಂಚಿಸಿದ ಪ್ರಬಲರ ಪರವಾಗಿ ಕಾರ್ಯನಿರ್ವಹಿಸುವ ಪ್ರವೃತ್ತಿಯೂ ಇದಕ್ಕೆ ಕಾರಣವಾಗಿದೆ.

- ಶ್ರೀ ರಾಜಪ್ಪ ಅವರ ಪ್ರಕರಣದಲ್ಲಿ, ಪೊಲೀಸರು ಇವರ ದೂರುಗಳ ಮೇಲೆ ಪದೇ ಪದೇ ಕ್ರಮ ಕೈಗೊಳ್ಳಲು ವಿಫಲರಾದರು. ಹೆಚ್ಚುವರಿಯಾಗಿ, ಇವರು ತಮ್ಮ ಕೊಯ್ಲು ಮಾಡಿದ ಬೆಳೆಗಳನ್ನು ಮರುಪಡೆಯಲು ಪ್ರಯತ್ನಿಸಿದಾಗ ಪೊಲೀಸರು ಇವರಿಗೇ ಬೆದರಿಕೆ ಹಾಕಿದರು, ಮತ್ತು ಇವರು ಡಿಸಿ ಅವರನ್ನು ಸಂಪರ್ಕಿಸಿದ ನಂತರವೇ ಇವರಿಗೆ ರಕ್ಷಣೆ ದೊರೆಯಿತು.
- ಶ್ರೀ ನರಸಿಂಹಯ್ಯ ಅವರ ಪ್ರಕರಣದಲ್ಲಿ, ಗಂಭೀರವಾದ ಹಲ್ಲೆಗಳಾಗಿದ್ದರೂ ಕೂಡ ಪೊಲೀಸರು ಆರಂಭದಲ್ಲಿ ಎಫ್.ಐ.ಆರ್ ದಾಖಲಿಸಲು ನಿರಾಕರಿಸಿದರು ಮತ್ತು ಕೇವಲ ಎನ್‌ಸಿಆರ್ ದೂರುಗಳನ್ನು ಮಾತ್ರ ದಾಖಲಿಸಿಕೊಂಡರು. ದಲಿತ ನಾಯಕರು ಮತ್ತು ಡಿವೈಎಸ್‌ಪಿ ಅವರು ಮಧ್ಯಪ್ರವೇಶಿಸಿದ ನಂತರವಷ್ಟೇ ಎಫ್‌ಐಆರ್ ದಾಖಲಿಸಲಾಯಿತು.

- ಶ್ರೀ ಕಿರಣ್ ಕುಮಾರ್ ಅವರ ಪ್ರಕರಣದಲ್ಲಿ, ಖರೀದಿದಾರರು ರಾಜಕೀಯ ಸಂಪರ್ಕ ಹೊಂದಿದ್ದ ಕಾರಣದಿಂದಾಗಿ ಯಾವ ಪೊಲೀಸ್ ಅಧಿಕಾರಿಯೂ ಅವರ ದೂರು ಸ್ವೀಕರಿಸುವುದಿಲ್ಲವೆಂದು ನೇರವಾಗಿ ಮುಖಕ್ಕೆ ಹೊಡೆದಂತೆಯೇ ಹೇಳಿಬಿಟ್ಟರು.

ಇಲ್ಲಿ ಎದ್ದು ಕಾಣುವುದು ಕೇವಲ ಅಸಮರ್ಥತತೆಯಲ್ಲ. ಬದಲಿಗೆ, ಕಾನೂನು ಯಾರನ್ನು ರಕ್ಷಿಸಲು ರೂಪಿಸಲಾಗಿದೆಯೋ ಆ ವ್ಯಕ್ತಿಗಳ ಹಿತಾಸಕ್ತಿಗಳ ವಿರುದ್ಧ ಶಕ್ತಿಶಾಲಿಗಳ ಹಿತಾಸಕ್ತಿಗಳೊಂದಿಗೆ ಇಡೀ ವ್ಯವಸ್ಥೆಯು ಸಾಂಸ್ಥಿಕವಾಗಿ ಕೈಜೋಡಿಸಿದೆ.

### 3.6 ಕಾನೂನು ಹೋರಾಟ ಹಾಗು ಬಡತನದ ಸುಳಿಚಕ್ರ

ಟೆಸ್ಟಿಮೋನಿಗಳು ಪಿಟಿಸಿಎಲ್ ಅನುಷ್ಠಾನದ ವೈಫಲ್ಯದ ಅತ್ಯಂತ ವಿನಾಶಕಾರಿ ಆಯಾಮವನ್ನು ಬಹಿರಂಗಪಡಿಸುತ್ತವೆ; ಜಮೀನನ್ನು ಹಿಂದಿರುಗಿಸಬೇಕೆಂದು ಕೋರುವ ಪ್ರಕ್ರಿಯೆಯೇ ಸ್ವತಃ ಜನರನ್ನು ಮತ್ತೊಮ್ಮೆ ವಂಚಿನೆಗೆ ಒಳಗಾಗಿಸುವ ಸಾಧನವಾಗಿ ಪರಿಣಮಿಸುತ್ತದೆ.

ಬಹುಪಾಲು ಮಂಜೂರುದಾರರು ಕೃಷಿ ಕಾರ್ಮಿಕರು ಇಲ್ಲವೇ ಸಣ್ಣ ಸಾಗುವಳಿದಾರರಾಗಿದ್ದು, ಅವರಿಗೆ ಮಂಜೂರಾದ ಜಮೀನೇ ಅವರ ಜೀವನೋಪಾಯದ ಏಕೈಕ ಮಾರ್ಗವಾಗಿತ್ತು. ಈಗಾಗಲೇ ತಮಗಿದ್ದ ಪ್ರಮುಖ ಆರ್ಥಿಕ ಆಸ್ತಿಯನ್ನು ಕಳೆದುಕೊಂಡಿರುವ ಮಂಜೂರಾತಿದಾರರನ್ನು ಖರೀದಿದಾರರು ತಮ್ಮ ಅಪಾರ ಆರ್ಥಿಕ ಮತ್ತು ರಾಜಕೀಯ ಸಂಪನ್ಮೂಲಗಳನ್ನು ಬಳಸಿ ಹಲವು ನ್ಯಾಯಾಲಯಗಳಲ್ಲಿ ಬಹಳ ದೀರ್ಘಾವಧಿ ಕಾಲ ಮೊಕದ್ದಮೆಗಳಿಗೆ ಎಳೆದು ತರುತ್ತಾರೆ. ಆ ಪ್ರಕರಣವನ್ನು ನಡೆಸುವ ವೆಚ್ಚವು ಕೂಡಾ ಮಂಜೂರುದಾರರು ಭರಿಸಿರುವ ನಷ್ಟವನ್ನು ಮತ್ತಷ್ಟು ಹೆಚ್ಚಿಸಿ ಕುಟುಂಬದ ಬಳಿ ಉಳಿದಿರುವ ಅಷ್ಟಿಷ್ಟು ಆರ್ಥಿಕ ಶಕ್ತಿಯನ್ನೂ ಕೂಡ ಸಂಪೂರ್ಣವಾಗಿ ನಾಶಮಾಡುತ್ತದೆ.

ಟೆಸ್ಟಿಮೋನಿಗಳಲ್ಲಿ ದಾಖಲಾದ ಆರ್ಥಿಕ ಅಂಕಿ-ಅಂಶಗಳು ಬಹಳವೇ ತೀಕ್ಷ್ಣವಾಗಿವೆ: ಶ್ರೀ ರಾಜಪ್ಪ ಅವರ ಪ್ರಕರಣದಲ್ಲಿ, ಅವರ ಕುಟುಂಬವು ಎರಡು ದಶಕಗಳಿಗೂ ಹೆಚ್ಚು ಕಾಲ ಅಲೆದಾಡಿ ಮೊಕದ್ದಮೆಗಾಗಿ 7 ರಿಂದ 8 ಲಕ್ಷ ರೂ.ಗಳನ್ನು ವ್ಯಯಿಸಿದೆ. ಶ್ರೀ ನರಸಿಂಹಯ್ಯ ಅವರ ಪ್ರಕರಣದಲ್ಲಿ ಅವರ ಕುಟುಂಬವು ಅಷ್ಟೇ ಮೊತ್ತವನ್ನು ಖರ್ಚು ಮಾಡಿದೆ. ಇಂದಿಗೂ ಸುಪ್ರೀಂ ಕೋರ್ಟ್‌ನಲ್ಲಿ ಮೊಕದ್ದಮೆಯ ವಿಚಾರಣೆ ಮುಂದುವರೆದಿದೆ. ಶ್ರೀ ನವೀನ್ ಅವರ ಪ್ರಕರಣದಲ್ಲಿ, ಅವರ ಕುಟುಂಬವು ತನ್ನ ಉಳಿತಾಯವನ್ನೆಲ್ಲಾ ಸಂಪೂರ್ಣವಾಗಿ ಕಳೆದುಕೊಂಡು, ದೊಡ್ಡ ಮಟ್ಟದ ಸಾಲವನ್ನು ಮಾಡಿಕೊಂಡು ತಮ್ಮದೇ ಗ್ರಾಮದಿಂದ ವಲಸೆ ಹೋಗಬೇಕಾದ ಪರಿಸ್ಥಿತಿ ಉಂಟಾಯಿತು.

## 4. ಪ್ರಮುಖ ಸಮಸ್ಯೆಗಳು

ಸಾರ್ವಜನಿಕ ಅಹವಾಲು ಕಾರ್ಯಕ್ರಮದಲ್ಲಿ ದಾಖಲಾದ ಟೆಸ್ಟಿಮೋನಿಗಳು ಮತ್ತು ಏಳು ಜಿಲ್ಲೆಗಳಲ್ಲಿ ನಡೆಸಲಾದ ಅಧ್ಯಯನದ ಫಲಿತಾಂಶಗಳು ಪಿಟಿಸಿಎಲ್ (PTCL) ಕಾಯ್ದೆಯು ಜಾರಿಯಲ್ಲಿದ್ದರೂ ಪ್ರಾಯೋಗಿಕವಾಗಿ ಅದು ಹೇಗೆ ಸಂಪೂರ್ಣವಾಗಿ ನಿಷ್ಪರಿಣಾಮಕಾರಿಯಾಗಿದೆ ಎಂಬುದನ್ನು ಸ್ಪಷ್ಟವಾಗಿ ಬಹಿರಂಗಪಡಿಸುತ್ತವೆ.

ಈ ನಿಷ್ಪರಿಣಾಮಕಾರಿತನಕ್ಕೆ ಎರಡು ಪ್ರಮುಖ ಮೂಲಗಳಿವೆ:

- ಮೊದಲನೆಯದಾಗಿ, ನ್ಯಾಯಾಂಗದ ತೀರ್ಪುಗಳು ಕಾಯ್ದೆಯ ರಕ್ಷಣಾತ್ಮಕ ವ್ಯಾಪ್ತಿಯನ್ನು ಕಿರಿದಾಗಿಸಿವೆ ಮತ್ತು ಕಾಯ್ದೆಯ ಉದ್ದೇಶವನ್ನೇ ಸೋಲಿಸುವ ಕಾನೂನು ಸಿದ್ಧಾಂತಗಳನ್ನು( ಲೀಗಲ್ ಡಾಕ್ಟ್ರಿನ್ ) ಪರಿಚಯಿಸಿವೆ.
- ಎರಡನೆಯದಾಗಿ, ಸರ್ಕಾರವು ತನ್ನ ಜವಾಬ್ದಾರಿಗಳಿಂದ ನುಣಿಚಿಕೊಂಡಿರುವುದರಿಂದ ಮಂಜೂರಾತಿದಾರರಿಗೆ ಯಾವುದೇ ಸಾಂಸ್ಥಿಕ ಬೆಂಬಲ ದೊರೆಯದೆ ಪ್ರತಿ ಹಂತದಲ್ಲೂ ಅವರು ಅಸಹಾಯಕರಾಗಿದ್ದಾರೆ. ಇವೆರಡೂ ಕಾರಣಗಳು ಕೂಡಿ ಕಾಯ್ದೆಯು ಜಮೀನು ಹಿಂದಿರುಗಿಸಲಾಗುತ್ತದೆ ಎಂದು ಕಾಯ್ದೆಯು ನೀಡಿದ್ದ ಭರವಸೆಯು ಹೆಚ್ಚಿನ ಮಂಜೂರಾತಿದಾರರ ಪ್ರಕರಣಗಳಲ್ಲಿ ಈಡೇರದಂತಹ ಪರಿಸ್ಥಿತಿ ನಿರ್ಮಿಸಿವೆ. ಮುಂದಿನ ವಿಭಾಗಗಳಲ್ಲಿ ಗುರುತಿಸಲಾದ ಸಮಸ್ಯೆಗಳು ಈ ವೈಫಲ್ಯದ ಆಯಾಮಗಳನ್ನು ಮತ್ತು ಯಾವ ಸೇವೆ ಸಲ್ಲಿಸಲು ಕಾಯ್ದೆಯನ್ನು ಜಾರಿಗೆ ತರಲಾಯಿತೋ ಅಂತಹ ಸಾಂವಿಧಾನಿಕ ಉದ್ದೇಶವನ್ನೇ ಅವು ಹೇಗೆ ಸೋಲಿಸಿವೆ ಎಂಬುದನ್ನು ದಾಖಲಿಸುತ್ತವೆ.

## 4.1 ಮಂಜೂರಾದ ಜಮೀನು ಎಂದರೇನು: ಕಾಯ್ದೆಯ ವ್ಯಾಪ್ತಿ

ಯಾವುದೇ ಪಿಟಿಸಿಎಲ್ ಪ್ರಕರಣದಲ್ಲಿ ಕೇಳಿಬರುವ ಆರಂಭಿಕ ಪ್ರಶ್ನೆಯೆಂದರೆ ವಿವಾದಿತ ಜಮೀನು ಕಾಯ್ದೆಯ ಸೆಕ್ಷನ್ 3 (1)(b) ಅಡಿಯಲ್ಲಿ "ಮಂಜೂರಾದ ಜಮೀನು" ಎಂಬ ವ್ಯಾಖ್ಯಾನದ ವ್ಯಾಪ್ತಿಗೆ ಬರುತ್ತದೆಯೇ ಎಂಬುದಾಗಿದೆ. ಮಂಜೂರಾದ ಜಮೀನಿನ ವ್ಯಾಖ್ಯಾನವು ಈ ಕೆಳಗಿನಂತಿದೆ:

"ಮಂಜೂರಾತಿ ಭೂಮಿ (ಅನುದಾನಿತ ಭೂಮಿ)" ಎಂದರೆ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ ವ್ಯಕ್ತಿಗೆ ಸರ್ಕಾರವು ಮಂಜೂರು ಮಾಡಿದ ಯಾವುದೇ ಭೂಮಿ ಎಂದರ್ಥ ಹಾಗು ಇದರಲ್ಲಿ, ಪ್ರಸ್ತುತ ಜಾರಿಯಲ್ಲಿರುವ ಕೃಷಿ ಸುಧಾರಣೆಗಳು ಅಥವಾ ಭೂಮಿಯ ಗರಿಷ್ಠ ಮಿತಿ (land ceiling) ಅಥವಾ ಇನಾಂಗಳ ರದ್ದತಿಗೆ ಸಂಬಂಧಿಸಿದ ಅನ್ವಯವಾಗುವ ಕಾನೂನಿನ ಅಡಿಯಲ್ಲಿ ಅಂತಹ ವ್ಯಕ್ತಿಗೆ ಹಂಚಿಕೆ ಮಾಡಲಾದ ಅಥವಾ ಮಂಜೂರು ಮಾಡಲಾದ ಭೂಮಿಯೂ ಒಳಗೊಂಡಿರುತ್ತದೆ; ಆದರೆ ವಂಶಪಾರಂಪರಿಕ ಹುದ್ದೆಗಳು ಅಥವಾ ಹಕ್ಕುಗಳಿಗೆ ಸಂಬಂಧಿಸಿದ ಕಾನೂನು ಇದರಲ್ಲಿ ಒಳಪಡುವುದಿಲ್ಲ. "ಮಂಜೂರು ಮಾಡಲಾಗಿದೆ" ಎಂಬ ಪದವನ್ನು ಸಹ ಇದೇ ಅರ್ಥದಲ್ಲಿ ವ್ಯಾಖ್ಯಾನಿಸಬೇಕು "

ಈ ವ್ಯಾಖ್ಯಾನವು ಉದ್ದೇಶಪೂರ್ವಕವಾಗಿಯೇ ವಿಶಾಲವಾಗಿದೆ. ಇದರಡಿ ಎಸ್‌ಸಿ/ಎಸ್‌ಟಿ ವ್ಯಕ್ತಿಗಳಿಗೆ ನೇರವಾಗಿ ಮಂಜೂರು ಮಾಡಲಾದ ಸರ್ಕಾರಿ ಮಂಜೂರಾತಿಗಳು ಮಾತ್ರವಲ್ಲದೆ ಭೂ ಸುಧಾರಣೆಗಳು,ಗರಿಷ್ಠ ಭೂ ಮಿತಿ ಮತ್ತು ಇನಾಂ ರದ್ದತಿ ಕಾನೂನುಗಳ ಅಡಿಯಲ್ಲಿ ಹಂಚಿಕೆ ಮಾಡಲಾದ ಅಥವಾ ಮಂಜೂರು ಮಾಡಲಾದ ಜಮೀನುಗಳನ್ನೂ ಒಳಗೊಳ್ಳುತ್ತದೆ. ಈ ವ್ಯಾಖ್ಯಾನದ ಮೂಲಕ ಹಾದುಹೋಗುವ ಸಾಮಾನ್ಯ ಅಂಶವೆಂದರೆ, ಈ ಭೂಮಿಯನ್ನು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ ವ್ಯಕ್ತಿಗೆ ಸರ್ಕಾರವು

ಮಂಜೂರು ಮಾಡಿರುವುದು; ಇದು ಈ ವರದಿಯ 1.2ನೇ ವಿಭಾಗದಲ್ಲಿ ದಾಖಲಿಸಿರುವ ವಿತರಣಾತ್ಮಕ ನ್ಯಾಯದ ಸಾಂವಿಧಾನಿಕ ಆಶಯದ ಒಂದು ಭಾಗವಾಗಿದೆ.

ಆದರೂ, ನ್ಯಾಯಾಂಗದ ತೀರ್ಪುಗಳು ಈ ವ್ಯಾಖ್ಯಾನವನ್ನು ಅದರ ಪಠ್ಯ ಮತ್ತು ಉದ್ದೇಶಗಳು ಎರಡಕ್ಕೂ ವಿರುದ್ಧವಾಗಿ ಕಿರಿದಾಗಿಸಿವೆ. ನಂಜಮ್ಮ ವಿರುದ್ಧ ಕರ್ನಾಟಕ ಸರ್ಕಾರ [ILR 2002 KAR 2795] ಪ್ರಕರಣದಲ್ಲಿ, ಕರ್ನಾಟಕ ಹೈಕೋರ್ಟ್ ಗ್ರೋ ಮೋರ್ ಫುಡ್ (GMF) ಯೋಜನೆಯಡಿ ಮಂಜೂರಾದ ಜಮೀನುಗಳನ್ನು ಕಾಯ್ದೆಯ ವ್ಯಾಪ್ತಿಯಿಂದ ಹೊರಗಿಡಲಾಗಿದೆ ಎಂದು ತೀರ್ಪು ನೀಡಿದೆ. ಮಂಜೂರಾತಿದಾರರು ಎಸ್‌ಸಿ/ಎಸ್‌ಟಿ ಸಮುದಾಯಕ್ಕೆ ಸೇರಿದವರು ಎಂಬ ಕಾರಣಕ್ಕಾಗಿ ಅವರಿಗೆ ಜಮೀನು ಮಂಜೂರು ಮಾಡಲಾಗಿಲ್ಲ, ಬದಲಿಗೆ ಸಾಮಾನ್ಯ ಕೃಷಿ ಅಭಿವೃದ್ಧಿಯ ಯೋಜನೆಯಡಿ ನೀಡಲಾಗಿದೆ ಎಂಬ ತರ್ಕವನ್ನು ಈ ತೀರ್ಪು ಆಧರಿಸಿತ್ತು. ಆದರೆ, ಈ ತರ್ಕವು 'ಮಂಜೂರಾದ ಭೂಮಿ'ಯ (ಕಾಯ್ದೆಯ ಕಲಂ 3(1)(b)) ವ್ಯಾಖ್ಯಾನವನ್ನು ತಪ್ಪಾಗಿ ಅರ್ಥೈಸುತ್ತದೆ. ಮಂಜೂರಾತಿದಾರರು ಎಸ್‌ಸಿ/ಎಸ್‌ಟಿ ಸಮುದಾಯಗಳಿಗೆ ಸೇರಿರುವ ಕಾರಣ ಮಾತ್ರಕ್ಕಾಗಿಯೇ ಜಮೀನು ಮಂಜೂರು ಮಾಡಲಾಗಿರಬೇಕು ಎಂದು ವ್ಯಾಖ್ಯಾನವು ಎಲ್ಲಿಯೂ ಹೇಳುವುದಿಲ್ಲ. ಸರ್ಕಾರವು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ ವ್ಯಕ್ತಿಗೆ ಜಮೀನು ಮಂಜೂರು ಮಾಡಿರಬೇಕು ಎಂದು ಮಾತ್ರವೇ ವ್ಯಾಖ್ಯಾನವು ಉಲ್ಲೇಖಿಸುತ್ತದೆ. ಗ್ರೋ ಮೋರ್ ಫುಡ್ ಯೋಜನೆಯಡಿ ಎಸ್‌ಸಿ/ಎಸ್‌ಟಿ ಸಮುದಾಯಕ್ಕೆ ಸೇರಿದ ವ್ಯಕ್ತಿಗೆ ಜಮೀನು ಮಂಜೂರು ಮಾಡಲಾಗಿದ್ದರೆ, ಖಂಡಿತವಾಗಿಯೂ ಈ ವ್ಯಾಖ್ಯಾನವು ಅನ್ವಯಿಸುತ್ತದೆ. ವ್ಯಾಖ್ಯಾನಕ್ಕೆ ಹೆಚ್ಚುವರಿಯಾಗಿ ಮತ್ತೊಂದು ಅಗತ್ಯತೆಯನ್ನು ಸೇರಿಸುವುದು ಎಂದರೆ ಶಾಸಕಾಂಗವು ವಿಧಿಸದ ಷರತ್ತೊಂದನ್ನು ಸೇರಿಸಿದಂತಾಗುತ್ತದೆ. ಅಲ್ಲದೇ ಇದು ಕಾಯ್ದೆಯ ಪರಿಹಾರಾತ್ಮಕ ಉದ್ದೇಶಕ್ಕೆ ವಿರುದ್ಧವಾಗಿ ಅದರ ರಕ್ಷಣಾ ವ್ಯಾಪ್ತಿಯನ್ನು ಕಿರಿದಾಗಿಸುತ್ತದೆ.

**4.2 ಕಾಲಮಿತಿಯ ಪ್ರಶ್ನೆ: ಡಿಲೇ ಮತ್ತು ಲ್ಯಾಚಸ್**

ಪಿಟಿಸಿಎಲ್ (P T C L) ಕಾಯ್ದೆಯನ್ನು ಅನುಷ್ಠಾನಕ್ಕೆ ತರುವಲ್ಲಿ ನ್ಯಾಯಾಂಗ ವಿಫಲವಾಗಿದ್ದು, ಆ ಪೈಕಿ ಅತ್ಯಂತ ಗಂಭೀರವಾದ ಪರಿಣಾಮ ಬೀರಿದ್ದು ಪುನರ್ ಪ್ರಾಪ್ತಿ (Resumption) ಅರ್ಜಿಗಳನ್ನು ವಜಾಗೊಳಿಸಲು ಡಿಲೇ ಮತ್ತು ಲ್ಯಾಚಸ್ (Delay and Laches)ಸಿದ್ಧಾಂತವನ್ನು ಈ ಕಾನೂನಿಗೆ ಆಧಾರವಾಗಿ ಎಳೆದುತಂದು ಆಳವಾಗಿ ಬೇರೂರಿಸಿದ್ದು. ಈ ಒಂದೇ ಒಂದು ತಾತ್ವಿಕ ಬೆಳವಣಿಗೆಯು ಬೇರೆಲ್ಲದಕ್ಕಿಂತಲೂ ಹೆಚ್ಚಿನ ಪುನರ್ ಪ್ರಾಪ್ತಿ ಅರ್ಜಿಗಳನ್ನು ಸೋಲಿಸಿದೆ. ಅತ್ಯಂತ ಸ್ಪಷ್ಟವಾದ ಪೂರ್ವನಿದರ್ಶನಗಳು (B i n d i n g precedents) ಇದ್ದಾಗಲೂ ಸಹ ಕಾಯ್ದೆಯ ಪಠ್ಯಕ್ಕೆ ಸಂಪೂರ್ಣ ತದ್ವಿರುದ್ಧವಾಗಿ, ಕಾಯ್ದೆಯ ಸ್ವಂತ ನಿಬಂಧನೆಗಳ ಬಗ್ಗೆ ಯಾವುದೇ ನ್ಯಾಯಾಂಗ ವ್ಯಾಖ್ಯಾನವನ್ನು ಕೈಗೊಳ್ಳದೆಯೇ, ಪಿಟಿಸಿಎಲ್ ಪ್ರಕರಣಗಳಲ್ಲಿ ವಿಳಂಬಕ್ಕೆ ಕಾರಣವಾಗುವ ಸಾಮಾಜಿಕ ವಾಸ್ತವಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಪ್ರಕರಣಗಳನ್ನು ವಜಾಗೊಳಿಸಲಾಗಿದೆ.

ಯಾವುದೇ ವಿಶ್ಲೇಷಣೆಯ ಆರಂಭಿಕ ಬಿಂದು ಸ್ವತಃ ಕಾಯ್ದೆಯೇ ಆಗಿರಬೇಕು.

ಕಾಯ್ದೆಯ ಪಠ್ಯವು ಕಾಲಮಿತಿಗೆ ಯಾವುದೇ ಅವಕಾಶ ಒದಗಿಸುವುದಿಲ್ಲ. ಸೆಕ್ಷನ್ 4(1) ರ ಪ್ರಕಾರ, ಜಮೀನು ಮಂಜೂರಾತಿಯ ಷರತ್ತುಗಳಿಗೆ ಅಥವಾ ಅಂತಹ ಮಂಜೂರಾತಿಯನ್ನು ಒದಗಿಸುವ ಕಾನೂನಿಗೆ ವಿರುದ್ಧವಾಗಿ ಮಂಜೂರಾದ ಜಮೀನಿನ ಯಾವುದೇ ವರ್ಗಾವಣೆ (ಮಾರಾಟ) ನಡೆದರೆ ಅದು ಅನೂರ್ಜಿತ ಮತ್ತು ಪರಿಣಾಮಶೂನ್ಯವಾಗಿರುತ್ತದೆ. ಅಂತಹ ವರ್ಗಾವಣೆಯ ಮೂಲಕ ಆ ಜಮೀನಿನ ಮೇಲಿನ ಯಾವುದೇ ಹಕ್ಕು, ಅಧಿಕಾರ ಅಥವಾ ಹಿತಾಸಕ್ತಿಯನ್ನು ವರ್ಗಾಯಿಸಲಾಗುವುದಿಲ್ಲ. ಈ ಪರಿಣಾಮವು ಯಾವುದೇ ಅರ್ಜಿ, ಆದೇಶ ಅಥವಾ ನ್ಯಾಯಾಲಯದ ಪ್ರಕ್ರಿಯೆಯನ್ನು ಅವಲಂಬಿಸಿರುವುದಿಲ್ಲ. ಈ ಕಾಯ್ದೆಯು ಜಾರಿಗೆ ಬಂದ ದಿನಾಂಕದಿಂದ, ಅಂದರೆ 01.01.1979 ರಿಂದಲೇ ಶಾಸನದ ಅನುಷ್ಠಾನದ ಮೂಲಕ ಸ್ವಯಂಚಾಲಿತವಾಗಿ ಅನ್ವಯಿಸುತ್ತದೆ. ಈ ವರ್ಗಾವಣೆಗಳು ಆರಂಭದಿಂದಲೇ ಪರಿಣಾಮಶೂನ್ಯವಾಗಿರುತ್ತದೆ (Void ab initio).

ಕಾಯ್ದೆಯ ಸೆಕ್ಷನ್ 5(1) ಈ ಅನೂರ್ಜಿತತೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಅಗತ್ಯವಿರುವ ವ್ಯವಸ್ಥೆಯನ್ನೊದಗಿಸುತ್ತದೆ. ಸಹಾಯಕ ಕಮಿಷನರ್ (A C) ಅವರು ಸ್ವಯಂಪ್ರೇರಿತವಾಗಿ (Suo motu) ಅಥವಾ ಯಾವುದೇ ವ್ಯಕ್ತಿ ಸಲ್ಲಿಸಿದ ಅರ್ಜಿಯ ಆಧಾರದ ಮೇಲೆ ಕ್ರಮ ಕೈಗೊಂಡು ಸೆಕ್ಷನ್ 4(1) ರ ಅಡಿಯಲ್ಲಿ ಒಂದು ಜಮೀನಿನ ವರ್ಗಾವಣೆಯು ಅನೂರ್ಜಿತ ಮತ್ತು ಪರಿಣಾಮಶೂನ್ಯ ಎಂದು ಕಂಡುಬಂದಲ್ಲಿ, ಆ ಜಮೀನನ್ನು ಮೂಲ ಮಂಜೂರಾತಿದಾರರಿಗೆ ಅಥವಾ ಅವರ ಕಾನೂನುಬದ್ಧ ವಾರಸುದಾರರಿಗೆ ಪುನರ್ ಸ್ಥಾಪಿಸತಕ್ಕದ್ದು. ಈ ಅಧಿಕಾರವನ್ನು ಇಂತಿಷ್ಟೇ ಅವಧಿಯೊಳಗೆ ಚಲಾಯಿಸಬೇಕು ಎಂದಾಗಲಿ, ಅಥವಾ ಇಂತಿಷ್ಟೇ ಸಮಯದೊಳಗೆ ಅರ್ಜಿ ಸಲ್ಲಿಸಬೇಕು ಎಂದಾಗಲಿ ಕಾಯ್ದೆಯಲ್ಲಿ ಯಾವುದೇ ಕಾಲಪರಿಮಿತಿಯನ್ನು ನಿಗದಿಪಡಿಸಿಲ್ಲ. ವಾಸ್ತವವಾಗಿ ಇಡೀ ಕಾಯ್ದೆಯ ಯಾವುದೇ ಭಾಗದಲ್ಲೂ ಕಾಲಪರಿಮಿತಿಯ ನಿಬಂಧನೆಯೇ(Limitation clause) ಇಲ್ಲ. ಕಾಯ್ದೆಯನ್ನು ರೂಪಿಸುವಾಗ ಈ ಬಗ್ಗೆ ಯೋಚಿಸಿರಲಿಲ್ಲ ಎಂದಲ್ಲ; ಬದಲಿಗೆ, ಇದು ಶಾಸಕಾಂಗವು ಉದ್ದೇಶಪೂರ್ವಕವಾಗಿಯೇ ಮಾಡಿರುವ ಶಾಸನಾತ್ಮಕ ಆಯ್ಕೆಯಾಗಿದ್ದು, ಇದು ಪಿಟಿಸಿಎಲ್ ಕಾಯ್ದೆಯ ಮೂಲ ಸ್ವರೂಪಕ್ಕೆ ಸಂಪೂರ್ಣವಾಗಿ ಪೂರಕವಾಗಿದೆ. ಕಾರಣ, ಪಿಟಿಸಿಎಲ್ ಕಾಯ್ದೆಯು ಒಂದು ವಿಶೇಷ ಶಾಸನವಾಗಿದೆ ಹಾಗು ಸಾಮಾನ್ಯ ಕಾಲಪರಿಮಿತಿ ಕಾನೂನು ಕಾರ್ಯನಿರ್ವಹಿಸುವ ಚೌಕಟ್ಟು ಮತ್ತು ಡಿಲೇ ಮತ್ತು ಲ್ಯಾಚಸ್ಸಿನ ತತ್ವಗಳ ವ್ಯಾಪ್ತಿಗೆ ಹೊರತಾಗಿ ಕಾರ್ಯನಿರ್ವಹಿಸುವ ಒಂದು ಸ್ವತಂತ್ರ ಸ್ವಯಂ-ಪೂರ್ಣ ಕಾಯ್ದೆಯಾಗಿದೆ (Self-contained code).

ಸೆಕ್ಷನ್ 4(1) ರ ಅಡಿಯಲ್ಲಿ ಅನೂರ್ಜಿತ ಎನಿಸಿದ ಒಂದು ವ್ಯವಹಾರದ ಕಾನೂನು ಪರಿಣಾಮವೆಂದರೆ, ಕೇವಲ ಆ ವರ್ಗಾವಣೆಯನ್ನು ಜಾರಿಗೊಳಿಸಲು ಸಾಧ್ಯವಿಲ್ಲ ಎಂದಷ್ಟೇ ಅಲ್ಲ; ಬದಲಿಗೆ, ಕಾನೂನಿನ ದೃಷ್ಟಿಯಲ್ಲಿ ಅಂತಹ ಯಾವುದೇ ವರ್ಗಾವಣೆ ಅಥವಾ ಮಾರಾಟವೇ ನಡೆದಿಲ್ಲ ಎಂದರ್ಥ. ಅನೂರ್ಜಿತ ಪ್ರಕ್ರಿಯೆಯೊಂದು(nullity), ತನ್ನ ಮೂಲ ಸ್ವರೂಪದ ಕಾರಣಕ್ಕಾಗಿಯೇ ನಿರಂತರ ಮತ್ತು ಪುನರಾವರ್ತಿತವಾಗುವ ದಾವೆಗೆ ಕಾರಣ

ಉಂಟುಮಾಡುತ್ತದೆ (Continuing and recurring cause of action). ಜಮೀನು ಮರುಸ್ಥಾಪನೆಯನ್ನು ಕೋರುವ ಹಕ್ಕು, ಕೇವಲ ಕಾನೂನುಬಾಹಿರ ವರ್ಗಾವಣೆ ನಡೆದ ಆ ಕ್ಷಣಕ್ಕೆ ಮಾತ್ರ ಸೀಮಿತಗೊಂಡು, ಒಂದು ನಿರ್ದಿಷ್ಟ ಅವಧಿಯ ನಂತರ ಕೊನೆಗೊಂಡು ಬಿಡುವುದಿಲ್ಲ; ಬದಲಿಗೆ ಆ ಕಾನೂನುಬಾಹಿರ ಸ್ವಾಧೀನವು ಮುಂದುವರಿದಿರುವ ತನಕವೂ ಆ ಹಕ್ಕು ಜೀವಂತವಾಗಿರುತ್ತದೆ. ಯಾವುದೇ ಒಂದು ವರ್ಗಾವಣೆ , ಶಾಸನದ  ಕಾರಣದಿಂದ ಅಸಿಂಧುವಾಗಿದ್ದು, ಅದರ ಪರಿಣಾಮವಾಗಿ ಉದ್ಭವಿಸುವ ದಾವೆಗೆ  ಕಾಲಮಿತಿ, ಡಿಲೇ ಮತ್ತು ಲ್ಯಾಚಸ್ಸಿನ ತತ್ವಗಳನ್ನು ಅನ್ವಯಿಸುವುದು ಎಂದರೆ ಕಾಲ ಉರುಳಿದಂತೆಲ್ಲಾ ಅಕ್ರಮವು ಸಕ್ರಮವಾಗಲು ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ. ಇದು 'ಯಾವುದೇ ಅಕ್ರಮವು ಕಾಲ ಕಳೆದಂತೆ  ಸಕ್ರಮವಾಗಲು, ಕಾನೂನುಬದ್ಧವಾಗಲು ಸಾಧ್ಯವಿಲ್ಲ' ಎಂಬ ಮೂಲಭೂತ ಕಾನೂನು ಸಿದ್ಧಾಂತಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿದೆ. ಒಂದು ಅಸಿಂಧು ವರ್ಗಾವಣೆಯನ್ನು ಯಾರೂ ಸಕಾಲದಲ್ಲಿ ಪ್ರಶ್ನಿಸಲಿಲ್ಲ ಎಂಬ ಕಾರಣಕ್ಕಾಗಿಯೇ ಅದು ಎಂದಿಗೂ ಸಿಂಧುವಾಗಲು ಸಾಧ್ಯವಿಲ್ಲ. ಯಾವ ಪ್ರಕ್ರಿಯೆಯನ್ನು ಕಾನೂನು 'ಶೂನ್ಯ' ಎಂದು ಘೋಷಿಸಿದೆಯೋ, ಅದು ಕೇವಲ ಕಾಲ ಉರುಳಿತು ಎಂಬ ಕಾರಣಕ್ಕೆ 'ಅಸ್ತಿತ್ವ'ಕ್ಕೆ ಬರಲು ಸಾಧ್ಯವೇ ಇಲ್ಲ.

'ಮಂಚೇಗೌಡ ಮತ್ತು ಇತರರು ವರ್ಸಸ್ ಕರ್ನಾಟಕ ರಾಜ್ಯ' [(1984) 3 SCC 301] ಪ್ರಕರಣದಲ್ಲಿ, ಸುಪ್ರೀಂ ಕೋರ್ಟ್ ಪಿಟಿಸಿಎಲ್ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವವನ್ನು ಎತ್ತಿಹಿಡಿಯಿತು. ಹಾಗೆ ಮಾಡುವಾಗ, ನ್ಯಾಯಾಲಯವು: "ಮಂಜೂರಾದ ಜಮೀನುಗಳನ್ನು ಮರುಸ್ವಾಧೀನಪಡಿಸಿಕೊಳ್ಳುವ ಅಧಿಕಾರವು, ಆ ಜಮೀನುಗಳನ್ನು ಸದ್ಭಾವನೆಯಿಂದ (Bonafide) ಹಣ ನೀಡಿ ಖರೀದಿಸಿ, ಹಲವು ವರ್ಷಗಳಿಂದ ಅದರ ಸ್ವಾಧೀನ ಮತ್ತು ಅನುಭೋಗದಲ್ಲಿರುವ ಖರೀದಿಗಾರರ ಸ್ಥಾಪಿತ ಹಕ್ಕುಗಳನ್ನು ಕಿತ್ತುಕೊಳ್ಳುತ್ತದೆ" ಎಂಬ ವಾದವನ್ನು ನಿರ್ದಿಷ್ಟವಾಗಿ ಪರಿಶೀಲಿಸಿ ತಿರಸ್ಕರಿಸಿತು.  ಖರೀದಿಗಾರನ ಸ್ವಾಧೀನದ ಅವಧಿಯು ಕಾಯ್ದೆಯ ಮೂಲ ಉದ್ದೇಶವನ್ನು ಸೋಲಿಸಲು ಸಾಧ್ಯವಿಲ್ಲ ಮತ್ತು 'ಕಾನೂನು ಮಾನ್ಯ ಖರೀದಿಗಾರ' (Bonafide purchaser) ಎಂಬ ಪರಿಕಲ್ಪನೆಗೆ ಪಿಟಿಸಿಎಲ್ ಕಾಯ್ದೆಯ ಚೌಕಟ್ಟಿನಲ್ಲಿ ಯಾವುದೇ ಸ್ಥಾನವಿಲ್ಲ ಎಂದು ನ್ಯಾಯಾಲಯ ಸ್ಪಷ್ಟವಾಗಿ ತೀರ್ಪು ನೀಡಿತು.

ಆದರೆ, ನಿಲುವನ್ನು 2011 ರಲ್ಲಿ ಸುಪ್ರೀಂ ಕೋರ್ಟ್ ನೀಡಿದ 'ನಿಂಗಪ್ಪ ವರ್ಸಸ್ ಡೆಪ್ಯುಟಿ ಕಮಿಷನರ್' [Civil Appeal No. 3131 of 2007, ದಿನಾಂಕ: 14.07.2011] ತೀರ್ಪು ಸಂಪೂರ್ಣವಾಗಿ ತಲೆಕೆಳಗಾಗಿಸಿತು. ಈ ತೀರ್ಪಿನ ಮೂಲಕ ಪಿಟಿಸಿಎಲ್ ಪ್ರಕ್ರಿಯೆಗಳ ಒಳಗೆ ಡಿಲೇ ಮತ್ತು ಲ್ಯಾಚಸ್ಸಿನ (Delay and Laches) ತತ್ವವನ್ನು ತರಲಾಯಿತು. ಇಂತಹ ತತ್ವದ ಪರಿಚಯವು 'ಮಂಚೇಗೌಡ' ಪ್ರಕರಣದ ತೀರ್ಪಿಗಷ್ಟೇ ಅಲ್ಲದೆ, ಸ್ವತಃ ಪಿಟಿಸಿಎಲ್ ಕಾಯ್ದೆಯ ಮೂಲ ಆಶಯಕ್ಕೂ ಸಂಪೂರ್ಣವಾಗಿ ವಿರುದ್ಧವಾಗಿತ್ತು. ಅತ್ಯಂತ ಮುಖ್ಯವಾಗಿ, 'ನಿಂಗಪ್ಪ' ಪ್ರಕರಣದ ತೀರ್ಪಿನಲ್ಲಿ ಪಿಟಿಸಿಎಲ್ ಕಾಯ್ದೆಯ ಯಾವುದೇ ಪ್ರಮುಖ ಸೆಕ್ಷನ್‌ಗಳನ್ನು ಅರ್ಥೈಸುವ ಪ್ರಯತ್ನವೂ ನಡೆಯಲಿಲ್ಲ. ಆ ತೀರ್ಪು ಕಾಯ್ದೆಯ ಸೆಕ್ಷನ್ 4(1), ಸೆಕ್ಷನ್ 5(1), ಅಥವಾ ಸೆಕ್ಷನ್ 11 ಅನ್ನು ಎಳ್ಳಷ್ಟೂ ಪರಿಶೀಲಿಸಲಿಲ್ಲ; ಶಾಸನದ ಕಾರಣಕ್ಕಾಗಿ

ಅಸಿಂಧುಗೊಂಡಿರುವ ಒಂದು ಪ್ರಕ್ರಿಯೆಯು ನಿರಂತರ ದಾವೆಯ ಕಾರಣಕ್ಕೆ ದಾರಿ ಮಾಡಿಕೊಡುತ್ತದೆಯೇ ಇಲ್ಲವೇ ಎಂಬ ಮೂಲಭೂತ ಪ್ರಶ್ನೆಯನ್ನು ಚರ್ಚಿಸಲೇ ಇಲ್ಲ. ಅಷ್ಟೇ ಅಲ್ಲದೆ, ಸಾಮಾನ್ಯ ಕಾಲಮಿತಿ ಕಾನೂನನ್ನು ಮೀರಿ ನಿಲ್ಲುವ ಈ ಕಾಯ್ದೆಯ 'ಸ್ವತಂತ್ರ ಸ್ವಯಂ-ಪೂರ್ಣ ಸಂಹಿತೆ'ಯ ಸ್ವರೂಪವನ್ನೂ ಅದು ಪರಿಗಣಿಸಲಿಲ್ಲ. ಕಾಯ್ದೆಯ ಸ್ವಂತ ಪಠ್ಯದೊಂದಿಗೆ ಯಾವುದೇ ಸಮಾಲೋಚನೆ ನಡೆಸದೆಯೇ, ಕಾಯ್ದೆಯ ವ್ಯಾಪ್ತಿಯಿಂದ ಹೊರಗಿದ್ದ ತತ್ವವೊಂದನ್ನು ಅದರ ಮೇಲೆ ಹೇರಲಾಯಿತು. ಯಾವ ಕಾಯ್ದೆಯ ನಿಯಮಗಳು ನೇರವಾಗಿ ಪ್ರಶ್ನೆಗೆ ಒಳಪಟ್ಟಿದ್ದವೋ, ಅದೇ ಕಾಯ್ದೆಯ ವ್ಯಾಖ್ಯಾನ ಅಥವಾ ವಿಶ್ಲೇಷಣೆ ಮಾಡದಿರುವುದು ಸ್ವತಃ ಆ ತೀರ್ಪಿನಲ್ಲಿಯೇ ಇರುವ ಒಂದು ಅತ್ಯಂತ ಪ್ರಮುಖವಾದ ಮತ್ತು ಗಂಭೀರವಾದ ಕಾನೂನು ಲೋಪವಾಗಿದೆ (Infirmity).

ಬಳಿಕ, ಕರ್ನಾಟಕ ಹೈಕೋರ್ಟ್‌ನ ದ್ವಿಪೀಠವು 'ಜಿ.ಎಂ. ವೆಂಕಟರೆಡ್ಡಿ ಮತ್ತು ಇತರರು ವರ್ಸಸ್ ಡೆಪ್ಯುಟಿ ಕಮಿಷನರ್, ಕೋಲಾರ ಜಿಲ್ಲೆ ಮತ್ತು ಇತರರು' [ILR 2012 KAR 3168] ಪ್ರಕರಣದಲ್ಲಿ ಇದನ್ನು ಸರಿಯಾಗಿಯೇ ಗುರುತಿಸಿತು. ಶಾಸನ ಮತ್ತು 'ಮಂಚೇಗೌಡ' ತೀರ್ಪುಗಳ ಬೆಳಕಿನಲ್ಲಿ 'ನಿಂಗಪ್ಪ' ತೀರ್ಪನ್ನು 'ಪರ್ ಇನ್ಕುರಿಯಂ' (Per incuriam - ಕಾನೂನಿನ ಅನ್ವಯವಾಗುವ ಪ್ರಮುಖ ನಿಯಮ ಅಥವಾ ನ್ಯಾಯಾಲಯಕ್ಕೆ ಬದ್ಧವಾಗಿರುವ ಪೂರ್ವನಿರ್ಣಯವನ್ನು ಪರಿಗಣಿಸದೆ ನೀಡಿದ ತೀರ್ಪನ್ನು 'per incuriam' ಎಂದು ಕರೆಯಲಾಗುತ್ತದೆ. ) ಎಂದು ಹೈಕೋರ್ಟ್ ಘೋಷಿಸಿತು. ಸುಪ್ರೀಂ ಕೋರ್ಟ್ ಸಹ ಈ ದ್ವಿಪೀಠದ ತೀರ್ಪಿನಲ್ಲಿ ಹಸ್ತಕ್ಷೇಪ ಮಾಡಲು ನಿರಾಕರಿಸಿತು. ಇದು ಈ ಪ್ರಶ್ನೆಗೆ ಶಾಶ್ವತ ಹಾಗೂ ದೃಢವಾದ ಮುಕ್ತಾಯವನ್ನು ನೀಡಬೇಕಾಗಿತ್ತು.

ಆದರೆ 2017 ರಲ್ಲಿ, ಸುಪ್ರೀಂ ಕೋರ್ಟ್ 'ನೆಕ್ಕಂಟಿ ರಾಮಲಕ್ಷ್ಮಿ ವರ್ಸಸ್ ಕರ್ನಾಟಕ ರಾಜ್ಯ ಮತ್ತು ಇತರರು' [(2020) 14 SCC 232] ಪ್ರಕರಣದಲ್ಲಿ ಡಿಲೇ ಮತ್ತು ಲ್ಯಾಚಸ್ಸಿನ ಸಿದ್ಧಾಂತವನ್ನು ಮತ್ತೆ ಪರಿಚಯಿಸಿತು. ಇದು ಎರಡು ತೀರ್ಪುಗಳನ್ನು ಆಧಾರವಾಗಿಟ್ಟುಕೊಂಡಿತ್ತು: ಮೊದಲನೆಯದು, ಮೇಲೆ ತಿಳಿಸಿದ ಮತ್ತು ಈಗಾಗಲೇ ಹೈಕೋರ್ಟ್ ದ್ವಿಪೀಠದಿಂದ 'ಪರ್ ಇನ್ಕುರಿಯಂ' ಎಂದು ಘೋಷಿಸಲ್ಪಟ್ಟಿದ್ದ 'ನಿಂಗಪ್ಪ ವರ್ಸಸ್ ಡೆಪ್ಯುಟಿ ಕಮಿಷನರ್' ತೀರ್ಪು; ಎರಡನೆಯದು, 'ಛೇದಿ ಲಾಲ್ ಯಾದವ್ ವರ್ಸಸ್ ಹರಿ ಕಿಶೋರ್ ಯಾದವ್' [(2018) 12 SCC 527] ತೀರ್ಪು.

'ನೆಕ್ಕಂಟಿ' ಪ್ರಕರಣದಲ್ಲಿ ನ್ಯಾಯಾಲಯವು 'ಛೇದಿ ಲಾಲ್ ಯಾದವ್' ತೀರ್ಪನ್ನು ಉಲ್ಲೇಖಿಸಿ 'ಸಮಂಜಸ ಅವಧಿ'ಯ (Reasonable time) ತತ್ವವನ್ನು ಅನ್ವಯಿಸಿತು. ಆದರೆ, ಛೇದಿ ಲಾಲ್ ತೀರ್ಪನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ, ಜ್ಯೂರಿ ಸಮಿತಿಯು (Jury Panel) ಈ ಕೆಳಗಿನ ದೃಢವಾದ ಅಭಿಪ್ರಾಯಕ್ಕೆ ಬಂದಿದೆ: ನೆಕ್ಕಂಟಿ ತೀರ್ಪಿನಲ್ಲಿ ಛೇದಿ ಲಾಲ್ ಪ್ರಕರಣದ ಮೇಲಿನ ಅವಲಂಬನೆಯು ಸಂಪೂರ್ಣವಾಗಿ ತಪ್ಪು ಮತ್ತು ಅಪ್ರಸ್ತುತವಾಗಿದೆ.

'ಛೇದಿ ಲಾಲ್ ಯಾದವ್' ಪ್ರಕರಣವು 'ಬಿಹಾರ ಕೋಸಿ ಪ್ರದೇಶ (ರೈತರಿಗೆ ಜಮೀನು ಮರುಸ್ಥಾಪನೆ) ಕಾಯ್ದೆ, 1951' ಕ್ಕೆ ಸಂಬಂಧಿಸಿದ್ದಾಗಿತ್ತು. ಕೋಸಿ ನದಿಯ ಭೀಕರ

ಪ್ರವಾಹದಿಂದಾಗಿ ಕೃಷಿ ಸಮುದಾಯಗಳು ತತ್ತರಿಸಿಹೋಗಿದ್ದ 1939 ಮತ್ತು 1950 ರ ಅವಧಿಯಲ್ಲಿ, ಬಾಡಿಗೆ ಬಾಕಿಗಾಗಿ ಜಮೀನಿನಿಂದ ಹೊರಹಾಕಲ್ಪಟ್ಟ ಅಥವಾ ಜಮೀನು ಹರಾಜು ಆದ  ವ್ಯಕ್ತಿಗಳ ಹಕ್ಕುಗಳನ್ನು ರಕ್ಷಿಸಲು ಈ ಬಿಹಾರದ ಕಾಯ್ದೆಯನ್ನು ತರಲಾಗಿತ್ತು. ಆ ಪ್ರಕರಣದಲ್ಲಿ ಸುಮಾರು ದಶಕಗಳ ಕಾಲದ ವಿಪರೀತ, ಅಸ್ಪಷ್ಟ ಮತ್ತು ಅಸಮರ್ಥನೀಯ ವಿಳಂಬದ ಆಧಾರದ ಮೇಲೆ ನ್ಯಾಯಾಲಯವು ಅಪೀಲನ್ನು ವಜಾಗೊಳಿಸಿತ್ತು; ಮತ್ತು ಮಧ್ಯಂತರ ಅವಧಿಯಲ್ಲಿ ಆ ಜಮೀನು ಯಾವುದೇ ಕಾನೂನು ಬಾಧ್ಯತೆಗಳಿಲ್ಲದ್ದು (Unencumbered) ಎಂಬ ನಂಬಿಕೆಯ ಮೇಲೆ ಹಲವು ಬಾರಿ ಕೈಬದಲಾಯಿಸಿರುವುದನ್ನು ನಿರ್ದಿಷ್ಟವಾಗಿ ಗಮನಿಸಿತ್ತು.

ಛೇದಿ ಲಾಲ್ ಪ್ರಕರಣದ ಹಿನ್ನೆಲೆಗೂ ಪಿಟಿಸಿಎಲ್ ಪ್ರಕರಣಗಳಿಗೂ ಇರುವ ಹಲವಾರು ನಿರ್ಣಾಯಕ ವ್ಯತ್ಯಾಸಗಳು, ಅದನ್ನು ಪಿಟಿಸಿಎಲ್ ಕಾಯ್ದೆಯಡಿ ವಿಳಂಬದ ಪ್ರಶ್ನೆಗೆ ಒಂದು ಪೂರ್ವನಿದರ್ಶನವಾಗಿ ಅನ್ವಯಿಸುವುದನ್ನು ತಡೆಯುತ್ತವೆ:

- ಮೊದಲನೆಯದಾಗಿ, ಬಿಹಾರ ಕೋಸಿ ಕಾಯ್ದೆ ಮತ್ತು ಪಿಟಿಸಿಎಲ್ ಕಾಯ್ದೆಗಳು ಸಮಾನ ವಿಷಯ ಹೊಂದಿರುವ (Pari materia) ಶಾಸನಗಳಲ್ಲ. ಬಿಹಾರ ಕೋಸಿ ಕಾಯ್ದೆಯನ್ನು ನೈಸರ್ಗಿಕ ವಿಕೋಪದಿಂದಾಗಿ ಜಮೀನು ಕಳೆದುಕೊಂಡ ಒಂದು ನಿರ್ದಿಷ್ಟ ವರ್ಗದ ರೈತರಿಗೆ ಪರಿಹಾರ ನೀಡಲು ರೂಪಿಸಲಾಗಿತ್ತು. ಇದಕ್ಕೆ ವ್ಯತಿರಿಕ್ತವಾಗಿ, ಪಿಟಿಸಿಎಲ್ ಕಾಯ್ದೆಯು ಜಾತಿ ವ್ಯವಸ್ಥೆಯಲ್ಲಿ ಬೇರೂರಿರುವ ಎಸ್‌ಸಿ/ಎಸ್‌ಟಿ (S C / S T ) ಸಮುದಾಯಗಳ ಶತಮಾನಗಳ ಕಾಲದ ನಿರಂತರ ಜಮೀನು ವಂಚಿತಗೊಳಿಸುವಿಕೆಯನ್ನು ನಿವಾರಿಸಲು ಜಾರಿಗೆ ತರಲಾದ 'ವಿತರಣಾ ನ್ಯಾಯದ' (Distributive justice) ಒಂದು ಸಾಂವಿಧಾನಿಕ ಸಾಧನವಾಗಿದೆ. ಈ ಎರಡೂ ಶಾಸನಗಳ ಸಾಮಾಜಿಕ ಮತ್ತು ಸಾಂವಿಧಾನಿಕ ಹಿನ್ನೆಲೆಗಳು ಸಂಪೂರ್ಣ ವಿಭಿನ್ನವಾಗಿವೆ.
- ಎರಡನೆಯದಾಗಿ, ಬಿಹಾರ ಕೋಸಿ ಕಾಯ್ದೆಯಲ್ಲಿ ಪಿಟಿಸಿಎಲ್ ಕಾಯ್ದೆಯ ಸೆಕ್ಷನ್ 11 ಕ್ಕೆ ಸಮಾನವಾದ ಯಾವುದೇ ನಿಬಂಧನೆ ಇಲ್ಲ. ಪಿಟಿಸಿಎಲ್ ಕಾಯ್ದೆಯು ಬೇರೆಲ್ಲಾ ಕಾನೂನುಗಳು, ಸಂಪ್ರದಾಯಗಳು, ಬಳಕೆಗಳು, ಒಪ್ಪಂದಗಳು ಮತ್ತು ಯಾವುದೇ ನ್ಯಾಯಾಲಯ ಅಥವಾ ಟ್ರಿಬ್ಯೂನಲ್‌ನ ಆದೇಶ ಅಥವಾ ಡಿಕ್ರಿಗಳನ್ನು ಮೀರುತ್ತದೆ . ಬಿಹಾರ ಕೋಸಿ ಕಾಯ್ದೆಯಲ್ಲಿ ಇಂತಹ ಯಾವುದೇ ಮೀರಿ ನಿಲ್ಲುವ ನಿಬಂಧನೆ (overriding provision) ಇರಲಿಲ್ಲ. ಒಂದು ಶಾಸನದಲ್ಲಿ ಸ್ಪಷ್ಟವಾಗಿ ಓವರ್‌ರೈಡಿಂಗ್ ನಿಬಂಧನೆ ಇದ್ದಾಗ ಅದಕ್ಕೆ 'ಸಮಂಜಸ ಅವಧಿಯ' ತತ್ವ ಅನ್ವಯಿಸುತ್ತದೆಯೇ ಎಂಬ ಪ್ರಶ್ನೆಯೇ ಬೇರೆ, ಮತ್ತು ಅಂತಹ ಯಾವುದೇ ನಿಬಂಧನೆ ಇಲ್ಲದ ಶಾಸನಕ್ಕೆ ಅನ್ವಯಿಸುತ್ತದೆಯೇ ಎಂಬ ಪ್ರಶ್ನೆಯೇ ಬೇರೆ. ಛೇದಿ ಲಾಲ್ ಪ್ರಕರಣದಲ್ಲಿ ಈ ಪ್ರಶ್ನೆ ಉದ್ಭವಿಸದೇ ಇದ್ದುದರಿಂದ ನ್ಯಾಯಾಲಯ ಇದನ್ನು ಚರ್ಚಿಸಿರಲಿಲ್ಲ.

ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು 'ಎಚ್.ಎಚ್. ಮಹಾರಾಜಾಧಿರಾಜ ಮಾಧವ ರಾವ್ ಜೀವಾಜಿ ವರ್ಸಸ್ ಯೂನಿಯನ್ ಆಫ್ ಇಂಡಿಯಾ [AIR 1971 SC 530]'

ಪ್ರಕರಣದಲ್ಲಿ - 'ಕ್ವಿನ್ ವರ್ಸಸ್ ಲೀಥೆಮ್ [(1901) AC 495]' ಪ್ರಕರಣದಲ್ಲಿ ಅರ್ಲ್ ಆಫ್ ಹಲ್ಸ್‌ಬರಿ ಎಲ್.ಸಿ. (Earl of Halsbury LC) ಅವರು ನೀಡಿದ ಅವಲೋಕನಗಳನ್ನು ಆಧಾರವಾಗಿಟ್ಟುಕೊಂಡು ಹೇಳಿದ್ದೇನೆಂದರೆ ಪ್ರತಿಯೊಂದು ತೀರ್ಪನ್ನು ಆಯಾ ಪ್ರಕರಣದಲ್ಲಿ ಸಾಬೀತಾದ ಅಥವಾ ಸಾಬೀತಾಗಿದೆ ಎಂದು ಭಾವಿಸಲಾದ ನಿರ್ದಿಷ್ಟ ಸತ್ಯಾಂಶಗಳ ಹಿನ್ನೆಲೆಯಲ್ಲೇ ಓದಬೇಕು (ಅನ್ವಯಿಸಬೇಕು); ಮತ್ತು ಆ ಪ್ರಕರಣದಿಂದ ತಾರ್ಕಿಕವಾಗಿ ಹೊರಹೊಮ್ಮಬಹುದಾದಂತೆ ತೋರುವ ಯಾವುದೇ ಸಿದ್ಧಾಂತ ಅಥವಾ ಪ್ರಸ್ತಾಪಕ್ಕೆ (Proposition) ಆ ಪ್ರಕರಣವನ್ನು ಪೂರ್ವನಿದರ್ಶನವಾಗಿ ಉಲ್ಲೇಖಿಸಲು ಸಾಧ್ಯವಿಲ್ಲ."

ಛೇದಿ ಲಾಲ್ ಪ್ರಕರಣದಲ್ಲಿ ನ್ಯಾಯಾಲಯವು ನೀಡಿದ ತೀರ್ಪು, ಓವರ್‌ರೈಡಿಂಗ್ ನಿಬಂಧನೆ ಇಲ್ಲದ, ಶಾಸನಾತ್ಮಕ  ಅಸಿಂಧುತ್ವದಿಂದ ಉಂಟಾಗುವ ನಿರಂತರ ದಾವೆಯ ಕಾರಣವಿಲ್ಲದ ಮತ್ತು ಪಿಟಿಸಿಎಲ್ ಕಾಯ್ದೆಯ ಹಿನ್ನೆಲೆಯಲ್ಲಿರುವಂತಹ ಯಾವುದೇ ಸಾಂವಿಧಾನಿಕ ಆದೇಶವಿಲ್ಲದ ಒಂದು ನಿರ್ದಿಷ್ಟ ಶಾಸನದ ಚೌಕಟ್ಟಿನಲ್ಲಿ, ವಿಪರೀತ ಹಾಗು ಪುನರಾವರ್ತಿತ ವಿಳಂಬದ ನಿರ್ದಿಷ್ಟ ಸತ್ಯಾಂಶಗಳ ಆಧಾರದ ಮೇಲೆ ನೀಡಲಾದ ತೀರ್ಪಾಗಿದೆ. ಆದ್ದರಿಂದ, ಅದನ್ನು ಪಿಟಿಸಿಎಲ್ ಕಾಯ್ದೆಗೆ ಸಂಬಂಧಿಸಿದ ವಿಷಯದಲ್ಲಿ ಅನುಸರಿಸಲೇ ಬೇಕಾದ ಪೂರ್ವನಿದರ್ಶನ (binding precedent) ಎಂದು ಪರಿಗಣಿಸಲು ಸಾಧ್ಯವಿಲ್ಲ.

ಸುಪ್ರೀಂ ಕೋರ್ಟ್ 'ಸ್ಟೇಟ್ ಆಫ್ ಯು.ಪಿ. ವರ್ಸಸ್ ಸಿಂಥೆಟಿಕ್ಸ್ ಆಂಡ್ ಕೆಮಿಕಲ್ಸ್ ಲಿಮಿಟೆಡ್' [(1991) 4 SCC 139] ಪ್ರಕರಣದಲ್ಲಿ ಪೂರ್ವನಿದರ್ಶನಗಳ ಅನುಸರಿಸಲೇ ಬೇಕಾದ ಸ್ವರೂಪ ವನ್ನು ಹೀಗೆ ಸ್ಪಷ್ಟಪಡಿಸಿದೆ:

" ಒಂದು ತೀರ್ಪಿನಲ್ಲಿ ಒಳಗೊಂಡಿರುವ ನಿರ್ದಿಷ್ಟ ಕಾನೂನಿನ ಅಂಶವನ್ನು ನ್ಯಾಯಾಲಯವು ಗ್ರಹಿಸದಿದ್ದಾಗ ಅಥವಾ ಅದರ ಗಮನಕ್ಕೆ ಬಾರದಿದ್ದಾಗ, ಆ ತೀರ್ಪು 'ಸಬ್-ಸೈಲೆನ್ಸಿಯೋ' (sub-silentio-ಅಪ್ರಕಟಿತ ಅಥವಾ ಮೌನವಾಗಿ ಹೊರಬಿದ್ದ ತೀರ್ಪು) ಎನಿಸಿಕೊಳ್ಳುತ್ತದೆ, ಇದು ಆ ಪದಗುಚ್ಛಕ್ಕೆ ಅಂಟಿಕೊಂಡಿರುವ ತಾಂತ್ರಿಕ ಅರ್ಥವಾಗಿದೆ. ಲ್ಯಾಂಕಾಸ್ಟರ್ ಮೋಟಾರ್ ಕೋ. (ಲಂಡನ್) ಲಿಮಿಟೆಡ್ ವಿರುದ್ಧ ಬ್ರೆಮಿತ್ ಲಿಮಿಟೆಡ್ ಪ್ರಕರಣದಲ್ಲಿ ನ್ಯಾಯಾಲಯವು ಹಿಂದಿನ ತೀರ್ಪಿಗೆ ಬದ್ಧವಾಗಿರಲು ನಿರಾಕರಿಸಿತು, ಏಕೆಂದರೆ ಆ ತೀರ್ಪನ್ನು 'ಯಾವುದೇ ವಾದಗಳಿಲ್ಲದೆ, ನಿಯಮದ ಪ್ರಮುಖ ಪದಗಳ ಉಲ್ಲೇಖವಿಲ್ಲದೆ ಮತ್ತು ಯಾವುದೇ ಅಧಿಕೃತ ಆಧಾರಗಳ ಉಲ್ಲೇಖವಿಲ್ಲದೆ' ನೀಡಲಾಗಿತ್ತು. ಇದನ್ನು ಈ ನ್ಯಾಯಾಲಯವು ದೆಹಲಿ ಮುನ್ಸಿಪಲ್ ಕಾರ್ಪೊರೇಷನ್ ವಿರುದ್ಧ ಗುರ್ನಾಮ್ ಕೌರ್ ಪ್ರಕರಣದಲ್ಲಿ ಅನುಮೋದಿಸಿದೆ. ಪೀಠವು, 'ಸಬ್-ಸೈಲೆನ್ಸಿಯೋ ಮತ್ತು ವಾದಗಳಿಲ್ಲದೆ ನೀಡಲಾದ ಪೂರ್ವನಿದರ್ಶನಗಳಿಗೆ ಯಾವುದೇ ಮಹತ್ವವಿಲ್ಲ' ಎಂದು ಅಭಿಪ್ರಾಯಪಟ್ಟಿದೆ. ಹೀಗಾಗಿ, ಅನ್ಯಾಯದ ಪೂರ್ವನಿದರ್ಶನಗಳಿಂದ ಉಂಟಾಗುವ ಅನ್ಯಾಯದಿಂದ ಮುಕ್ತಿ ನೀಡಲು ನ್ಯಾಯಾಲಯಗಳು ಈ ತತ್ವದ ಮೊರೆ ಹೋಗಿವೆ. ಸ್ಪಷ್ಟವಾಗಿ ನಿರ್ಣಯಿಸದ , ಕಾರಣಗಳ ಮೇಲೆ ಆಧಾರಿತವಾಗಿರದ ಮತ್ತು ಆ ವಿಷಯದ ಕುರಿತು ಪರಿಗಣನೆ ನಡೆಸಿ ನಿರ್ಣಯಕ್ಕೆ ಬಂದಿರದ  ಸಂವಿಧಾನದ 141 ನೇ ವಿಧಿಯಡಿ ಕಲ್ಪಿಸಲಾದ ಬದ್ಧತೆಯ

ಪರಿಣಾಮವನ್ನು ಹೊಂದಿರುವ 'ಘೋಷಿತ ಕಾನೂನು' ಎಂದು ಪರಿಗಣಿಸಲು ಸಾಧ್ಯವಿಲ್ಲ. ಏಕರೂಪತೆ ಮತ್ತು ಸ್ಥಿರತೆಯು ನ್ಯಾಯಾಂಗ ಶಿಸ್ತಿನ ಪ್ರಮುಖ ಅಂಶಗಳಾಗಿವೆ. ಆದರೆ, ಯಾವುದೇ ಸಂದರ್ಭದಲ್ಲಿಯೂ ಪರಿಗಣನೆಗೆ ಬಾರದ ರೀತಿಯಲ್ಲಿ ತೀರ್ಪಿನಲ್ಲಿ ಆಕಸ್ಮಿಕವಾಗಿ ವ್ಯಕ್ತವಾಗಿರುವ ಅಭಿಪ್ರಾಯವನ್ನು 'ರೇಷಿಯೋ ಡೆಸಿಡೆಂಡಿ' (ratio decidendi - ತೀರ್ಪನ್ನು ನೀಡಲು ನ್ಯಾಯಾಲಯವು ಆಧರಿಸಿದ ಕಾನೂನಿನ ತತ್ವವೇ 'ratio decidendi' ) ಆಗುವುದಿಲ್ಲ. ಬಿ. ಶಾಮರಾವ್ ವಿರುದ್ಧ ಪಾಂಡಿಚೇರಿ ಕೇಂದ್ರಾಡಳಿತ ಪ್ರದೇಶ ಪ್ರಕರಣದಲ್ಲಿ ಹೀಗೆ ಗಮನಿಸಲಾಯಿತು, 'ಒಂದು ತೀರ್ಪನ್ನು ಅನುಸರಿಸಬೇಕಾಗಿರುವುದು ಅದರ ಅಂತಿಮ ತೀರ್ಮಾನದ ಕಾರಣದಿಂದಲ್ಲ; ಬದಲಾಗಿ, ಅದರ ratio ಮತ್ತು ಅದರಲ್ಲಿ ಪ್ರತಿಪಾದಿಸಲಾದ ಕಾನೂನು ತತ್ವಗಳ ಕಾರಣದಿಂದಾಗಿದೆ ಎಂಬುದು ಸುಸ್ಥಾಪಿತ ಕಾನೂನು ತತ್ವವಾಗಿದೆ'. ವಿವೇಚನೆಯನ್ನು ಬಳಸದೆ ಅಥವಾ ಯಾವುದೇ ಕಾರಣವಿಲ್ಲದೆ ತಲುಪಿದ ಯಾವುದೇ ಘೋಷಣೆ ಅಥವಾ ತೀರ್ಮಾನವನ್ನು ಕಾನೂನಿನ ಘೋಷಣೆ ಅಥವಾ ಪೂರ್ವನಿದರ್ಶನವಾಗಿ ಬದ್ಧವಾಗಿರುವ ಸಾಮಾನ್ಯ ಸ್ವರೂಪದ ಕಾನೂನು ತತ್ವ ಎಂದು ಪರಿಗಣಿಸಲಾಗುವುದಿಲ್ಲ."

ಹಾಗೆಯೇ, ಮಧ್ಯಪ್ರದೇಶ ಹೌಸಿಂಗ್ ಆಂಡ್ ಇನ್ಫ್ರಾಸ್ಟ್ರಕ್ಚರ್ ಡೆವಲಪ್ಮೆಂಟ್ ಬೋರ್ಡ್ ವಿರುದ್ಧ ಬಿ.ಎಸ್.ಎಸ್. ಪರಿಹಾರ್ [AIR 2015 SC 3436] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಗವರ್ನಮೆಂಟ್ ಆಫ್ ಕರ್ನಾಟಕ ಮತ್ತು ಇತರರು ವಿರುದ್ಧ ಶ್ರೀಮತಿ ಗೌರಮ್ಮ [AIR 2008 SC 863] ಪ್ರಕರಣದ ಅವಲೋಕನಗಳನ್ನು ಉಲ್ಲೇಖಿಸಿ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

> "19. ತೀರ್ಪುಗಳ ಪೂರ್ವನಿದರ್ಶನದ ಮೌಲ್ಯಕ್ಕೆ (precedential value) ಸಂಬಂಧಿಸಿದಂತೆ ಗವರ್ನಮೆಂಟ್ ಆಫ್ ಕರ್ನಾಟಕ ವಿರುದ್ಧ ಗೌರಮ್ಮ ಪ್ರಕರಣದಲ್ಲಿ ಪ್ರತಿಪಾದಿಸಲಾದ ಈ ಕೆಳಗಿನ ತತ್ವಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ:
>
> "10. '12. ... ಪ್ರಕರಣದ ವಾಸ್ತವಿಕ ಹಿನ್ನೆಲೆಯನ್ನು ಪರಿಶೀಲಿಸದೆ ಕೇವಲ ತೀರ್ಪಿನ ಮೇಲೆ ಅವಲಂಬಿತವಾಗುವುದು (ಆಧಾರವಾಗಿಸಿಕೊಳ್ಳುವುದು) ಸ್ಪಷ್ಟವಾಗಿ ಅನುಮತಿಸದ ಸಂಗತಿಯಾಗಿದೆ. ಒಂದು ತೀರ್ಪು ಅದರದ್ದೇ ಆದ ಸತ್ಯಾಂಶಗಳ ಆಧಾರದ ಮೇಲೆ ಪೂರ್ವನಿದರ್ಶನವಾಗುತ್ತದೆ. ಪ್ರತಿ ಪ್ರಕರಣವು ತನ್ನದೇ ಆದ ವಿಶಿಷ್ಟ ಲಕ್ಷಣಗಳನ್ನು ಹೊಂದಿರುತ್ತದೆ. ನ್ಯಾಯಾಧೀಶರು ತೀರ್ಪು ನೀಡುವಾಗ ಹೇಳುವ ಪ್ರತಿಯೊಂದು ಮಾತು ಪೂರ್ವನಿದರ್ಶನವಾಗುವುದಿಲ್ಲ. ನ್ಯಾಯಾಧೀಶರ ತೀರ್ಪಿನಲ್ಲಿ ಕಕ್ಷಿದಾರರನ್ನು ಬದ್ಧಗೊಳಿಸುವ ಏಕೈಕ ಅಂಶವೆಂದರೆ, ಆ ಪ್ರಕರಣವನ್ನು ಯಾವ ತತ್ವದ ಆಧಾರದ ಮೇಲೆ ನಿರ್ಧರಿಸಲಾಗಿದೆ ಎನ್ನುವುದು. ಈ ಕಾರಣಕ್ಕಾಗಿಯೇ ತೀರ್ಪನ್ನು ವಿಶ್ಲೇಷಿಸುವುದು ಮತ್ತು ಅದರಿಂದ 'ರೇಷಿಯೋ ಡೆಸಿಡೆಂಡಿ'ಯನ್ನು (ratio decidendi-ತೀರ್ಪಿನ ಆಧಾರ ತತ್ವ) ಪ್ರತ್ಯೇಕಿಸುವುದು ಮುಖ್ಯವಾಗಿದೆ. ಸುಸ್ಥಾಪಿತ ಪೂರ್ವನಿದರ್ಶನಗಳ ಸಿದ್ಧಾಂತದ ಪ್ರಕಾರ, ಪ್ರತಿ ತೀರ್ಪು ಮೂರು ಮೂಲಭೂತ

ಪ್ರಮೇಯಗಳನ್ನು ಒಳಗೊಂಡಿರುತ್ತದೆ:

(i) ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕಂಡುಬಂದ ಮುಖ್ಯ ಸತ್ಯಾಂಶಗಳ ತೀರ್ಮಾನಗಳು. ಸತ್ಯಾಂಶಗಳ ಪರೋಕ್ಷ ತೀರ್ಮಾನವೆಂದರೆ ಪ್ರತ್ಯಕ್ಷ ಅಥವಾ ಗೋಚರ ಸತ್ಯಾಂಶಗಳಿಂದ ನ್ಯಾಯಾಧೀಶರು ತಲುಪುವ ತರ್ಕಬದ್ಧ ತೀರ್ಮಾನ; (ii) ಸತ್ಯಾಂಶಗಳಿಂದ ವ್ಯಕ್ತವಾಗುವ ಕಾನೂನು ಸಮಸ್ಯೆಗಳಿಗೆ ಅನ್ವಯವಾಗುವ ಕಾನೂನಿನ ತತ್ವಗಳ ಹೇಳಿಕೆಗಳು; ಮತ್ತು (iii) ಮೇಲಿನ ಎರಡರ ಸಂಯೋಜಿತ ಪರಿಣಾಮದ ಮೇಲೆ ಆಧಾರಿತವಾದ ತೀರ್ಪು.

ಒಂದು ತೀರ್ಪು ಅದು ವಾಸ್ತವವಾಗಿ ಏನನ್ನು ನಿರ್ಧರಿಸುತ್ತದೆಯೋ ಅದಕ್ಕೆ ಮಾತ್ರ ಅಧಿಕೃತ ಆಧಾರವಾಗಿರುತ್ತದೆ. ತೀರ್ಪಿನಲ್ಲಿ ಅತ್ಯಂತ ಅತ್ಯಗತ್ಯವಾದ ಅಂಶವೆಂದರೆ ಅದರ ಆಧಾರ ತತ್ವವೇ(ratio) ಹೊರತು, ಅದರಲ್ಲಿ ಕಂಡುಬರುವ ಪ್ರತಿಯೊಂದು ಅವಲೋಕನವಾಗಲಿ ಅಥವಾ ತೀರ್ಪಿನಲ್ಲಿ ಮಾಡಲಾದ ವಿವಿಧ ಅವಲೋಕನಗಳಿಂದ ತಾರ್ಕಿಕವಾಗಿ ಹೊರ ಹೊಮ್ಮುವ ಅಂಶವಾಗಲಿ ಅಲ್ಲ. ನ್ಯಾಯಾಲಯದ ಮುಂದಿರುವ ಪ್ರಶ್ನೆಯನ್ನು ಯಾವ ಕಾರಣ ಅಥವಾ ತತ್ವದ ಆಧಾರದ ಮೇಲೆ ನಿರ್ಧರಿಸಲಾಗಿದೆಯೋ, ಅದು ಮಾತ್ರ ಪೂರ್ವನಿದರ್ಶನವಾಗಿ ಬದ್ಧವಾಗಿರುತ್ತದೆ. (ನೋಡಿ: ಸ್ಟೇಟ್ ಆಫ್ ಒರಿಸ್ಸಾ ವಿರುದ್ಧ ಸುಧಾಂಶು ಶೇಖರ್ ಮಿಶ್ರಾ ಮತ್ತು ಯೂನಿಯನ್ ಆಫ್ ಇಂಡಿಯಾ ವಿರುದ್ಧ ಧನ್ವಂತಿ ದೇವಿ). ಒಂದು ಪ್ರಕರಣವು ಅದು ಸ್ಪಷ್ಟವಾಗಿ ಏನನ್ನು ನಿರ್ಧರಿಸುತ್ತದೆಯೋ ಅದಕ್ಕೆ ಮಾತ್ರ ಪೂರ್ವನಿದರ್ಶನವಾಗಿರುತ್ತದೆ ಮತ್ತು ಆ ಮಟ್ಟಿಗೆ ಮಾತ್ರ ಅದನ್ನು ಅನುಸರಿಸಬೇಕಾಗುತ್ತದೆ; ಅದಕ್ಕಿಂತ ಹೆಚ್ಚಿನ ವಿಷಯಗಳಿಗೆ ಅದು ಅನ್ವಯಿಸುವುದಿಲ್ಲ . ನ್ಯಾಯಾಧೀಶರು ತಮ್ಮ ತೀರ್ಪುಗಳಲ್ಲಿ ಬಳಸುವ ಪದಗಳನ್ನು ಸಂಸತ್ತಿನ ಕಾಯಿದೆಯ (Act of Parliament) ಪದಗಳಂತೆ ಓದಬಾರದು.

ಕ್ವಿನ್ ವಿರುದ್ಧ ಲೀಥೆಮ್ ಪ್ರಕರಣದಲ್ಲಿ ಅರ್ಲ್ ಆಫ್ ಹ್ಯಾಲ್ಸ್‌ಬರಿ, ಎಲ್.ಸಿ. ಅವರು ಹೀಗೆ ಅವಲೋಕಿಸಿದ್ದಾರೆ - ಪ್ರತಿ ತೀರ್ಪನ್ನು ಸಾಬೀತಾದ ಅಥವಾ ಸಾಬೀತಾಗಿದೆ ಎಂದು ಊಹಿಸಲಾದ ನಿರ್ದಿಷ್ಟ ಸತ್ಯಾಂಶಗಳಿಗೆ ಅನ್ವಯವಾಗುವಂತೆ ಓದಬೇಕು; ಏಕೆಂದರೆ ತೀರ್ಪಿನಲ್ಲಿ ಬಳಸಿರುವ ಹೇಳಿಕೆಗಳನ್ನು ಇಡೀ ಕಾನೂನಿಗೆ ಅನ್ವಯಿಸುವ ಸಾಮಾನ್ಯ ನಿಯಮವೆಂದು ಪರಿಗಣಿಸಬಾರದು; ಬದಲಾಗಿ, ಆ ಹೇಳಿಕೆಗಳನ್ನು ಮಾಡಲಾದ ಪ್ರಕರಣದ ನಿರ್ದಿಷ್ಟ ವಾಸ್ತವಾಂಶಗಳ ಹಿನ್ನೆಲೆಯಲ್ಲಿ ಅವುಗಳ ಅರ್ಥ ಮತ್ತು ವ್ಯಾಪ್ತಿಯನ್ನು ಅರ್ಥಮಾಡಿಕೊಳ್ಳಬೇಕು. ಹಾಗೂ ಒಂದು ಪ್ರಕರಣವು ಅದು ವಾಸ್ತವವಾಗಿ ಏನನ್ನು ನಿರ್ಧರಿಸುತ್ತದೆಯೋ ಅದಕ್ಕೆ ಮಾತ್ರ ಅಧಿಕೃತ ಆಧಾರವಾಗಿರುತ್ತದೆ."

PTCL ಕಾಯ್ದೆಯ ಯಾವುದೇ ನಿಬಂಧನೆಗಳನ್ನು ಪರಿಶೀಲಿಸದೆ, ಸೆಕ್ಷನ್ 4(1) ರ ಅಸಿಂಧುತ್ವದ ಘೋಷಣೆ ಅಥವಾ ಸೆಕ್ಷನ್ 11 ರ ಓವರ್‌ರೈಡಿಂಗ್ ಪರಿಣಾಮವನ್ನು ಪರಿಗಣಿಸದೆ,

ಮತ್ತು ಬಿಹಾರ ಕೋಸಿ ಕಾಯ್ದೆಯ ವಾಸ್ತವಿಕ ಹಾಗು ಶಾಸಾನಾತ್ಮಕ ಹಿನ್ನೆಲೆಯು ಪಿಟಿಸಿಎಲ್ ಕಾಯ್ದೆಯ ಸಂಪೂರ್ಣ ವಿಭಿನ್ನ ಹಿನ್ನೆಲೆಗೆ ಹೇಗೆ ಅನ್ವಯಿಸುತ್ತದೆ ಎಂಬ ಯಾವುದೇ ವಿಶ್ಲೇಷಣೆ ಮಾಡದೆ, ಪಿಟಿಸಿಎಲ್ ಕಾಯ್ದೆಗೆ ಛೇದಿ ಲಾಲ್ ತತ್ವವನ್ನು ಅನ್ವಯಿಸಿದ 'ನೆಕ್ಕಂಟಿ' ತೀರ್ಪು ಈ ಮೇಲಿನ ಯಾವುದೇ ಕಾನೂನು ಅಗತ್ಯತೆಗಳನ್ನು ಪೂರೈಸುವುದಿಲ್ಲ.

ನ್ಯಾಯಾಂಗದ ತೀರ್ಪಿನ ಮೂಲಕ ಪಿಟಿಸಿಎಲ್ ಪ್ರಕ್ರಿಯೆಗಳಲ್ಲಿ ಕಾಲಮಿತಿಯ ಅವಧಿಯನ್ನು ತರುವುದು 'ನ್ಯಾಯಾಂಗದ ಶಾಸನ ರಚನೆ'ಗೆ (Judicial legislation) ಸಮನಾಗುತ್ತದೆ, ಇದು ಕಾನೂನಿನ ಪ್ರಕಾರ ಸಂಪೂರ್ಣವಾಗಿ ನಿಷಿದ್ಧವಾಗಿದೆ. ಶಾಸಕಾಂಗವು ಪಿಟಿಸಿಎಲ್ ಕಾಯ್ದೆಯನ್ನು ರೂಪಿಸುವಾಗ, ಮರುಸ್ವಾಧೀನ ಅರ್ಜಿಗಳಿಗೆ ಯಾವುದೇ ಕಾಲಮಿತಿಯನ್ನು ನಿಗದಿಪಡಿಸಬಾರದು ಎಂದು ಉದ್ದೇಶಪೂರ್ವಕವಾಗಿಯೇ ನಿರ್ಧರಿಸಿತ್ತು. ಈ ನಿರ್ಧಾರವು ನಿರಂತರ ದಾವೆಯ ಕಾರಣಕ್ಕೆ ದಾರಿ ಮಾಡಿಕೊಡುವ ಶಾಸನಾತ್ಮಕ ಶೂನ್ಯತೆ ನಿವಾರಿಸುವ ಒಂದು ವಿಶೇಷ ಶಾಸನದ ಸ್ವರೂಪಕ್ಕೆ ಪೂರಕವಾಗಿತ್ತು. ನ್ಯಾಯಾಲಯಗಳು ಈ ಕಾಯ್ದೆಯಡಿ 'ಸಮಂಜಸ ಅವಧಿ'ಯ ಸಿದ್ಧಾಂತವನ್ನು ಹೇರಿದಾಗ, ಅವು ಕಾಯ್ದೆಯನ್ನು ವ್ಯಾಖ್ಯಾನಿಸುತ್ತಿಲ್ಲ; ಬದಲಿಗೆ ಶಾಸಕಾಂಗವು ಉದ್ದೇಶಪೂರ್ವಕವಾಗಿ ಕೈಬಿಟ್ಟಿದ್ದ ಕಾಲಮಿತಿಯ ನಿಯಮವನ್ನು ತಾವೇ ಸೇರಿಸುವ ಮೂಲಕ ಕಾಯ್ದೆಗೆ ತಿದ್ದುಪಡಿ ಮಾಡುತ್ತಿವೆ.

ಈ ನ್ಯಾಯಾಂಗದ ತಪ್ಪಿನಿಂದ ಹರಿದು ಬಂದಿರುವ ಅನ್ಯಾಯವು ಕೇವಲ ಸೈದ್ಧಾಂತಿಕವಾದುದಲ್ಲ. ಕರ್ನಾಟಕದಾದ್ಯಂತ ಈ ಒಂದು ಕಾರಣಕ್ಕಾಗಿಯೇ ಸಾವಿರಾರು ಮೂಲ ಮಂಜೂರಾತಿದಾರರ ಅರ್ಜಿಗಳು ವಜಾಗೊಂಡು, ಅವರು ಈ ಅನ್ಯಾಯವನ್ನು ಪ್ರತ್ಯಕ್ಷವಾಗಿ ಅನುಭವಿಸುತ್ತಿದ್ದಾರೆ.

ಈ ಸಂದರ್ಭದಲ್ಲಿ, ಸುಪ್ರೀಂ ಕೋರ್ಟ್ 'ಎ.ಆರ್. ಅಂತುಲೆ ವರ್ಸಸ್ ಆರ್.ಎಸ್. ನಾಯಕ್ ಮತ್ತು ಇತರರು' [AIR 1988 SC 1531] ಪ್ರಕರಣದಲ್ಲಿ ವ್ಯಕ್ತಪಡಿಸಿದ ಕಾನೂನು ಸೂತ್ರವು ಅತ್ಯಂತ ಪ್ರಸ್ತುತವಾಗಿದೆ. ನ್ಯಾಯಾಲಯವು ಹೀಗೆ ಹೇಳಿದೆ:

> " ನ್ಯಾಯಾಲಯದ ತಪ್ಪಿನಿಂದಾಗಿ ಯಾವುದೇ ವ್ಯಕ್ತಿಯೂ ತೊಂದರೆ ಅನುಭವಿಸಬಾರದು. ತಾಂತ್ರಿಕ ಕಾರ್ಯವಿಧಾನಗಳ ಲೋಪದೋಷಗಳಿಂದಾಗಿ ಯಾವುದೇ ಮನುಷ್ಯನಿಗೆ ಅನ್ಯಾಯವಾಗಬಾರದು. ನಿಯಮಗಳು ಅಥವಾ ಕಾರ್ಯವಿಧಾನಗಳು ನ್ಯಾಯದ ದಾಸಿಯರೇ ಹೊರತು ನ್ಯಾಯದ ಯಜಮಾನಿಯರಲ್ಲ (Rules or procedures are the hand-maids of justice and not the mistress of justice). ಪರಿಪೂರ್ಣ ನ್ಯಾಯದ ಹಿತದೃಷ್ಟಿಯಿಂದ (Ex debite justitiae), ನಾವು ಅವನಿಗೆ ನ್ಯಾಯ ಒದಗಿಸಲೇಬೇಕು. ಒಬ್ಬ ವ್ಯಕ್ತಿಗೆ ಅನ್ಯಾಯವಾಗಿದ್ದರೆ, ನ್ಯಾಯನಿರ್ವಹಣಾ ವ್ಯವಸ್ಥೆಯ ಮೂಲಕ ಅದನ್ನು ಪರಿಹರಿಸಲು ಸಾಧ್ಯವಿರುವವರೆಗೆ, ಆ ಅನ್ಯಾಯವನ್ನು ಪರಿಹರಿಸಲೇಬೇಕು. ."

ನ್ಯಾಯಾಲಯವು ಮುಂದುವರಿದು "Actus Curiae Neminem Gravabit" (ನ್ಯಾಯಾಲಯದ ಕ್ರಮ ಅಥವಾ ತೀರ್ಪು ಯಾರಿಗೂ ಹಾನಿ ಉಂಟುಮಾಡಬಾರದು) ಎಂಬ

ಪ್ರಸಿದ್ಧ ಕಾನೂನು ಸೂತ್ರವನ್ನು ಉಲ್ಲೇಖಿಸಿತು. ಇದು ನ್ಯಾಯ ಮತ್ತು ವಿವೇಕದ ಮೇಲೆ ಆಧಾರಿತವಾಗಿದ್ದು, ಕಾನೂನಿನ ಪರಿಪೂರ್ಣ ಜಾರಿಗೆ ಒಂದು ಸುರಕ್ಷಿತ ಮತ್ತು ಖಚಿತವಾದ ಮಾರ್ಗದರ್ಶಿಯಾಗಿದೆ. ಕಾಯ್ದೆಯ ಸ್ವಂತ ನಿಬಂಧನೆಗಳನ್ನು ಪರಿಗಣಿಸದೆ ಮತ್ತು ಅಪ್ರಸ್ತುತ ಪೂರ್ವನಿದರ್ಶನವನ್ನು ಆಧಾರವಾಗಿಟ್ಟುಕೊಂಡು ನೀಡಲಾದ 'ನೆಕ್ಕಂಟಿ' ತೀರ್ಪಿನಿಂದಾಗಿ ಮಂಜೂರಾತಿದಾರರಿಗೆ ಆಗಿರುವ ಅನ್ಯಾಯವು, ಈ ಕಾನೂನು ಸೂತ್ರದ ಪ್ರಕಾರ ತಕ್ಷಣವೇ ಸರಿಪಡಿಸಲ್ಪಡಬೇಕಾದ ಅನ್ಯಾಯವಾಗಿದೆ.

**ಮೇಲಿನ ಎಲ್ಲ ಅಂಶಗಳ ಬೆಳಕಿನಲ್ಲಿ, 'ನೆಕ್ಕಂಟಿ ರಾಮಲಕ್ಷ್ಮಿ ವರ್ಸಸ್ ಕರ್ನಾಟಕ ರಾಜ್ಯ ಮತ್ತು ಇತರರು' [(2020) 14 SCC 232] ಪ್ರಕರಣದಲ್ಲಿ ನೀಡಲಾದ ತೀರ್ಪು 'ಪರ್ ಇನ್ಕ್ಯುರಿಯಂ' (Per incuriam) ಆಗಿದೆ ಎಂಬುದು ಜ್ಯೂರಿ ಸಮಿತಿಯ ವಿಚಾರಪೂರ್ವದ ಅಭಿಪ್ರಾಯವಾಗಿದೆ.**

ಈ ನೆಕ್ಕಂಟಿ ತೀರ್ಪಿನ ವಿರುದ್ಧದ ಮರುಪರಿಶೀಲನಾ ಅರ್ಜಿ ಪ್ರಸ್ತುತ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಉಳಿದಿದೆ.

**2023 ರ ಶಾಸಕಾಂಗ ತಿದ್ದುಪಡಿ ಮತ್ತು ಪ್ರಸ್ತುತ ಸ್ಥಿತಿ**

2023 ರಲ್ಲಿ, ಕರ್ನಾಟಕ ಶಾಸಕಾಂಗವು ಮರುಸ್ವಾಧೀನ ಅರ್ಜಿಗಳಿಗೆ ಕಾಲಮಿತಿಯು ಅನ್ವಯಿಸುವುದಿಲ್ಲ ಎಂಬುದನ್ನು ಅತ್ಯಂತ ಸ್ಪಷ್ಟವಾಗಿ ದಾಖಲಿಸಲು ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತಂದಿತು. ಈ ತಿದ್ದುಪಡಿಯು 'ನೆಕ್ಕಂಟಿ' ತೀರ್ಪಿನಲ್ಲಿ ನ್ಯಾಯಾಲಯ ನೀಡಿದ್ದ ನಿರ್ಧಾರವನ್ನು ತಿದ್ದುವ ಒಂದು ಪ್ರಯತ್ನವಾಗಿತ್ತು.

ತಿದ್ದುಪಡಿ ಕಾಯ್ದೆಯ ಸೆಕ್ಷನ್ 2 ಹೀಗೆ ಹೇಳುತ್ತದೆ:

> " ೨. ಸೆಕ್ಷನ್ ೫ ರ ತಿದ್ದುಪಡಿ.- ಕರ್ನಾಟಕ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು (ಕೆಲವು ಜಮೀನುಗಳ ವರ್ಗಾವಣೆ ನಿಷೇಧ) ಕಾಯ್ದೆ, 1978 (1979 ರ ಕರ್ನಾಟಕ ಕಾಯ್ದೆ ಸಂಖ್ಯೆ ೨) ರ ಸೆಕ್ಷನ್ ೫ ರ ಉಪ-ಸೆಕ್ಷನ್ (೧) ರಲ್ಲಿ, ಕ್ಲಾಸ್ (b) ನ ನಂತರ, ಈ ಕೆಳಗಿನ ನಿಬಂಧನೆಗಳನ್ನು ಸೇರಿಸತಕ್ಕದ್ದು ಮತ್ತು ಅವುಗಳನ್ನು ಯಾವಾಗಲೂ ಸೇರಿಸಲಾಗಿತ್ತು ಎಂದೇ ಪರಿಗಣಿಸತಕ್ಕದ್ದು, ಅಂದರೆ:-
>
> ( c ) ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಕಾಯ್ದೆಯ ನಿಬಂಧನೆಗಳನ್ನು ಜಾರಿಗೊಳಿಸಲು ಯಾವುದೇ ಕಾಲಮಿತಿ ಇರುವುದಿಲ್ಲ.
>
> ( d ) ಕ್ಲಾಸ್ (c ) ನ ನಿಬಂಧನೆಗಳು ಈ ಸೆಕ್ಷನ್ ಅಡಿಯಲ್ಲಿ ಪ್ರಕರಣಗಳನ್ನು ನಿರ್ಧರಿಸುತ್ತಿರುವ ಎಲ್ಲಾ ಸಕ್ಷಮ ಪ್ರಾಧಿಕಾರಗಳು ಮತ್ತು ಎಲ್ಲಾ ನ್ಯಾಯಾಲಯಗಳ ಮುಂದೆ ಬಾಕಿ ಇರುವ ಎಲ್ಲಾ ಪ್ರಕರಣಗಳಿಗೂ ಅನ್ವಯಿಸತಕ್ಕದ್ದು."

ಜ್ಯೂರಿ ಸಮಿತಿಯ ಅಭಿಪ್ರಾಯದ ಪ್ರಕಾರ, ಕಟ್ಟುನಿಟ್ಟಾಗಿ ಹೇಳುವುದಾದರೆ ಈ 2023 ರ ತಿದ್ದುಪಡಿಯ ಅಗತ್ಯವೇ ಇರಲಿಲ್ಲ; ಏಕೆಂದರೆ ಪಿಟಿಸಿಎಲ್ ಕಾಯ್ದೆಯು ಮೊದಲಿನಿಂದಲೂ ಯಾವುದೇ ಕಾಲಮಿತಿಯನ್ನು ನಿಗದಿಪಡಿಸಿರಲಿಲ್ಲ. ಮಂಜೂರಾದ ಜಮೀನುಗಳ

ವರ್ಗಾವಣೆಗಳು ಆರಂಭದಿಂದಲೇ ಶೂನ್ಯ ಮತ್ತು ಅಸಿಂಧು (Void ab initio) ಎಂಬ ಸೆಕ್ಷನ್ 4(1) ರ ಘೋಷಣೆಯೇ ನಿರಂತರ ಮತ್ತು ಪುನರಾವರ್ತಿತ ದಾವೆಗೆ ಕಾರಣವನ್ನು ನೀಡುತ್ತದೆ. ಇದು ಕಾಲ ಕಳೆದಂತೆ ಎಂದಿಗೂ ಮುಕ್ತಾಯಗೊಳ್ಳುವುದಿಲ್ಲ. ಸೆಕ್ಷನ್ 11 ರ ಓವರ್‌ರೈಡಿಂಗ್ ಪರಿಣಾಮವು ಸಾಮಾನ್ಯ ಕಾಲಮಿತಿ ಕಾನೂನನ್ನು ಸಂಪೂರ್ಣವಾಗಿ ಬದಿಗೆ ಸರಿಸುತ್ತದೆ. 'ನೆಕ್ಕಂಟಿ' ತೀರ್ಪು ಶಾಸನದಲ್ಲಿ ಇಲ್ಲದ ಕಾಲಮಿತಿಯನ್ನು ಕಾಯ್ದೆಯ ಸ್ವಂತ ನಿಬಂಧನೆಗಳನ್ನು ಪರಿಶೀಲಿಸದೆಯೇ ಬಲವಂತವಾಗಿ ಸೇರಿಸಿತ್ತು. ಈ ಶಾಸಕಾಂಗ ತಿದ್ದುಪಡಿಯನ್ನು ಕಾಯ್ದೆಯ ಮೂಲ ಪಠ್ಯದಿಂದ ನ್ಯಾಯಾಂಗವು ದೂರ ಸರಿದಿದ್ದನ್ನು ಸರಿಪಡಿಸಲು ತರಲಾಯಿತು. ಆ ಅರ್ಥದಲ್ಲಿ, ಇದು ಕಾನೂನು ಮೊದಲಿನಿಂದಲೂ ಏನನ್ನು ಒದಗಿಸಿತ್ತೋ ಅದನ್ನೇ ಮತ್ತೊಮ್ಮೆ ದೃಢೀಕರಿಸಿದಂತಾಗಿತ್ತು.

ಈ ತಿದ್ದುಪಡಿಯು 'ನಿಂಗಪ್ಪ' ಮತ್ತು 'ನೆಕ್ಕಂಟಿ' ತೀರ್ಪುಗಳಿಗಿಂತ ಮುಂಚಿತವಾಗಿ ಇದ್ದ ಕಾನೂನು ಸ್ಥಿತಿಯನ್ನು ಮರುಸ್ಥಾಪಿಸಬೇಕಾಗಿತ್ತು; ಅಂದರೆ, ಕಾನೂನುಬಾಹಿರ ವರ್ಗಾವಣೆ ನಡೆದು ಎಷ್ಟು ಸಮಯ ಕಳೆದಿದೆ ಎಂಬುದನ್ನು ಲೆಕ್ಕಿಸದೆ, ಮರುಸ್ವಾಧೀನ ಅರ್ಜಿಗಳನ್ನು ಕೇವಲ ಅವುಗಳ ಅರ್ಹತೆಯ (Merits) ಆಧಾರದ ಮೇಲೆ ನಿರ್ಧರಿಸಬೇಕಾಗಿತ್ತು. ಆದಾಗ್ಯೂ, ಈ ತಿದ್ದುಪಡಿಯು ಇಂದಿಗೂ ಹೆಚ್ಚಾಗಿ ಜಾರಿಗೆ ಬಂದಿಲ್ಲ.

ಕಂದಾಯ ಅಧಿಕಾರಿಗಳ ಮಟ್ಟದಲ್ಲಿ, ಸಹಾಯಕ ಆಯುಕ್ತರು (AC) ಮತ್ತು ಜಿಲ್ಲಾಧಿಕಾರಿಗಳು (DC) ಇಂದಿಗೂ ಅರ್ಜಿಗಳನ್ನು ವಿಳಂಬದ ಆಧಾರದ ಮೇಲೆಯೇ ವಜಾಗೊಳಿಸುತ್ತಿದ್ದಾರೆ.ಈ ಅಧಿಕಾರಿಗಳು ವಜಾಗೊಳಿಸುವಾಗ ಈ ತಿದ್ದುಪಡಿಯನ್ನು ಉಲ್ಲೇಖಿಸುತ್ತಿಲ್ಲ ಅಥವಾ ಇದಕ್ಕೆ ಸೀಮಿತ ವ್ಯಾಪ್ತಿ ಇದೆ ಎಂದು ಭಾವಿಸುತ್ತಿದ್ದಾರೆ, ಇವರ ಈ ಕ್ರಮ ತಿದ್ದುಪಡಿಯ ಸ್ಪಷ್ಟವಾದ ಪೂರ್ವಾನ್ವಯ ಪರಿಣಾಮದ (Retrospective effect) ನಿಯಮಗಳಿಗೆ ವಿರುದ್ಧವಾಗಿದೆ.

ನ್ಯಾಯಾಂಗದ ಮಟ್ಟದಲ್ಲೂ ಸಹ, ಈ ತಿದ್ದುಪಡಿಯನ್ನು ಮತ್ತೆ ನಿಷ್ಪ್ರಯೋಜಕಗೊಳಿಸಲಾಗಿದೆ. 'ಗೌರಮ್ಮ ವರ್ಸಸ್ ಡೆಪ್ಯುಟಿ ಕಮಿಷನರ್' [Writ Appeal No. 100101/2024, ತೀರ್ಪು ದಿನಾಂಕ 29.07.2024] ಮತ್ತು 'ಎಂ. ಮಂಜುಳಾ ವರ್ಸಸ್ ಡೆಪ್ಯುಟಿ ಕಮಿಷನರ್' [Writ Appeal No. 210 of 2023, ತೀರ್ಪು ದಿನಾಂಕ 25.11.2024] ಪ್ರಕರಣಗಳಲ್ಲಿ ನ್ಯಾಯಾಲಯಗಳು ತಿದ್ದುಪಡಿಯನ್ನು ವ್ಯಾಖ್ಯಾನಿಸುವಾಗ, ಕಾಲಮಿತಿಯನ್ನು ಹೊರಗಿಡಲೆಂದೇ ತರಲಾಗಿದ್ದ ನಿಬಂಧನೆಯೊಳಗೆ ಮತ್ತೆ ಕಾಲಮಿತಿಯ ಅಂಶಗಳನ್ನು ತೂರಿಸುವ ಮೂಲಕ, ಪರೋಕ್ಷವಾಗಿ ಹಳೆಯ 'ನೆಕ್ಕಂಟಿ' ನಿಲುವನ್ನೇ ಮರುಜೀವಗೊಳಿಸಿವೆ.

ಇದರ ಅಂತಿಮ ಪರಿಣಾಮವೇನೆಂದರೆ - ಶಾಸಕಾಂಗ ತಂದ ತಿದ್ದುಪಡಿಯು ಕೇವಲ ಕಾಗದದ ಮೇಲಿದೆಯೇ ಹೊರತು ವಾಸ್ತವದಲ್ಲಿ ಜಾರಿಯಲ್ಲಿಲ್ಲ.

**4.3 ಜಾತಿಯ ಸಾಮಾಜಿಕ ಹಿನ್ನೆಲೆ ಮತ್ತು ಕಾಯಿದೆಯ ಕಲ್ಯಾಣೋದ್ದೇಶವನ್ನು ಗುರುತಿಸುವಲ್ಲಿ ನ್ಯಾಯಾಂಗದ ವಿಫಲತೆ**

ಭೂಸುಧಾರಣಾ ಕಾಯಿದೆಯೊಂದನ್ನು ವ್ಯಾಖ್ಯಾನಿಸುವಾಗ, ಅಥರೈಸ್ಡ್ ಆಫೀಸರ್, ತಂಜಾವೂರು ಮತ್ತು ಇತರರು ವಿರುದ್ಧ ಎಸ್. ನಾಗನಾಥ ಅಯ್ಯರ್ ಮತ್ತು ಇತರರು [(1979) 3 SCC 466] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಸಾಮಾಜಿಕ ನ್ಯಾಯದ ಕಾನೂನುಗಳ ಬಗ್ಗೆ ನ್ಯಾಯಾಲಯಗಳು ಹೊಂದಿರಬೇಕಾದ ದೃಷ್ಟಿಕೋನವನ್ನು ಈ ಕೆಳಗಿನಂತೆ ಪ್ರತಿಪಾದಿಸಿತು:

> " ನ್ಯಾಯಾಧೀಶರು ಸಾಂವಿಧಾನಿಕ ಕಾವಲುಗಾರರು ಮತ್ತು ಶಾಸನಗಳ ವ್ಯಾಖ್ಯಾನಕಾರರು ಎಂಬುದು ನಿಜ; ಆದರೆ ಅದರೊಂದಿಗೆ ಅವರು ಸಾಮಾಜಿಕ-ಆರ್ಥಿಕ ವ್ಯವಸ್ಥೆಯ ಪರಿವರ್ತನೆಗಾಗಿ ರಾಷ್ಟ್ರವು ನೇಮಿಸಿದ ಮೂರು ಪ್ರಮುಖ ಅಂಗಗಳಲ್ಲಿ ಒಂದಾಗಿದ್ದು , ಅವರು ಸಂವಿಧಾನದ ಭಾಗ IV ಕ್ಕೆ (ರಾಜ್ಯ ನಿರ್ದೇಶಕ ತತ್ವಗಳು) ಸ್ಪಂದಿಸುವ ಮತ್ತು ಜವಾಬ್ದಾರಿಯುತರಾಗಿರುವ ವ್ಯವಸ್ಥೆಯಾಗಿದ್ದಾರೆ. ಸಂವಿಧಾನಾತ್ಮಕ ವ್ಯವಸ್ಥೆ ಗೆ ಇರುವ ಕ್ರಾಂತಿಕಾರಿ ಉದ್ದೇಶವು ನ್ಯಾಯಾಂಗಕ್ಕೂ ಸಹ ಇದ್ದು , ನ್ಯಾಯಾಂಗವು ಸಾಮಾಜಿಕ ಕಾನೂನುಗಳನ್ನು ಡಿಕೋಡ್ (ವಿಶ್ಲೇಷಣೆ) ಮಾಡುವಾಗ ಗುರಿ-ಆಧಾರಿತ ದೃಷ್ಟಿಕೋನದಿಂದ ಪ್ರೇರಿತವಾಗಬೇಕು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಶಾಸನಗಳ ವ್ಯಾಖ್ಯಾನದ ಚಲನಶೀಲ ಪ್ರಕ್ರಿಯೆಯ ಒಂದು ಭಾಗವೇನೆಂದರೆ, ದೇಶದಲ್ಲಿ ಈಗಾಗಲೇ ಪರಿಚಿತವಾಗಿರುವ ಹಾಗೂ ಮೇಲ್ಮನವಿ ಸಲ್ಲಿಸಲಾದ ಈ ಪ್ರಕರಣಗಳಲ್ಲಿಯೂ ಕಂಡುಬರುವ ವಿವಿಧ ಸ್ವರೂಪಗಳ ವ್ಯವಹಾರಗಳ ಮೂಲಕ ಕೃಷಿ ನ್ಯಾಯವನ್ನು ಸೋಲಿಸಲು ಯತ್ನಿಸುವವರಿಗೆ ನ್ಯಾಯಾಲಯಗಳು ಆಶ್ರಯತಾಣಗಳಾಗಿ ಪರಿವರ್ತನೆಯಾಗದಂತೆ ನೋಡಿಕೊಳ್ಳುವುದು. ಈ ಎಚ್ಚರಿಕೆಯು ಅಗತ್ಯವಾಗಿದೆ ಏಕೆಂದರೆ ನ್ಯಾಯಾಂಗವು ಕೆಲವರು ಭಾವಿಸುವಂತೆ ಕೇವಲ ಒಬ್ಬ ಅಂಪೈರ್ (ತೀರ್ಪುಗಾರ) ಅಲ್ಲ, ಬದಲಿಗೆ ಸಾಂವಿಧಾನಿಕ ಯೋಜನೆಯಲ್ಲಿ ಸಕ್ರಿಯ ವೇಗವರ್ಧಕವಾಗಿದೆ (catalyst / ಪ್ರೇರಕ ಶಕ್ತಿ)."

ಸರ್ವೋಚ್ಚ ನ್ಯಾಯಾಲಯವು ಹರ್ಜಿಂದರ್ ಸಿಂಗ್ ವಿರುದ್ಧ ಪಂಜಾಬ್ ಸ್ಟೇಟ್ ವೇರ್‌ಹೌಸಿಂಗ್ ಕಾರ್ಪೊರೇಷನ್ [AIR 2010 SC 611] ಪ್ರಕರಣದಲ್ಲಿ ಈ ಜವಾಬ್ದಾರಿಯನ್ನು ಪುನರುಚ್ಚರಿಸಿದೆ:

> "ಸಾಮಾಜಿಕ ಹಿತವನ್ನು ಸಾಧಿಸುವ ಉದ್ದೇಶವುಳ್ಳ ಶಾಸನಗಳನ್ನು ಅದರ ಶಾಸನಬದ್ಧ ಗುರಿಯನ್ನು ಮುನ್ನಡೆಸುವ ರೀತಿಯಲ್ಲಿ ವ್ಯಾಖ್ಯಾನಿಸುವುದು ನ್ಯಾಯಾಲಯದ ಕರ್ತವ್ಯವೇ ಹೊರತು ಅದನ್ನು ಹತಾಶೆಗೊಳಿಸುವುದಲ್ಲ. ಹಾಗೆ ಮಾಡುವಾಗ, ಮೇಲೆ ಚರ್ಚಿಸಲಾದ ಸ್ಪಷ್ಟ ಸಾಂವಿಧಾನಿಕ ಆದೇಶವನ್ನು ಗಮನದಲ್ಲಿಟ್ಟುಕೊಂಡು ಸಮಾಜದ ದುರ್ಬಲ ವರ್ಗಗಳ ಹಕ್ಕುಗಳನ್ನು ರಕ್ಷಿಸಲು ಈ ನ್ಯಾಯಾಲಯವು ಶ್ರಮಿಸಬೇಕು."

ಪಿಟಿಸಿಎಲ್ (PTCL) ಕಾಯಿದೆಯು ನಿಖರವಾಗಿ ಇಂತಹದೇ ಒಂದು ಕಾನೂನಾಗಿದೆ. ಇದು ವಿತರಣಾ ನ್ಯಾಯದ (distributive justice) ಒಂದು ಕ್ರಮವಾಗಿದ್ದು, ಅತ್ಯಂತ ದುರ್ಬಲ ಸಮುದಾಯಗಳಲ್ಲಿ ಒಂದನ್ನು ರಕ್ಷಿಸಲು ವಿನ್ಯಾಸಗೊಳಿಸಲಾಗಿದೆ. ಆದ್ದರಿಂದ, ಅದರ

ಶಾಸನಬದ್ಧ ಉದ್ದೇಶವನ್ನು ಮುನ್ನಡೆಸಲು ಗುರಿ-ಆಧಾರಿತ ದೃಷ್ಟಿಕೋನದಿಂದ ಅದನ್ನು ವ್ಯಾಖ್ಯಾನಿಸುವ ಜವಾಬ್ದಾರಿ ಇದೆ.

ಆದರೆ ನ್ಯಾಯಾಲಯಗಳು ಪಿಟಿಸಿಎಲ್ ಕಾಯಿದೆಯನ್ನು ಸಾಮಾಜಿಕ ನ್ಯಾಯದ ಕಾನೂನು ಎಂದು, ಸಂವಿಧಾನದ ಆಶಯಗಳನ್ನು ಖಾತ್ರಿಪಡಿಸುವ ಕಾನೂನು ಎಂದು ಪರಿಗಣಿಸದೆ, ಸಾಮಾನ್ಯ ಸಿವಿಲ್ ಕಾನೂನಿನಂತೆ ಪರಿಗಣಿಸಿ, ವಾಣಿಜ್ಯ ಆಸ್ತಿ ವಿವಾದಗಳಿಗಾಗಿ ಅಭಿವೃದ್ಧಿಪಡಿಸಲಾದ ಸಿದ್ಧಾಂತಗಳು ಮತ್ತು ವ್ಯಾಖ್ಯಾನ ಸಾಧನಗಳನ್ನು ಅನ್ವಯಿಸುತಿದ್ದಾವೆ.

ನ್ಯಾಯಾಲಯಗಳು ಪಿಟಿಸಿಎಲ್ ಅರ್ಜಿಗಳನ್ನು ಅವು ಉದ್ಭವಿಸುವ ಸಾಮಾಜಿಕ ಮತ್ತು ಐತಿಹಾಸಿಕ ಹಿನ್ನೆಲೆಯನ್ನು ಪರಿಗಣಿಸದೆ ತೀರ್ಪು ನೀಡಿವೆ. PTCL ಕಾಯ್ದೆಯು ಸಾಮಾನ್ಯ ಆಸ್ತಿ ಕಾನೂನಿನ ಸಾಮಾನ್ಯ ಚೌಕಟ್ಟಿನಲ್ಲಿ (abstract terrain) ಮಾತ್ರ ಕಾರ್ಯನಿರ್ವಹಿಸುವ ಕಾಯ್ದೆಯಲ್ಲ. ಇದು ಒಂದು ನಿರ್ದಿಷ್ಟ ಸಾಮಾಜಿಕ ವಾಸ್ತವದಲ್ಲಿ ಕಾರ್ಯನಿರ್ವಹಿಸುತ್ತದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ (SC/ST) ಜಮೀನು ಮಂಜೂರಾತಿದಾರರು ದೇಶದ ಅತ್ಯಂತ ಆರ್ಥಿಕ ಮತ್ತು ಸಾಮಾಜಿಕವಾಗಿ ದುರ್ಬಲರಾಗಿರುವ ವ್ಯಕ್ತಿಗಳಲ್ಲಿ ಸೇರಿದ್ದಾರೆ. ಈ ದುರ್ಬಲತೆಯ ಲಾಭವನ್ನು ಪಡೆದು ವಂಚನೆ, ದಬ್ಬಾಳಿಕೆ ಮತ್ತು ಶೋಷಣೆಯ ಮೂಲಕ ಅವರಿಗೆ ಮಂಜೂರು ಮಾಡಲಾದ ಜಮೀನುಗಳನ್ನು ಕಸಿದುಕೊಳ್ಳಲಾಗಿದೆ. ಮತ್ತು ಮೂಲಭೂತವಾಗಿ ಜಮೀನು ಕಳೆದುಕೊಳ್ಳಲು ಕಾರಣವಾದ ಅದೇ ಜಾತಿ ದಬ್ಬಾಳಿಕೆಯ ಪರಿಸ್ಥಿತಿಗಳು ತದನಂತರದ ಜಮೀನು ಮರುಸ್ಥಾಪನೆ ಪಡೆಯುವ ಪ್ರತಿಯೊಂದು ಪ್ರಯತ್ನದ ಮೇಲೂ ಪ್ರಭಾವ ಬೀರುತ್ತಲೇ ಇವೆ.

ಮೇಲೆ ಪ್ರಸ್ತಾಪಿಸಲಾದ ಕಾಲಮಿತಿಯ (limitation) ಪ್ರಶ್ನೆಯು ಈ ಧೋರಣೆಯ ಅತ್ಯಂತ ಗಂಭೀರ ಪರಿಣಾಮದ ಉದಾಹರಣೆಯಾಗಿದೆ, ಆದರೆ ಇದು ಒಂದೇ ಅಲ್ಲ. ಇದರ ಪರಿಣಾಮವಾಗಿ, ಕಾಯ್ದೆಯ ವ್ಯಾಪ್ತಿಯನ್ನು ಕುಗ್ಗಿಸುವ ರೀತಿಯಲ್ಲಿ ವ್ಯವಸ್ಥಿತವಾಗಿ ವ್ಯಾಖ್ಯಾನಿಸಲಾಗಿದ್ದು, ಹಲವು ಆಯಾಮಗಳಲ್ಲಿ ಏಕಕಾಲದಲ್ಲೇ ಕಾಯ್ದೆಯ ಪರಿಣಾಮಕಾರಿತ್ವವನ್ನು ಕುಂಠಿತಗೊಳಿಸಲಾಗಿದೆ.

**ಸಾಮಾಜಿಕ ಪರಿಸ್ಥಿತಿಗಳನ್ನು ವಿಚಾರಣೆ ಮಾಡುವಲ್ಲಿ ವಿಫಲತೆ**

ಈ ಧೋರಣೆಯ ಅತ್ಯಂತ ಪ್ರಮುಖ ಸ್ವರೂಪವೆಂದರೆ, PTCL ಕಾಯ್ದೆಯಡಿ ದಾವೆಗಳನ್ನು ವಿಚಾರಣೆ ನಡೆಸುವಾಗ, ಮಂಜೂರಾತಿ ಪಡೆದವರು ಮತ್ತು ಅವರ ಕಾನೂನುಬದ್ಧ ವಾರಸುದಾರರ ಸಾಮಾಜಿಕ ಪರಿಸ್ಥಿತಿಗಳನ್ನು ಪರಿಶೀಲಿಸುವಲ್ಲಿ ನ್ಯಾಯಾಂಗವು ನಿರಂತರವಾಗಿ ವಿಫಲವಾಗಿರುವುದು. ಜಮೀನು ಮರುಸ್ಥಾಪನೆ (Resumption) ಅರ್ಜಿಗಳನ್ನು ಡಿಲೇ ಮತ್ತು ಲಾಚೆಸ್ ಏಕೈಕ ಕಾರಣದ ಮೇಲೆ ಸಾರಾಸಗಟಾಗಿ ವಜಾಗೊಳಿಸಲಾಗಿದೆ, ವಿಳಂಬ ಏಕೆ ಸಂಭವಿಸಿತು, ಮಂಜೂರಾತಿದಾರರು ಯಾವ ಪರಿಸ್ಥಿತಿಯಲ್ಲಿ ವಾಸಿಸುತ್ತಿದ್ದರು ಮತ್ತು ಆ ಪರಿಸ್ಥಿತಿಗಳು ಕಾಯಿದೆಯು ಪರಿಹರಿಸಲು ಉದ್ದೇಶಿಸಿದ್ದ ಜಾತಿ ಮತ್ತು ಆರ್ಥಿಕ ದಬ್ಬಾಳಿಕೆಯ ಉತ್ಪನ್ನವಾಗಿದೆಯೇ ಎಂಬುದನ್ನು ಪರಿಶೀಲಿಸದೆ ಅರ್ಜಿಗಳನ್ನು ತಳ್ಳಿಹಾಕಲಾಗಿದೆ.

ಈ ಸಾಮಾಜಿಕ ಪರಿಸ್ಥಿತಿಗಳ ಬಗ್ಗೆ ವಿಚಾರಣೆ ನಡೆಸದೆ ವಿಳಂಬದ ಪ್ರಶ್ನೆಯನ್ನು ನಿರ್ಧರಿಸುವುದು, ಯಾವ ಸಾಮಾಜಿಕ ಸ್ಥಿತಿಗತಿ ಪರಿಹರಿಸಲು ಕಾಯ್ದೆ ತರಲಾಯಿತೋ , ಅದೇ ಸ್ಥಿತಿಗತಿಯನ್ನು (ಜಾತಿ ವ್ಯವಸ್ಥೆ ) ಸಂಪೂರ್ಣವಾಗಿ ನಿರ್ಲಕ್ಷಿಸಿ, ಪಿಟಿಸಿಎಲ್ ದಾವೆಯನ್ನು ಸಾಮಾನ್ಯ ಆಸ್ತಿ ವಿವಾದದಲ್ಲಿ ಸಮಾನರ ನಡುವೆ ಉದ್ಭವಿಸಿದ ವಿವಾದದಂತೆ ನೋಡುವುದು.

ನ್ಯಾಯಾಲಯಗಳು "ಸಮಂಜಸವಾದ ಸಮಯ"ವನ್ನು (reasonable time) ಯಾವುದೇ ಸುಸ್ಥಾಪಿತ ಅಥವಾ ಸ್ಥಿರವಾದ ಮಾನದಂಡವಿಲ್ಲದೆ ವ್ಯಾಖ್ಯಾನಿಸಿವೆ ಮತ್ತು ಮಂಜೂರಾತಿದಾರರ ಸಾಮಾಜಿಕ ವಾಸ್ತವಗಳನ್ನು ( ಜಾತಿಯ ಐತಿಹಾಸಿಕ ಮತ್ತು ಪ್ರಸ್ತುತದ ದಬ್ಬಾಳಿಕೆ, ಜೀತ ಪದ್ಧತಿ, ಊಳಿಗಾಮಾನ್ಯ ವ್ಯವಸ್ಥೆಯ ಮೇಲಲಿನ ಅವಲಂಬನೆ, ಅನಕ್ಷರತೆ, ಹಿಂಸಾಚಾರ ಮತ್ತು ಪ್ರತಿಕಾರದ ಭಯ ) ಉಲ್ಲೇಖಿಸದೆ ಅದನ್ನು ಅನ್ವಯಿಸಿವೆ. ಹಾಗೆ ಮಾಡುವ ಮೂಲಕ, ಸಾಮಾನ್ಯ ಸಿವಿಲ್ ದಾವೆಗಳಿಗಾಗಿ ಅಭಿವೃದ್ಧಿಪಡಿಸಲಾದ ಸಿದ್ಧಾಂತವನ್ನು ಈ ಕಾಯಿದೆಯು ಯಾರನ್ನು ರಕ್ಷಿಸಲು ವಿನ್ಯಾಸಗೊಳಿಸಲಾಗಿದೆಯೋ ಅಂತಹದ್ದೇ ವ್ಯಕ್ತಿಗಳ ಹಕ್ಕುಗಳನ್ನು ವ್ಯವಸ್ಥಿತವಾಗಿ ಸೋಲಿಸುವ ಸಾಧನವಾಗಿ ಬದಲಾಯಿಸಿವೆ.

ಸಂವಿಧಾನದ 46 ನೇ ವಿಧಿಯ ಅಡಿಯಲ್ಲಿರುವ ಸಾಂವಿಧಾನಿಕ ಆದೇಶವು, ಎಸ್‌ಸಿ/ಎಸ್‌ಟಿ ಸಮುದಾಯಗಳನ್ನು ಸಾಮಾಜಿಕ ಅನ್ಯಾಯ ಮತ್ತು ಎಲ್ಲಾ ರೀತಿಯ ಶೋಷಣೆಯಿಂದ ರಕ್ಷಿಸಲು ಸರ್ಕಾರಕ್ಕೆ ಒತ್ತಾಯಿಸುತ್ತದೆ. ಈ ಆದೇಶ ಕೇವಲ ಶಾಸಕಾಂಗಕ್ಕೆ ನೀಡಿದ ನಿರ್ದೇಶನವಲ್ಲ. ಇದು ನ್ಯಾಯಾಲಯಗಳು ಪ್ರಭುತ್ವದ ಅಂಗಗಳಾಗಿ ತಮ್ಮ ವ್ಯಾಪ್ತಿಯನ್ನು ಚಲಾಯಿಸುವಾಗ ಜಾರಿಗೆ ತರಬೇಕಾದ ಆದೇಶವಾಗಿದೆ. ವಿಳಂಬಕ್ಕೆ ಕಾರಣವಾದ ಜಾತಿಯ ಸಾಮಾಜಿಕ ಹಿನ್ನೆಲೆಯನ್ನು ವಿಚಾರಣೆ ಮಾಡದೆ, ಕೇವಲ ವಿಳಂಬದ ಆಧಾರದ ಮೇಲೆ ಪಿಟಿಸಿಎಲ್ ದಾವೆಯನ್ನು ವಜಾಗೊಳಿಸುವ ನ್ಯಾಯಾಲಯವು, ಸಂವಿಧಾನವು ತಡೆಯಲು ಬಯಸುವ ಶೋಷಣೆಯನ್ನೇ ಜಾರಿಗೆ ತಂದಂತಾಗುತ್ತದೆ.

**ಅಕ್ರಮವಾಗಿ ಸಂಪತ್ತು ಗಳಿಸಬಹುದು ಎಂಬ ಪೂರ್ವಗ್ರಹ**

ಪಿಟಿಸಿಎಲ್ ಕಾಯಿದೆಯ ವಿರುದ್ಧವಾಗಿ ಕೆಲಸ ಮಾಡುತ್ತಿರುವ ಮನಸ್ಥಿತಿಯಲ್ಲಿನ ಒಂದು ಪ್ರಮುಖ ದೋಷವೆಂದರೆ, ಪರಿಶಿಷ್ಟ ಜಾತಿಯ ಮಂಜೂರಾತಿದಾರರು ಪ್ರಮುಖವಾಗಿ ಆರ್ಥಿಕ ಲಾಭವನ್ನು ಪಡೆಯಲು ಪಿಟಿಸಿಎಲ್ ಕಾಯಿದೆಯನ್ನು ಬಳಸಿಕೊಳ್ಳುತ್ತಿದ್ದಾರೆ ಎಂಬ ಆಧಾರರಹಿತ ಊಹೆಯಾಗಿದೆ. ಈ ಊಹೆಯು ಶಾಸನದ ಐತಿಹಾಸಿಕ ಹಿನ್ನೆಲೆ ಮತ್ತು ಅದರ ಆಧಾರವಾಗಿರುವ ಸಾಂವಿಧಾನಿಕ ತತ್ವಗಳು ಎರಡರಿಂದಲೂ ದೂರ ಸರಿದಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸದಸ್ಯರಿಗೆ ಮಂಜೂರು ಮಾಡಲಾದ ಜಮೀನುಗಳನ್ನು ದಬ್ಬಾಳಿಕೆ, ಅಸಮಾನ ಚೌಕಾಶಿ ಶಕ್ತಿ (bargaining power), ಸಾಲದ ಸುಳಿ, ಸಾಮಾಜಿಕ ಅವಲಂಬನೆ ಮತ್ತು ವ್ಯವಸ್ಥಿತ ಜಾತಿ ದಬ್ಬಾಳಿಕೆಯ ಮೂಲಕ ನಿಯಮಿತವಾಗಿ ಪರಭಾರೆ (alienated/ ವರ್ಗಾವಣೆ) ಮಾಡಲಾಗುತ್ತಿದ್ದ ಕಾರಣಕ್ಕಾಗಿಯೇ ಪಿಟಿಸಿಎಲ್ ಕಾಯಿದೆಯನ್ನು ಜಾರಿಗೆ ತರಲಾಯಿತು. ಆದ್ದರಿಂದ ಜಮೀನು ಮರುಸ್ಥಾಪನೆಯ ಉದ್ದೇಶವು ಪರಿಹಾರಾತ್ಮಕ ಮತ್ತು ಮರುಸ್ಥಾಪನಾತ್ಮಕವಾಗಿದೆ: ಕಾನೂನು ಮೂಲಭೂತವಾಗಿ ಮಂಜೂರಾತಿದಾರರು ಏನನ್ನು

ಹೊಂದಿರಬೇಕೆಂದು ಬಯಸಿತ್ತೋ, ಅದನ್ನೇ ಅವರಿಗೆ ಮರಳಿ ನೀಡಲು ಇದು ಶ್ರಮಿಸುತ್ತದೆ. ಶಾಸನಬದ್ಧ ಹಕ್ಕಿನ ಪ್ರತಿಪಾದನೆಯನ್ನು "ಶ್ರೀಮಂತಿಕೆ" ಗಳಿಸುವ ಪ್ರಯತ್ನ ಎಂದು ಬಿಂಬಿಸುವುದು, ಈ ಶಾಸನವು ಯಾವ ಐತಿಹಾಸಿಕ ಅನ್ಯಾಯವನ್ನು ಪರಿಹರಿಸಲು ವಿನ್ಯಾಸಗೊಳಿಸಲಾಗಿದೆಯೋ ಅದನ್ನು ಮರೆಮಾಚುವ ಅಪಾಯವನ್ನು ತಂದೊಡ್ಡುತ್ತದೆ.

ಈ ಪ್ರಮೇಯವು ವಿಶೇಷವಾಗಿ ಅಸಮಂಜಸವಾಗಿದೆ ಏಕೆಂದರೆ ಇದು ಎಸ್‌ಸಿ/ಎಸ್‌ಟಿ ಮಂಜೂರಾತಿದಾರರಿಗೆ ಅನ್ವಯಿಸುವ ಇಂತಹದೊಂದು ಮಾನದಂಡವನ್ನು ಸಾಮಾನ್ಯವಾಗಿ ಯಾವುದೇ ಆಸ್ತಿಯ ಮಾಲೀಕರಿಗೆ ಅನ್ವಯಿಸುವುದಿಲ್ಲ. ಒಬ್ಬ ವ್ಯಕ್ತಿಯಿಂದ ತಪ್ಪಾಗಿ ಕಸಿದುಕೊಳ್ಳಲಾದ ಆಸ್ತಿಯ ಸ್ವಾಧೀನವನ್ನು ಅವನು ಮರಳಿ ಪಡೆಯುವಾಗ, ಕಾನೂನು ಆ ಆಸ್ತಿಯ ಮೌಲ್ಯವು ಹೆಚ್ಚಾಗಿದೆಯೇ ಅಥವಾ ಅದರ ಮರುಸ್ಥಾಪನೆಯಿಂದ ಮಾಲೀಕರಿಗೆ ಆರ್ಥಿಕವಾಗಿ ಲಾಭವಾಗುತ್ತದೆಯೇ ಎಂದು ಕೇಳುವುದಿಲ್ಲ. ಅಲ್ಲಿನ ಗಮನವು ಕೇವಲ ಹಕ್ಕು (title) ಮತ್ತು ಸ್ವಾಧೀನದ ಕಾನೂನುಬದ್ಧತೆಯ ಮೇಲಿರುತ್ತದೆ. ಆದರೂ, ಪಿಟಿಸಿಎಲ್ ಮೊಕದ್ದಮೆಗಳಲ್ಲಿ, ನ್ಯಾಯಾಲಯಗಳು ಕೆಲವೊಮ್ಮೆ ವರ್ಗಾವಣೆಯ ಕಾನೂನು ಬಾಹಿರತೆಯಿಂದ ಗಮನವನ್ನು ಬೇರೆಡೆಗೆ ತಿರುಗಿಸಿ, ಜಮೀನು ಮರುಸ್ಥಾಪನೆಯಾದಾಗ ಮಂಜೂರಾತಿದಾರರಿಗೆ ಸಿಗಬಹುದಾದ ಲಾಭದ ಕಡೆಗೆ ಗಮನ ಹರಿಸುತ್ತವೆ. ಇಂತಹ ದೃಷ್ಟಿಕೋನವು ಶಾಸನಬದ್ಧ ನಿಷೇಧಕ್ಕೆ ವಿರುದ್ಧವಾಗಿ ಸ್ವಾಧೀನವನ್ನು ಪಡೆದ ಅಥವಾ ಉಳಿಸಿಕೊಂಡಿರುವ ವರ್ಗಾವಣೆದಾರನ (transferee) ಹಿತಾಸಕ್ತಿಗಳಿಗೆ ಹೆಚ್ಚಿನ ಮನ್ನಣೆ ನೀಡಿದಂತಾಗುತ್ತದೆ; ಮತ್ತು ಯಾರನ್ನು ರಕ್ಷಿಸಲು ಈ ಶಾಸನವನ್ನು ಜಾರಿಗೆ ತರಲಾಗಿದೆಯೋ ಆ ವರ್ಗದ ಹಕ್ಕುಗಳನ್ನು ಕಡೆಗಣಿಸಿದಂತಾಗುತ್ತದೆ.

ಈ ತಾರ್ಕಿಕ ದೋಷವು ಕರ್ನಾಟಕ ಹೈಕೋರ್ಟ್‌ನ ಇತ್ತೀಚಿನ 09.04.2025 ರ ತೀರ್ಪಿನಲ್ಲಿ (ಶ್ರೀಮತಿ ರುದ್ರಮ್ಮ ವಿರುದ್ಧ ಕರ್ನಾಟಕ ರಾಜ್ಯ - W.P. No. 29559/2018) ಅತ್ಯಂತ ಸ್ಪಷ್ಟವಾಗಿ ಕಂಡುಬರುತ್ತದೆ, ಅಲ್ಲಿ ನ್ಯಾಯಾಲಯವು ಈ ಕೆಳಗಿನಂತೆ ಅವಲೋಕಿಸಿದೆ:

> "ಪಿಟಿಸಿಎಲ್ ಕಾಯಿದೆಯ ನಿಬಂಧನೆಗಳು ಮಂಜೂರಾತಿದಾರರಿಗೆ ತಮ್ಮ ಪರವಾಗಿ ಮರುಸ್ಥಾಪಿಸಲಾದ ಜಮೀನುಗಳನ್ನು ಮಾರಾಟ ಮಾಡಲು ಮತ್ತು ಮತ್ತೊಮ್ಮೆ ಮರುಸ್ಥಾಪನೆಯನ್ನು ಕೋರಲು ಪರವಾನಗಿ ನೀಡುವ ಉದ್ದೇಶವನ್ನು ಹೊಂದಿಲ್ಲ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಪಿಟಿಸಿಎಲ್ ಕಾಯಿದೆಯ ಪ್ರಯೋಜನಕಾರಿ ನಿಬಂಧನೆಗಳ ಬಗ್ಗೆ ತಿಳಿದಿರುವ ಮಂಜೂರಾತಿದಾರನು, ಮರುಸ್ಥಾಪಿಸಲಾದ ಜಮೀನನ್ನು ವ್ಯವಹರಿಸುವಾಗ ತನ್ನ ಪ್ರಯೋಜನವನ್ನು ಮೊಟಕುಗೊಳಿಸುವ ಅದೇ ಕಾಯಿದೆಯ ನಿರ್ಬಂಧಿತ ನಿಯಮಗಳ ಬಗ್ಗೆಯೂ ತಿಳಿದಿರುತ್ತಾನೆ ಎಂದು ಊಹಿಸಲಾಗುತ್ತದೆ. ಮಂಜೂರಾತಿದಾರನು ಕಾನೂನು ಬಾಹಿರತೆಯನ್ನು ಮುಂದುವರಿಸಲು ಒಂದು ಪರಿಹಾರಾತ್ಮಕ ಶಾಸನವನ್ನು ದುರುಪಯೋಗಪಡಿಸಿಕೊಳ್ಳಲು ಸಾಧ್ಯವಿಲ್ಲ ಮತ್ತು ಅದೇ ಸಮಯದಲ್ಲಿ, ತನ್ನ ಕಾನೂನುಬಾಹಿರ ಕೃತ್ಯವನ್ನು ಪದೇ ಪದೇ ಕಾನೂನುಬದ್ಧಗೊಳಿಸುವ ಪ್ರಕ್ರಿಯೆಯನ್ನು

ಪಡೆಯಲು ಸಾಧ್ಯವಿಲ್ಲ. ಈ ಕಾಯಿದೆಯನ್ನು ದುರ್ಬಲರು ಮತ್ತು ತುಳಿತಕ್ಕೊಳಗಾದವರಿಗೆ ಸಹಾಯ ಮಾಡಲು ವಿನ್ಯಾಸಗೊಳಿಸಲಾಗಿದೆಯೇ ಹೊರತು, ಅವರು ಅನ್ಯಾಯವಾಗಿ ಶ್ರೀಮಂತರಾಗಲು ತಮ್ಮ ದುರ್ಬಲತೆಯನ್ನೇ ದುರುಪಯೋಗಪಡಿಸಿಕೊಳ್ಳುವುದಕ್ಕಲ್ಲ."

ಆ ನಿರ್ದಿಷ್ಟ ಪ್ರಕರಣದ ವಾಸ್ತವದ ಹಿನ್ನೆಲೆಯಲ್ಲಿ ಮಂಜೂರಾತಿದಾರರಿಂದ ಪದೇ ಪದೇ ಜಮೀನು ವರ್ಗಾವಣೆಯಾಗುವ ಬಗೆಗಿನ ಕಳಕಳಿಯು ಸಮಂಜಸವಾಗಿದ್ದರೂ, ಜಮೀನು ಮರುಸ್ಥಾಪನೆಯು "ಅನ್ಯಾಯದ ಶ್ರೀಮಂತಿಕೆಗೆ" (unjust enrichment) ಕಾರಣವಾಗುತ್ತದೆ ಎಂಬ ವಿಶಾಲವಾದ ಪ್ರತಿಪಾದನೆಯು ಟೀಕೆಗೆ ಅರ್ಹವಾಗಿದೆ. ಪಿಟಿಸಿಎಲ್ ಕಾಯಿದೆಯಡಿ ಜಮೀನು ಮರುಸ್ಥಾಪನೆಯು ಹೊಸ ಪ್ರಯೋಜನವನ್ನು ನೀಡುವುದಿಲ್ಲ; ಇದು ಮಂಜೂರಾತಿಯು ಗುರುತಿಸುವ ಮತ್ತು ಶಾಸನದಿಂದ ರಕ್ಷಿಸಲ್ಪಟ್ಟ ಪೂರ್ವ-ಅಸ್ತಿತ್ವದಲ್ಲಿದ್ದ ಹಕ್ಕನ್ನು ಮರುಸ್ಥಾಪಿಸುತ್ತದೆ. ಕಾಲಾನಂತರದಲ್ಲಿ ಜಮೀನಿನ ಮೌಲ್ಯದಲ್ಲಿ ಉಂಟಾಗುವ ಯಾವುದೇ ಹೆಚ್ಚಳವು ಮಾಲೀಕತ್ವದ ಸ್ವಾಭಾವಿಕ ಪರಿಣಾಮವಾಗಿದೆ ಮತ್ತು ಯಾವುದೇ ಬಲವಾದ ಕಾರಣವಿಲ್ಲದೆ, ಇದು ಶಾಸನಬದ್ಧ ಪರಿಹಾರವನ್ನು ಶ್ರೀಮಂತಿಕೆಯ ಸಾಧನವಾಗಿ ಬದಲಾಯಿಸಲು ಸಾಧ್ಯವಿಲ್ಲ.

ವಾಸ್ತವವಾಗಿ, ಹಿಂದಿನ ನ್ಯಾಯಾಂಗದ ದೃಷ್ಟಿಕೋನಗಳು ಮಂಜೂರಾತಿದಾರರ ಉದ್ದೇಶಗಳನ್ನು ಶಂಕಿಸುವ ಬದಲು ಪಿಟಿಸಿಎಲ್ ಕಾಯಿದೆಯ ರಕ್ಷಣಾತ್ಮಕ ಸ್ವರೂಪಕ್ಕೆ ಒತ್ತು ನೀಡಿವೆ. ಸರ್ವೋಚ್ಚ ನ್ಯಾಯಾಲಯವು ಮಂಚೇಗೌಡ (ಮೇಲೆ ಉಲ್ಲೇಖಿಸಿದ) ಪ್ರಕರಣದಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸದಸ್ಯರಿಗೆ ಮಂಜೂರು ಮಾಡಲಾದ ಜಮೀನುಗಳನ್ನು ರಕ್ಷಿಸುವ ಮತ್ತು ಪರಭಾರೆಯ ಮೂಲಕ ಕಲ್ಯಾಣ ಕ್ರಮಗಳು ವಿಫಲವಾಗದಂತೆ ತಡೆಯುವ ಉದ್ದೇಶವನ್ನು ಗುರುತಿಸಿ ಈ ಶಾಸನದ ಸಿಂಧುತ್ವವನ್ನು ಎತ್ತಿಹಿಡಿದಿದೆ. ತದನಂತರದ ತೀರ್ಪುಗಳು ಈ ಕಾಯಿದೆಯನ್ನು ಒಂದು ಪ್ರಯೋಜನಕಾರಿ ಮತ್ತು ರಕ್ಷಣಾತ್ಮಕ ಶಾಸನ ಎಂದು ಪದೇ ಪದೇ ಬಣ್ಣಿಸಿವೆ. ಆದ್ದರಿಂದ, ಸಾಂವಿಧಾನಿಕ ದೃಷ್ಟಿಕೋನವು ಐತಿಹಾಸಿಕವಾಗಿ ಕಸೆದುಕೊಳ್ಳಲಾದ ಹಕ್ಕುಗಳನ್ನು ಸರಿಪಡಿಸುವುದರ ಮತ್ತು ಶಾಸನಬದ್ಧ ರಕ್ಷಣೆಗಳನ್ನು ಜಾರಿಗೆ ತರುವುದರ ಮೇಲೆ ಕೇಂದ್ರೀಕೃತವಾಗಿರಬೇಕೇ ಹೊರತು, ಐತಿಹಾಸಿಕವಾಗಿ ತುಳಿತಕ್ಕೊಳಗಾದ ಸಮುದಾಯಗಳ ಸದಸ್ಯರು ವೈಯಕ್ತಿಕ ಲಾಭಕ್ಕಾಗಿ ಕಾನೂನನ್ನು ಬಳಸಿಕೊಳ್ಳುತ್ತಿದ್ದಾರೆ ಎಂಬ ಆಧಾರರಹಿತ ಊಹೆಗಳ ಮೇಲಲ್ಲ. ಇಂತಹ ಊಹೆಗಳಿಂದ ಪಿಟಿಸಿಎಲ್ ಕಾಯ್ದೆಯು ದೂರ ಮಾಡಲು ಉದ್ದೇಶಿಸಿದ್ದ ದಲಿತರ ದಾವೆಗಳ ಮೇಲಿನ ಅಪನಂಬಿಕೆಯನ್ನು ಮತ್ತೆ ಹುಟ್ಟುಹಾಕುವ ಅಪಾಯವಿದೆ.

**ಪಿಟಿಸಿಎಲ್(P T C L) ಕಾಯಿದೆಯನ್ನು ಉಲ್ಲಂಘಿಸಿ ಮಂಜೂರಾದ ಜಮೀನುಗಳನ್ನು ಖರೀದಿಸಿದವರಿಗೆ ಅಂತಹ ಜಮೀನುಗಳನ್ನು ತಮ್ಮ ಬಳಿ ಇಟ್ಟುಕೊಳ್ಳಲು ಕಾನೂನಿನಡಿಯಲ್ಲಿ ಯಾವುದೇ ಹಕ್ಕಿಲ್ಲ ಎಂಬ ಸತ್ಯಾಂಶವನ್ನು ನಿರ್ಲಕ್ಷಿಸುವುದು:**

**ಮಂಚೇಗೌಡ (ಮೇಲೆ ಉಲ್ಲೇಖಿಸಿದ)** ಪ್ರಕರಣದಲ್ಲಿ, ಸರ್ವೋಚ್ಚ

ನ್ಯಾಯಾಲಯವು ಪಿಟಿಸಿಎಲ್ ಕಾಯಿದೆಯ ನಿಬಂಧನೆಗಳನ್ನು ವ್ಯಾಖ್ಯಾನಿಸುವಾಗ ಮಂಜೂರಾದ ಜಮೀನುಗಳ ಖರೀದಿದಾರರ ಕಾನೂನು ಸ್ಥಿತಿಯನ್ನು ಅತ್ಯಂತ ಸ್ಪಷ್ಟವಾದ ಪದಗಳಲ್ಲಿ ಒತ್ತಿಹೇಳಿದೆ. ಪ್ಯಾರಾ 15 ರಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಡಲಾಗಿದೆ:

> "ವರ್ಗಾವಣೆಯ ಮೇಲಿನ ನಿಷೇಧಕ್ಕೆ ಸಂಬಂಧಿಸಿದ ಶರತ್ತನ್ನು ಉಲ್ಲಂಘಿಸಿ ಮೂಲ ಮಂಜೂರಾತಿದಾರನಿಂದ ಮಂಜೂರಾದ ಜಮೀನನ್ನು ವರ್ಗಾವಣೆಯ ಮೂಲಕ ಪಡೆಯುವ ಯಾವುದೇ ವ್ಯಕ್ತಿಯು, ಅಂತಹ ಜಮೀನಿನ ವರ್ಗಾವಣೆಯ ಮೇಲಿನ ನಿಷೇಧದ ಬಗ್ಗೆ ತಿಳಿದಿರುತ್ತಾನೆ ಎಂದೇ ಕಡ್ಡಾಯವಾಗಿ ಊಹಿಸಬೇಕಾಗುತ್ತದೆ; ಮತ್ತು ಅವರನ್ನು ಪ್ರತಿಫಲ ನೀಡಿ ಖರೀದಿಸಿದ ಸದುದ್ದೇಶದ ಖರೀದಿದಾರ (bona fide purchaser) ಎಂದು ಪರಿಗಣಿಸಲು ಸಾಧ್ಯವಿಲ್ಲ; ಹಾಗೂ ಅಂತಹ ಪ್ರತಿಯೊಬ್ಬ ವರ್ಗಾವಣೆದಾರನು ತನ್ನ ಅರಿವಿನಲ್ಲೇ ಆ ಮಂಜೂರಾದ ಜಮೀನಿನ ಮೇಲೆ ಕೇವಲ ರದ್ದಾಗಬಹುದಾದ ಹಕ್ಕನ್ನು (avoidable title) ಮಾತ್ರ ಪಡೆದಿರುತ್ತಾನೆ. ಅಂತಹ ವರ್ಗಾವಣೆಯ ಮೂಲಕ ಪಡೆದ ಜಮೀನಿನ ಮೇಲಿನ ಹಕ್ಕು ರದ್ದಾಗುವಂತದ್ದಾಗಿದ್ದು, ಈ ಕುರಿತು ಕೈಗೊಳ್ಳುವ ಸೂಕ್ತ ಕಾನೂನು ಕ್ರಮದ ಮೂಲಕ ಅದನ್ನು ರದ್ದುಪಡಿಸಬಹುದು. ಇಂತಹ ಸಂದರ್ಭಗಳಲ್ಲಿ ಶಾಸಕಾಂಗವು ಸಮಾಜದ ಈ ದುರ್ಬಲ ವರ್ಗಗಳ ಹಿತಾಸಕ್ತಿಗಾಗಿ ಮಧ್ಯಪ್ರವೇಶಿಸಲು ಬಯಸಿ, ಕಾನೂನು ಪ್ರಕ್ರಿಯೆಯ ಮೂಲಕ ಮರುಸ್ವಾಧೀನ ಪಡಿಸಿಕೊಳ್ಳಬಹುದಾಗಿದ್ದ ಈ ಮಂಜೂರಾದ ಜಮೀನುಗಳನ್ನು ಮರಳಿ ಪಡೆಯಲು ಹೆಚ್ಚು ವೇಗವಾದ ಮತ್ತು ಅಗ್ಗದ ವಿಧಾನವನ್ನು ಜಾರಿಗೆ ತರಲು ನಿರ್ಧರಿಸಿದರೆ, ಅದರಿಂದ ವರ್ಗಾವಣೆದಾರರ ಯಾವುದೇ ಪಟ್ಟಭದ್ರ ಹಕ್ಕುಗಳಿಗೆ (vested rights) ಧಕ್ಕೆಯಾಗಿದೆ ಎಂದು ಹೇಳಲು ಸಾಧ್ಯವಿಲ್ಲ. ಮಂಜೂರಾತಿಯ ಷರತ್ತುಗಳಿಗೆ ಅಥವಾ ಅಂತಹ ಮಂಜೂರಾತಿಗೆ ಅನ್ವಯಿಸುವ ಯಾವುದೇ ಕಾನೂನು, ನಿಯಮ ಅಥವಾ ನಿಯಂತ್ರಣಕ್ಕೆ ವಿರುದ್ಧವಾಗಿ ತಮ್ಮ ಪರವಾಗಿ ಮಾಡಲಾದ ವರ್ಗಾವಣೆಗಳು ಕಾನೂನಿನ ಪ್ರಕಾರ ರದ್ದಾಗುವ ಸಾಧ್ಯತೆಯಿದೆ ಎಂಬ ಕಾನೂನುಸ್ಥಿತಿಯನ್ನು ಸಂಪೂರ್ಣವಾಗಿ ತಿಳಿದಿದ್ದ ಮಂಜೂರಾತಿ ಭೂಮಿಯ ವರ್ಗಾವಣೆದಾರರು, ಅಂತಹ ಭೂಮಿಯ ಮೇಲಿನ ತಮಗೆ ಲಭಿಸಿದ ರದ್ದಾಗಬಹುದಾದ ಹಕ್ಕು ವಾಸ್ತವವಾಗಿ ರದ್ದಾಗುತ್ತಿದೆ ಮತ್ತು ಕಾನೂನು ಪ್ರಕ್ರಿಯೆಯ ಮೂಲಕ ತಮ್ಮನ್ನು ವಾಸ್ತವವಾಗಿ ಭೂಮಿಯಿಂದ ಹೊರಹಾಕಲಾಗುತ್ತಿದೆ ಎಂಬ ಬಗ್ಗೆ ಕಾನೂನಿನಲ್ಲಾಗಲಿ ನ್ಯಾಯಸಮ್ಮತತೆಯ ದೃಷ್ಟಿಯಿಂದಾಗಲಿ ನಿಜವಾದ ಅಥವಾ ಸಮರ್ಥನೀಯ ಅಹವಾಲು ಹೊಂದಲು ಸಾಧ್ಯವಿಲ್ಲ..."

ಹೀಗೆ, ಸಾರಾಂಶ ರೂಪದಲ್ಲಿ ಹೇಳುವುದಾದರೆ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸಮುದಾಯಗಳಿಗೆ ಸೇರಿದ ವ್ಯಕ್ತಿಗಳಿಂದ ಪಿಟಿಸಿಎಲ್ ಕಾಯಿದೆಯನ್ನು ಉಲ್ಲಂಘಿಸಿ ಮಂಜೂರಾದ ಜಮೀನನ್ನು ಖರೀದಿಸಿದ ವ್ಯಕ್ತಿಯು:

- ಆ ನಿಷೇಧದ ಬಗ್ಗೆ ತಿಳಿದಿರುತ್ತಾನೆ ಎಂದೇ ಊಹಿಸಲಾಗುತ್ತದೆ ಮತ್ತು ಆ

ಜಮೀನುಗಳನ್ನು ಅನುಚಿತ ಹಾಗೂ ಕಾನೂನುಬಾಹಿರವಾಗಿ ಪಡೆದಿರುತ್ತಾನೆ;

- ಖರೀದಿಸಿದ ಜಮೀನಿನ ಮೇಲೆ ಯಾವುದೇ ಕಾನೂನುಬದ್ಧವಾಗಿ ಪ್ರಾಪ್ತವಾಗಿರುವ ಮತ್ತು ಸ್ಥಿರಗೊಂಡಿರುವ ಹಕ್ಕುಗಳು (vested right) ಹೊಂದಿರುವುದಿಲ್ಲ;
- ಆ ವ್ಯವಹಾರಗಳು ಆರಂಭದಿಂದಲೇ ಪರಿಣಾಮಶೂನ್ಯವಾಗಿರುವುದರಿಂದ (void ab initio), ಯಾವುದೇ ಕಾನೂನುಬದ್ಧ ಹಕ್ಕನ್ನು (title) ಪಡೆಯುವುದಿಲ್ಲ;
- ಪಿಟಿಸಿಎಲ್ ಕಾಯಿದೆ ಜಾರಿಗೆ ಬಂದ ನಂತರ ಮಂಜೂರಾದ ಜಮೀನಿನಲ್ಲಿ ಯಾವುದೇ ಹಕ್ಕು ಅಥವಾ ಆಸ್ತಿಯನ್ನು ಹೊಂದಿರುವುದಿಲ್ಲ, ಏಕೆಂದರೆ ಮಂಜೂರಾದ ಜಮೀನಿನ ಮೇಲಿನ ರದ್ದಾಗಬಹುದಾದ ಹಕ್ಕು ಅಥವಾ ಮಾಲೀಕತ್ವವು ಸಂಪೂರ್ಣವಾಗಿ ಶೂನ್ಯವಾಗುತ್ತದೆ;
- ಸಾಕಷ್ಟು ಸುದೀರ್ಘ ಅವಧಿಯವರೆಗೆ ಆ ಜಮೀನುಗಳನ್ನು ಮತ್ತು ಅದರಿಂದ ಬಂದ ಪ್ರಯೋಜನಗಳನ್ನು ಅನುಭವಿಸಿರುತ್ತಾನೆ;

ಮತ್ತು ಈ ಕಾರಣದಿಂದಾಗಿ, ತಮ್ಮ ರದ್ದಾಗಬಹುದಾದ ಹಕ್ಕನ್ನು ಕಾನೂನು ರದ್ದುಗೊಳಿಸಿದೆ ಎಂಬ ಬಗ್ಗೆ ಕಾನೂನಿನಲ್ಲಾಗಲಿ ಅಥವಾ ಸಮತೆಯ ಮೌಲ್ಯದಲ್ಲಾಗಲಿ ಯಾವುದೇ ಕುಂದುಕೊರತೆಯಿರಲು ಸಾಧ್ಯವಿಲ್ಲ. ಪಿಟಿಸಿಎಲ್ ಕಾಯಿದೆಯ ಈ ಮೂಲಭೂತ ಆದೇಶವನ್ನು ನ್ಯಾಯಾಲಯಗಳು ಸಂಪೂರ್ಣವಾಗಿ ಬದಿಗೊತ್ತಿವೆ.

ಹೀಗಾಗಿ ಕಾನೂನು ಸ್ಥಿತಿಯು ಸುಸ್ಥಾಪಿತವಾಗಿದೆ. ಮಂಜೂರಾದ ಜಮೀನಿನ ಖರೀದಿದಾರನಿಗೆ ಅದರಲ್ಲಿ ಯಾವುದೇ ಹಕ್ಕು, ಸ್ವಾಮ್ಯ ಅಥವಾ ಹಿತಾಸಕ್ತಿ ಇರುವುದಿಲ್ಲ, ಮತ್ತು ತಮ್ಮ ರದ್ದಾಗಬಹುದಾದ ಹಕ್ಕು ರದ್ದಾಗಿದೆ ಎಂಬ ಬಗ್ಗೆ ಕಾನೂನಿನಲ್ಲಾಗಲಿ ಅಥವಾ ಸಮದೃಷ್ಟಿಯಲ್ಲಾಗಲಿ ಯಾವುದೇ ಕುಂದುಕೊರತೆ ಇರುವುದಿಲ್ಲ. ಅಂತಹ ಖರೀದಿದಾರನ ಪರವಾಗಿ ಸಮದೃಷ್ಟಿಯ (equitable) ಪರಿಗಣನೆಗಳನ್ನು ತರುವುದು ಮಂಚೇಗೌಡ ಪ್ರಕರಣದಲ್ಲಿ ಖರೀದಿದಾರನ ಸ್ಥಿತಿಯ ಕುರಿತು ಸರ್ವೋಚ್ಚ ನ್ಯಾಯಾಲಯವೇ ನೀಡಿದ ಸ್ಪಷ್ಟ ವ್ಯಾಖ್ಯಾನಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿದೆ. ಪ್ರಶ್ನೆ ಇರುವುದು ಈ ನಡಾವಳಿಗಳಲ್ಲಿ ಸಮತೆಯನ್ನು ಅನ್ವಯಿಸಬೇಕೇ ಎಂದಲ್ಲ. ಪ್ರಶ್ನೆ ಇರುವುದು ಸಮತೆಯು ಯಾರನ್ನು ರಕ್ಷಿಸಬೇಕು ಎಂಬುದಾಗಿದೆ.

ಈ ಪ್ರಕರಣಗಳ ಸಾಮಾಜಿಕ ವಾಸ್ತವತೆಯನ್ನು ಗಣನೆಗೆ ತೆಗೆದುಕೊಂಡಾಗ, ಸಮತೆಯು ವಾಸ್ತವವಾಗಿ ಏನನ್ನು ಬಯಸುತ್ತದೆಯೋ ಅದು ನ್ಯಾಯಾಲಯಗಳು ಊಹಿಸಿರುವುದಕ್ಕೆ ತದ್ವಿರುದ್ಧವಾದ ಕನ್ನಡಿಯ ಬಿಂಬದಂತಿದೆ. ಖರೀದಿದಾರನು ಯಾವುದೇ ಹಕ್ಕಿಲ್ಲದೆ ಮತ್ತೊಬ್ಬರ ಜಮೀನನ್ನು ಆಕ್ರಮಿಸಿಕೊಂಡಿದ್ದಾನೆ, ಅದೂ ಕೂಡ ಅತ್ಯಂತ ದುರ್ಬಲನಾದ ಮತ್ತು ಆ ದುರ್ಬಲತೆಯ ಕಾರಣಕ್ಕಾಗಿಯೇ ಯಾರಿಗೆ ಜಮೀನು ಮಂಜೂರು ಮಾಡಲಾಗಿತ್ತೋ ಅಂತಹ ವ್ಯಕ್ತಿಯ ಜಮೀನನ್ನು ಆಕ್ರಮಿಸಿದ್ದಾನೆ. ಹಾಗಿದ್ದಾಗ ಸಮದೃಷ್ಟಿಯು ಕೇಳುವ ಪ್ರಶ್ನೆ, ಖರೀದಿದಾರನು ಎಷ್ಟು ಕಾಲದಿಂದ ಸ್ವಾಧೀನದಲ್ಲಿದ್ದಾನೆ ಎಂಬುದಲ್ಲ, ಬದಲಿಗೆ

ಯಾರ ವೆಚ್ಚದಲ್ಲಿ (ಯಾರಿಗೆ ನಷ್ಟ ಉಂಟುಮಾಡಿ) ಆ ಸ್ವಾಧೀನವನ್ನು ಮುಂದುವರಿಸಿಕೊಂಡು ಬರಲಾಗಿದೆ ಎಂಬುದಾಗಿದೆ. ಐತಿಹಾಸಿಕವಾಗಿ ಜಮೀನು ವಂಚಿತರಾದ ಸಮುದಾಯದ ಸದಸ್ಯರಿಗೆ ಮಂಜೂರು ಮಾಡಲಾದ ಜಮೀನಿನ ಕಾನೂನುಬಾಹಿರ ಆಕ್ರಮಣದ ಮೂಲಕ ಗಳಿಸಿದ ಲಾಭಗಳು, ಜಮೀನನ್ನು ತಪ್ಪಾಗಿ ಆಕ್ರಮಿಸಿಕೊಂಡ ವ್ಯಕ್ತಿಗೆ ಹೋಗುವ ಬದಲು ಆ ಮಂಜೂರಾತಿದಾರನ ಪ್ರಯೋಜನಕ್ಕೆ ದಕ್ಕಬೇಕಾಗಿದೆ. ಆದ್ದರಿಂದ, ಸಮತೆಯ ತತ್ವಗಳನ್ನು ಅನ್ವಯಿಸುವಾಗ, ಕಾಯ್ದೆಯು ಮಂಜೂರಾತಿದಾರರ ಹಿತಕ್ಕಾಗಿ ರೂಪಿಸಿರುವ ಉದ್ದೇಶವನ್ನು ಗುರುತಿಸುವ ರೀತಿಯಲ್ಲಿ ಅವುಗಳನ್ನು ಅನ್ವಯಿಸಬೇಕು; ಖರೀದಿದಾರರ ಹಿತಕ್ಕೆ ಅನುಕೂಲವಾಗುವ ರೀತಿಯಲ್ಲಿ ಅಲ್ಲ.

**ಸಮರ್ಪಕ ನ್ಯಾಯನಿರ್ಣಯವಿಲ್ಲದ ಪ್ರತಿಕೂಲ ಸ್ವಾಧೀನ (Adverse Possession)**

ಪಿಟಿಸಿಎಲ್ (PTCL) ನಡಾವಳಿಗಳಲ್ಲಿ ಪ್ರತಿಕೂಲ ಸ್ವಾಧೀನವನ್ನು (adverse possession - ಕಾನೂನುಬಾಹಿರವಾಗಿ ದೀರ್ಘಕಾಲ ಜಮೀನು ಹೊಂದಿರುವ ಆಧಾರದ ಮೇಲೆ ಮಾಲೀಕತ್ವ ಪಡೆಯುವ ಹಕ್ಕು) ಒಂದು ಪ್ರತಿರಕ್ಷಣೆಯಾಗಿ (defence) ಸ್ವೀಕರಿಸುವುದು ಸಂಪೂರ್ಣವಾಗಿ ಅನುಚಿತವಾಗಿದೆ. ಕಾಯಿದೆಯ ಸೆಕ್ಷನ್ 11 ರ ಪ್ರಕಾರ, ಯಾವುದೇ ಇತರ ಕಾನೂನು, ರೂಢಿ, ಪದ್ಧತಿ, ಒಪ್ಪಂದ ಅಥವಾ ಯಾವುದೇ ನ್ಯಾಯಾಲಯ ಅಥವಾ ನ್ಯಾಯಮಂಡಳಿಯ ತೀರ್ಪು ಅಥವಾ ಆದೇಶದಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಇದ್ದರೂ, ಈ ಕಾಯಿದೆಯ ನಿಬಂಧನೆಗಳೇ ಮೇಲುಗೈ ಸಾಧಿಸುತ್ತವೆ (ಅನ್ವಯಿಸುತ್ತವೆ) ಎಂದು ಸ್ಪಷ್ಟವಾಗಿ ಹೇಳುತ್ತದೆ. ಈ ಮೇಲುಗೈ ಪರಿಣಾಮವು (overriding effect) ಪಿಟಿಸಿಎಲ್ ನಡಾವಳಿಗಳಲ್ಲಿ ಪ್ರತಿಕೂಲ ಸ್ವಾಧೀನದ ತತ್ವವನ್ನು ಒಂದು ಪ್ರತಿರಕ್ಷಣೆಯಾಗಿ ಅನ್ವಯಿಸುವುದನ್ನು ಸಂಪೂರ್ಣವಾಗಿ ತಡೆಯುತ್ತದೆ.

ಇದು ಕೇವಲ ಕಾನೂನು ದೋಷವಲ್ಲ; ಪಿಟಿಸಿಎಲ್ ವಿವಾದಗಳು ಉದ್ಭವಿಸುವ ಜಾತಿ ಆಧಾರಿತ ಸಾಮಾಜಿಕ ಸಂದರ್ಭವನ್ನೂ, ಕಾಯ್ದೆಯ ಹಿತಕಾರಿ ಉದ್ದೇಶವನ್ನ ಗುರುತಿಸುವಲ್ಲಿ ವಿಫಲತೆಯಾಗಿದೆ.

ಪ್ರತಿಕೂಲ ಸ್ವಾಧೀನ ಎಂಬುದು ಕಾಲದ ಉರುಳುವಿಕೆ ಮತ್ತು ಆಸ್ತಿಯನ್ನು ಹೊಂದಿರುವವನ ದೀರ್ಘಕಾಲದ, ಬಹಿರಂಗ ಹಾಗೂ ನಿರಂತರ ಸ್ವಾಧೀನದ ವಾಸ್ತವತೆಯ ಆಧಾರದ ಮೇಲೆ ಮೂಲ ಮಾಲೀಕನ ಹಕ್ಕನ್ನು ರದ್ದುಗೊಳಿಸುವ ಮೂಲಕ ಕಾರ್ಯನಿರ್ವಹಿಸುವ ಒಂದು ಸಿದ್ಧಾಂತವಾಗಿದೆ. ಪಿಟಿಸಿಎಲ್ ಪ್ರಕರಣಗಳಲ್ಲಿ, ಖರೀದಿದಾರನ ದೀರ್ಘಕಾಲದ ಸ್ವಾಧೀನವು ಅದು ಉದ್ಭವಿಸಿದ ಸಾಮಾಜಿಕ ಹಿನ್ನೆಲೆಯ ಉಲ್ಲೇಖವಿಲ್ಲದೆ ತೂಗಬೇಕಾದ ಒಂದು ತಟಸ್ಥ ಸತ್ಯಾಂಶವಲ್ಲ.ಇದು ಜಾತಿ ಆಧಾರಿತ ಸಾಮಾಜಿಕ ಸಂದರ್ಭಗಳಲ್ಲಿ ಮಂಜೂರಾತಿದಾರನನ್ನು ಜಮೀನಿನಿಂದ ಒಕ್ಕಲೆಬ್ಬಿಸಿದ ನೇರ ಪರಿಣಾಮವಾಗಿದೆ. ಖರೀದಿದಾರನ ಸ್ವಾಧೀನದ ಅವಧಿಯು, ವಾಸ್ತವವಾಗಿ ಮಂಜೂರಾತಿದಾರನ ಭೂಹೀನತೆಯ ಅವಧಿಯಾಗಿದೆ. ಈ ಅವಧಿಯನ್ನು ಉಂಟುಮಾಡಿದ ಸಾಮಾಜಿಕ ಹಿನ್ನೆಲೆಯನ್ನು ಗುರುತಿಸದೆ, ಜಮೀನು ಮರುಸ್ಥಾಪನೆ ಪಡೆಯುವ ಮಂಜೂರಾತಿದಾರನ ಹಕ್ಕನ್ನು ರದ್ದುಗೊಳಿಸಲು ಈ

ಅವಧಿಯನ್ನೇ ಒಂದು ಆಧಾರವಾಗಿ ಪರಿಗಣಿಸುವುದು ಮಂಜೂರಾತಿದಾರನ ಸಂಕಟವನ್ನು ಆ ಸಂಕಟಕ್ಕೆ ಕಾರಣವಾದ ವ್ಯಕ್ತಿಗೆ ಕಾನೂನುಬದ್ಧ ಲಾಭವಾಗಿ ಪರಿವರ್ತಿಸಿದಂತಾಗುತ್ತದೆ. ಇದು ಜಾತಿ ಆಧಾರಿತ ದುರ್ಬಲತೆಯ ಶೋಷಣೆಗೆ ಬಹುಮಾನ ನೀಡಿದಂತಾಗುತ್ತದೆ, ಇದನ್ನು ತಡೆಯುವುದಕ್ಕಾಗಿಯೇ ಕಾಯಿದೆಯನ್ನು ವಿನ್ಯಾಸಗೊಳಿಸಲಾಗಿತ್ತು; ಮತ್ತು ಕಾಯಿದೆಯು ಈಗಾಗಲೇ ನಿರ್ಬಂಧಿಸಿರುವ ಸಿದ್ಧಾಂತದ ಹೆಸರಿನಲ್ಲೇ ಈ ಶೋಷಣೆಗೆ ಮನ್ನಣೆ ನೀಡಿದಂತಾಗುತ್ತದೆ.

ಹಾಗೆ ನೋಡಿದರೆ, ಮಂಚೇಗೌಡ ಪ್ರಕರಣದ ಪ್ಯಾರಾ 24 ರ ಪ್ರಕಾರ, ಪ್ರತಿಕೂಲ ಸ್ವಾಧೀನದ ಪ್ರತಿರಕ್ಷಣೆಗೆ ಅನುಮತಿ ನೀಡುವ ಅತ್ಯಂತ ಸಣ್ಣ ಅವಕಾಶವೂ ಸಹ ಕೇವಲ ಅಸಾಧಾರಣ ಸಂದರ್ಭಗಳಲ್ಲಿ ಮತ್ತು ಪ್ರತಿಕೂಲ ಸ್ವಾಧೀನದ ಎಲ್ಲಾ ಅಂಶಗಳ ಕಟ್ಟುನಿಟ್ಟಾದ ಸಾಬೀತುಪಡಿಸುವಿಕೆಯ ಮೇಲೆ ಮಾತ್ರ ಸಾಧ್ಯವಿರುತ್ತದೆ. ಮಂಜೂರಾದ ಜಮೀನಿನ ಕೇವಲ ದೀರ್ಘಕಾಲದ ಸ್ವಾಧೀನವಷ್ಟೇ ಇದಕ್ಕೆ ಸಾಕಾಗುವುದಿಲ್ಲ. ಪ್ರತಿಕೂಲ ಸ್ವಾಧೀನವನ್ನು ಪ್ರತಿಪಾದಿಸುವ ವರ್ಗಾವಣೆದಾರನು ರಾಜ್ಯದ ವಿರುದ್ಧ ಬಹಿರಂಗ, ನಿರಂತರ ಮತ್ತು ಅಡೆತಡೆಗಳಿಲ್ಲದ ಸ್ವಾಧೀನವನ್ನು ಸ್ಥಾಪಿಸಬೇಕು ಮತ್ತು ಅಂತಹ ಸ್ವಾಧೀನವು ಯಾವಾಗ ಮತ್ತು ಹೇಗೆ ಪ್ರತಿಕೂಲವಾಯಿತು ಎಂಬುದನ್ನು ನಿರ್ದಿಷ್ಟವಾಗಿ ವಾದಿಸಬೇಕು.

ಮೇಲೆ ನಮೂದಿಸಲಾದ ಪ್ರತಿಯೊಂದು ವಿಫಲತೆಯು ಅದರ ಆಧಾರವಾಗಿರುವ ಒಂದೇ ಒಂದು ಮೂಲಭೂತ ವಿಫಲತೆಯನ್ನು ಪ್ರತಿಫಲಿಸುತ್ತದೆ: ಅದುವೇ ಜಾತಿಯ ಸಾಮಾಜಿಕ ಹಿನ್ನೆಲೆ ಮತ್ತು ಕಾಯಿದೆಯ ಕಲ್ಯಾಣೋದ್ದೇಶವನ್ನು ಗುರುತಿಸುವಲ್ಲಿನ ವಿಫಲತೆ. ಪಿಟಿಸಿಎಲ್ ಕಾಯಿದೆಯನ್ನು ಅನ್ವಯಿಸಲು ಕರೆಯಲ್ಪಡುವ ನ್ಯಾಯಾಲಯಗಳು ಕಾಯಿದೆಯ ಉದ್ದೇಶದ ಕಡೆಗೆ ನಿರ್ದೇಶಿಸಲ್ಪಟ್ಟ ಗುರಿ-ಆಧಾರಿತ ದೃಷ್ಟಿಕೋನದಿಂದ ಪ್ರೇರಿತವಾಗಬೇಕು. ಬದಲಿಗೆ ಈ ಜ್ಯೂರಿ ಸಮಿತಿಯ ಮುಂದೆ ದಾಖಲಿಸಲಾದ ಪ್ರಕರಣಗಳಲ್ಲಿ, ನ್ಯಾಯಾಲಯಗಳು ಪಿಟಿಸಿಎಲ್ ಕಾಯಿದೆಯನ್ನು ಜಾರಿಗೆ ತರಲು ಕಾರಣವಾದ ಜಾತಿಯ ಸಾಮಾಜಿಕ ವಾಸ್ತವತೆಯನ್ನು ಗಣನೆಗೆ ತೆಗೆದುಕೊಳ್ಳದ ದೃಷ್ಟಿಕೋನದಿಂದ ಕಾರ್ಯನಿರ್ವಹಿಸಿವೆ. ಈ ಧೋರಣೆಯ ಪರಿಣಾಮಗಳು, ಯಾರ ಟೆಸ್ಟಿಮನಿಗಳನ್ನು  ಆಲಿಸಲಾಗಿದೆಯೋ ಆ ಮಂಜೂರಾತಿದಾರರಿಗೆ, ವಿನಾಶಕಾರಿ ಮತ್ತು ಸರಿಪಡಿಸಲಾಗದಂತಿವೆ.

### 4.4 ಕಾಯಿದೆಯಡಿ ತನ್ನ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ಪ್ರಭುತ್ವದ  ವಿಫಲತೆ

ಪಿಟಿಸಿಎಲ್ (PTCL) ಕಾಯಿದೆಯು ಮಂಜೂರಾದ ಜಮೀನುಗಳನ್ನು ರಕ್ಷಿಸುವ ಹೊರೆಯನ್ನು ಕೇವಲ ಮಂಜೂರಾತಿದಾರನ ಮೇಲಷ್ಟೇ ಹೊರಿಸುವುದಿಲ್ಲ. ಅದು ಮೂರು ನಿರ್ಣಾಯಕ ಹಂತಗಳಲ್ಲಿ ಪ್ರಭುತ್ವಕ್ಕೆ ಸಕ್ರಿಯ ಮತ್ತು ನಿರ್ದಿಷ್ಟ ಜವಾಬ್ದಾರಿಗಳನ್ನು ವಹಿಸಿದೆ – (ಎ) ನೋಂದಣಿ ಹಂತ, (ಬಿ) ಸ್ವಯಂ ಪ್ರೇರಿತ ಜಮೀನು ಮರುಸ್ವಾಧೀನದ ಹಂತ, (ಸಿ) ಮತ್ತು ಅಪರಾಧ ನಿಯಂತ್ರಣದ (ಶಿಕ್ಷೆ ವಿಧಿಸುವ) ಹಂತ. ತನ್ನ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಸರ್ಕಾರದ  ಈ ವಿಫಲತೆಯು ಇಡೀ ಕಾಯಿದೆಯ ಆಶಯವನ್ನೇ ತಲೆಕೆಳಗಾಗಿಸುವ ಒಂದು ವ್ಯವಸ್ಥಿತ ವೈಫಲ್ಯವಾಗಿದ್ದು, ಮಂಜೂರಾತಿದಾರರು ತಮ್ಮ ಹಕ್ಕುಗಳಿಗಾಗಿ ನಡೆಸುವ

ಹೋರಾಟದಲ್ಲಿ ಯಾವುದೇ ಸಾಂಸ್ಥಿಕ ಬೆಂಬಲವಿಲ್ಲದೆ ಸಂಪೂರ್ಣವಾಗಿ ಒಂಟಿಯಾಗುವಂತೆ ಮಾಡಿದೆ.

ಸೆಕ್ಷನ್ 6 ರ ಅಡಿಯಲ್ಲಿ ನೋಂದಣಿ ತಡೆಗಟ್ಟುವಿಕೆಯ ವೈಫಲ್ಯ ಸೆಕ್ಷನ್ 6 ರ ಅಡಿಯಲ್ಲಿ ಮಂಜೂರಾದ ಜಮೀನನ್ನು ವರ್ಗಾವಣೆ ಮಾಡಲು ಉದ್ದೇಶಿಸುವ ಯಾವುದೇ ದಾಖಲೆಯ ನೋಂದಣಿಯನ್ನು ನಿಷೇಧಿಸಲಾಗಿದೆ, ಮತ್ತು ಅಂತಹ ನೋಂದಣಿಯನ್ನು ನಿರಾಕರಿಸುವ ನಿರ್ದಿಷ್ಟ ಕಾನೂನುಬದ್ಧ ಕರ್ತವ್ಯವನ್ನು ಉಪ-ನೋಂದಣಾಧಿಕಾರಿಗಳ (Sub-Registrars) ಮೇಲೆ ಹೊರಿಸಲಾಗಿದೆ. ಈ ಕರ್ತವ್ಯವು ಅತ್ಯಂತ ಅತ್ಯಗತ್ಯವಾದುದಾಗಿದೆ. ಮಂಜೂರಾದ ಜಮೀನುಗಳ ವರ್ಗಾವಣೆಯನ್ನು ನೋಂದಾಯಿಸಲು ಸಾಧ್ಯವಾಗದಿದ್ದರೆ, ಅವುಗಳಿಗೆ ಕಾನೂನುಬದ್ಧ ಸಿಂಧುತ್ವದ ತೋರಿಕೆಯೂ ಸಿಗುವುದಿಲ್ಲ; ಮತ್ತು ಈ ಸಂಶೋಧನೆಯಲ್ಲಿ ಅಧ್ಯಯನ ಮಾಡಲಾದ ಏಳು ಜಿಲ್ಲೆಗಳಾದ್ಯಂತ ಮಂಜೂರಾತಿದಾರರನ್ನು ಜಮೀನಿನಿಂದ ವಂಚಿಸಿದ ತದನಂತರದ ವಹಿವಾಟುಗಳು ಮತ್ತು ಖಾತೆ ಬದಲಾವಣೆಗಳ (mutations) ಸರಪಳಿಯೇ ಪ್ರಾರಂಭವಾಗುತ್ತಿರಲಿಲ್ಲ. ಆದರೆ ವಾಸ್ತವದಲ್ಲಿ, ಉಪ-ನೋಂದಣಾಧಿಕಾರಿಗಳು ಈ ಕರ್ತವ್ಯವನ್ನು ಪಾಲಿಸುವಲ್ಲಿ ವ್ಯವಸ್ಥಿತವಾಗಿ ವಿಫಲರಾಗಿದ್ದಾರೆ. ಇಂತಹ ನೋಂದಣಿಗಳು ಕಾನೂನುಬಾಹಿರ ವಹಿವಾಟಿಗೆ ಕಾನೂನುಬದ್ಧತೆಯ ಒಂದು ಸುಳ್ಳು ಮುಖವಾಡವನ್ನು ನೀಡುತ್ತವೆ, ಇದನ್ನು ರದ್ದುಗೊಳಿಸಲು ಮಂಜೂರಾತಿದಾರರು ವರ್ಷಗಟ್ಟಲೆ ಕಾಯಬೇಕಾಗುತ್ತದೆ ಮತ್ತು ಅಪಾರ ಸಂಪನ್ಮೂಲಗಳನ್ನು ಖರ್ಚು ಮಾಡಬೇಕಾಗುತ್ತದೆ. ಸೆಕ್ಷನ್ 6 ರ ವೈಫಲ್ಯವು ಕಾಯಿದೆಯಡಿಯಲ್ಲಿನ ಜಾರಿ ಪ್ರಕ್ರಿಯೆಯ ಮೊದಲ ಹಂತದಲ್ಲೇ ಉಂಟಾದ ವೈಫಲ್ಯವಾಗಿದೆ, ಮತ್ತು ಇದು ಕಾಯಿದೆಯು ತಡೆಯಲು ಬಯಸಿದ್ದ ಪರಭಾರೆಗೆ ದಾರಿ ಮಾಡಿಕೊಟ್ಟಿದೆ.

**ಸೆಕ್ಷನ್ 5 ರ ಅಡಿಯಲ್ಲಿ 'ಸುವೋ ಮೋಟೊ' (ಸ್ವಯಂ ಪ್ರೇರಿತ) ಜಮೀನು ಮರುಸ್ಥಾಪನೆ ಪ್ರಕ್ರಿಯೆ ಆರಂಭಿಸುವಲ್ಲಿನ ವೈಫಲ್ಯ** ಸೆಕ್ಷನ್ 5 ರ ಅಡಿಯಲ್ಲಿ ಸಹಾಯಕ ಕಮಿಷನರ್‌ಗೆ (Assistant Commissioner - AC) ಮಂಜೂರಾತಿದಾರರಿಂದ ಯಾವುದೇ ಅರ್ಜಿಗಾಗಿ ಕಾಯದೆ, ತಾನಾಗಿಯೇ 'ಸುವೋ ಮೋಟೋ' ಮರುಸ್ಥಾಪನೆ ನಡಾವಳಿಗಳನ್ನು ಪ್ರಾರಂಭಿಸುವ ಅಧಿಕಾರವನ್ನು ನೀಡಲಾಗಿದೆ. ಮಂಜೂರಾತಿದಾರರು ಅನಕ್ಷರತೆ, ಬಡತನ ಮತ್ತು ಸಾಮಾಜಿಕ ದಬ್ಬಾಳಿಕೆಯ ಕಾರಣದಿಂದಾಗಿ ತಾವಾಗಿಯೇ ಕಾನೂನು ಪ್ರಕ್ರಿಯೆಗಳನ್ನು ಪ್ರಾರಂಭಿಸಲು ಅಸಮರ್ಥರಾಗಬಹುದು ಎಂಬುದನ್ನು ಶಾಸಕಾಂಗವು ಗುರುತಿಸಿದ್ದರಿಂದಲೇ ಈ ಅಧಿಕಾರವನ್ನು ನೀಡಲಾಗಿದೆ. ಈ 'ಸುವೋ ಮೋಟೋ' ಅಧಿಕಾರದ ಉದ್ದೇಶವು, ಪ್ರಭುತ್ವವನ್ನು ಕಾಯಿದೆಯ ಸಕ್ರಿಯ ಜಾರಿಕರ್ತನನ್ನಾಗಿ ಮಾಡುವುದಾಗಿತ್ತು; ಇದು ಕಾನೂನುಬಾಹಿರ ವರ್ಗಾವಣೆಗಳನ್ನು ಗುರುತಿಸುವ ಮತ್ತು ಮಂಜೂರಾತಿದಾರನ ಸಾಮರ್ಥ್ಯಕ್ಕೆ ಕಾಯದೆ ಸ್ವತಂತ್ರವಾಗಿ ಜಮೀನು ಮರುಸ್ಥಾಪನೆ ಪ್ರಕ್ರಿಯೆಯನ್ನು ಪ್ರಾರಂಭಿಸುವ ಶಕ್ತಿಯನ್ನು ಪ್ರಭುತ್ವಕ್ಕೆ ನೀಡುತ್ತದೆ. ಆದರೆ ವಾಸ್ತವದಲ್ಲಿ ಈ ಅಧಿಕಾರವನ್ನು ಎಂದಿಗೂ ಬಳಸುವುದೇ ಇಲ್ಲ. ಇದರ ಪರಿಣಾಮವಾಗಿ, ತಮ್ಮ ಹಕ್ಕುಗಳ ಬಗ್ಗೆ ತಿಳಿಯದ ಅಥವಾ ಅವುಗಳನ್ನು ಪ್ರತಿಪಾದಿಸಲು ಸಾಧ್ಯವಾಗದ ಅತ್ಯಂತ ದುರ್ಬಲ ಮಂಜೂರಾತಿದಾರರನ್ನು ರಕ್ಷಿಸಲು ಕಾನೂನಿನಲ್ಲಿರುವ

ಅತ್ಯಂತ ಪ್ರಮುಖವಾದ ಈ ಕಾರ್ಯವಿಧಾನವು ಸಂಪೂರ್ಣವಾಗಿ ನಿಷ್ಕ್ರಿಯವಾಗಿದೆ.

**ಸೆಕ್ಷನ್ 8 ರ ಅಡಿಯಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡುವಲ್ಲಿನ ವೈಫಲ್ಯ** ಸೆಕ್ಷನ್ 8 ರ ಅಡಿಯಲ್ಲಿ ಕಾಯಿದೆಯನ್ನು ಉಲ್ಲಂಘಿಸಿ ಮಂಜೂರಾದ ಜಮೀನನ್ನು ಖರೀದಿಸುವ ಖರೀದಿದಾರರ ಮೇಲೆ ಕ್ರಿಮಿನಲ್ ಹೊಣೆಗಾರಿಕೆಯನ್ನು ಹೊರಿಸಲಾಗುತ್ತದೆ, ಇದು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು/ಅಥವಾ ದಂಡಕ್ಕೆ ಅರ್ಹವಾದ ಅಪರಾಧವಾಗಿದೆ. ಈ ನಿಬಂಧನೆಯು ಕಾಯಿದೆಯ ಅತ್ಯಂತ ಪ್ರಮುಖ ಮತ್ತು ಪ್ರಬಲವಾದ ತಡೆಗಟ್ಟುವ ಕ್ರಮಗಳಲ್ಲಿ ಒಂದಾಗಿದೆ. ಆದರೆ ವಾಸ್ತವದಲ್ಲಿ, ಸೆಕ್ಷನ್ 8 ಸಂಪೂರ್ಣವಾಗಿ ಸುಪ್ತವಾಗಿದೆ (ಬಳಕೆಯಾಗುತ್ತಿಲ್ಲ). ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸದೇ ಇರುವುದು ಖರೀದಿದಾರರಿಗೆ ತದ್ವಿರುದ್ಧವಾದ ಸಂದೇಶವನ್ನು ರವಾನಿಸುತ್ತದೆ; ಅಂದರೆ, ಖರೀದಿದಾರನಿಗೆ ಯಾವುದೇ ಅಪಾಯವಿಲ್ಲದೆ ಕಾಯಿದೆಯನ್ನು ಉಲ್ಲಂಘಿಸಿ ಮಂಜೂರಾದ ಜಮೀನನ್ನು ಖರೀದಿಸಬಹುದು ಎಂಬ ತಪ್ಪು ಸಂದೇಶವನ್ನು ನೀಡುತ್ತದೆ. ಇದು ಕಾಯ್ದೆಯ ಅತ್ಯಂತ ಪ್ರಮುಖ ತಡೆಗಟ್ಟುವ ಅಂಶವನ್ನೇ ತೆಗೆದುಹಾಕುತ್ತದೆ ಮತ್ತು ಶಿಕ್ಷೆಯಾಗದೆ ತಪ್ಪಿಸಿಕೊಳ್ಳುವ ಸಂಸ್ಕೃತಿಗೆ ಮತ್ತಷ್ಟು ಬಲ ನೀಡುತ್ತದೆ..

ಮೇಲೆ ಗುರುತಿಸಲಾದ ಮೂರು ವೈಫಲ್ಯಗಳು ಪರಸ್ಪರ ಸ್ವತಂತ್ರವಾಗಿಲ್ಲ. ಅವು ಒಂದಕ್ಕೊಂದು ಪೂರಕವಾಗುತ್ತಾ, ಹಿಂದಿನ ವಿಭಾಗಗಳಲ್ಲಿ ದಾಖಲಿಸಲಾದ ನ್ಯಾಯಾಂಗದ ವೈಫಲ್ಯಗಳ ತೀವ್ರತೆಯನ್ನು ಮತ್ತಷ್ಟು ಹೆಚ್ಚಿಸುತ್ತವೆ. ಪ್ರಭುತ್ವವು ತನ್ನ 'ಸುವೋ ಮೋಟೋ' ಅಧಿಕಾರವನ್ನು ಚಲಾಯಿಸದ ಕಾರಣ, ಮಂಜೂರಾತಿದಾರರು ತಾವೇ ಸ್ವತಃ ಕಾನೂನು ಪ್ರಕ್ರಿಯೆಗಳನ್ನು ಪ್ರಾರಂಭಿಸಬೇಕಾಗಿದೆ ಮತ್ತು ಮುಂದುವರಿಸಬೇಕಾಗಿದೆ. ಉಪ-ನೋಂದಣಾಧಿಕಾರಿಗಳು ಸೆಕ್ಷನ್ 6 ಅನ್ನು ಜಾರಿಗೆ ತರದ ಕಾರಣ, ಕಾನೂನುಬಾಹಿರ ವರ್ಗಾವಣೆಗಳು ಕಾನೂನುಬದ್ಧತೆಯ ಮುಖವಾಡವನ್ನು ಪಡೆದುಕೊಳ್ಳುತ್ತವೆ, ಇದು ತದನಂತರದ ಮೊಕದ್ದಮೆಗಳನ್ನು ಹೆಚ್ಚು ಕಷ್ಟಕರ ಮತ್ತು ಹೆಚ್ಚು ವೆಚ್ಚದಾಯಕವಾಗಿಸುತ್ತದೆ. ಖರೀದಿದಾರರ ವಿರುದ್ಧ ಸೆಕ್ಷನ್ 8 ರ ಅಡಿಯಲ್ಲಿ ಮೊಕದ್ದಮೆ ಹೂಡದ ಕಾರಣ, ಕಾನೂನುಬಾಹಿರವಾಗಿ ಮಂಜೂರಾದ ಜಮೀನನ್ನು ಖರೀದಿಸುವುದರ ವಿರುದ್ಧ ಯಾವುದೇ ವೈಯಕ್ತಿಕ ಭಯ ಇಲ್ಲದಂತಾಗಿದೆ. ಕಾಯಿದೆಯು ಪ್ರಭುತ್ವಕ್ಕೆ ವಹಿಸಿಕೊಟ್ಟ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಪ್ರಭುತ್ವವು ಸ್ವತಃ ವಿಫಲವಾದ ಪರಿಣಾಮ, ಅಂತಿಮವಾಗಿ ದುರ್ಬಲ ಮಂಜೂರಾತಿದಾರನೇ ಶಿಕ್ಷೆ ಅನುಭವಿಸುವಂತಾಗಿದೆ.

### 4.5 ವ್ಯಾಪಕ ಪರಿಣಾಮಗಳು: ಭೂಮಿ, ಜಾತಿ ಮತ್ತು ವಿತರಣಾ ನ್ಯಾಯದ (ಡಿಸ್ಟ್ರಿಬ್ಯೂಟಿವ್ ಜಸ್ಟಿಸ್) ಸೋಲು

ಮೇಲೆ ದಾಖಲಿಸಲಾದ ವೈಫಲ್ಯಗಳು ಕೇವಲ ಕಾನೂನು ಜಾರಿಯ ವೈಫಲ್ಯಗಳಲ್ಲ ಅಥವಾ ಕೇವಲ ವ್ಯಕ್ತಿಗತ ನಷ್ಟಗಳಲ್ಲ. ಇವು ವ್ಯಕ್ತಿಗತ ಪ್ರಕರಣಗಳನ್ನು ಮೀರಿ ಭೂಮಾಲೀಕತ್ವದ ರಚನೆ, ಜಾತಿ ಆಧಾರಿತ ಅಸಮಾನತೆಯ ಮುಂದುವರಿಕೆ ಮತ್ತು ವಿತರಣಾ ನ್ಯಾಯದ ಸಾಂವಿಧಾನಿಕ ಭರವಸೆಯ ಕ್ಷೀಣತೆ - ಈ ವ್ಯಾಪಕ ವ್ಯಾಪಕ ಪರಿಣಾಮಗಳನ್ನು ಬೀರುವ

ವೈಫಲ್ಯಗಳಾಗಿವೆ.

ಸಂವಿಧಾನದ ಮುಖ್ಯ ಶಿಲ್ಪಿ ಮತ್ತು ದಣಿವರಿಯದ ಜಾತಿ ವಿರೋಧಿ ಹೋರಾಟಗಾರರಾದ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಪಾದನೆಯೇನೆಂದರೆ - ಭೂಮಿ ಇಲ್ಲದೆ ನಿಜವಾದ ಸ್ವಾತಂತ್ರ್ಯ ಇರಲು ಸಾಧ್ಯವಿಲ್ಲ ಮತ್ತು ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಸಮಾನತೆ ಇರಲು ಸಾಧ್ಯವಿಲ್ಲ.

ಪಿ.ಟಿ.ಸಿ.ಎಲ್ ಕಾಯ್ದೆಯನ್ನು ಭೂಸುಧಾರಣೆಯ ಒಂದು ವ್ಯಾಪಕ ಯೋಜನೆಯ ಭಾಗವಾಗಿ ಜಾರಿಗೆ ತರಲಾಯಿತು. ಪ್ರಬಲ ಜಾತಿಯ ಜಮೀನ್ದಾರರ ಕೈಯಲ್ಲಿ ಭೂಮಾಲೀಕತ್ವದ ಕೇಂದ್ರೀಕರಣ ಮತ್ತು ಎಸ್‌ಸಿ/ಎಸ್‌ಟಿ (SC/ST) ಸಮುದಾಯಗಳನ್ನು ಭೂಮಾಲೀಕತ್ವದಿಂದ ಹೊರಗಿಡುವುದು, ಊಳಿಗಮಾನ್ಯ ಮತ್ತು ಜಾತಿ ವ್ಯವಸ್ಥೆಯ ಒಂದು ರಚನಾತ್ಮಕ ಲಕ್ಷಣವಾಗಿತ್ತು ಎಂಬುದನ್ನು ಆ ಯೋಜನೆಯು ಗುರುತಿಸಿತ್ತು.

ಎಸ್‌ಸಿ/ಎಸ್‌ಟಿ ಸಮುದಾಯಗಳಿಗೆ ಭೂಮಿ ಮಂಜೂರು ಮಾಡಿದ್ದು ಈ ಸಾಮಾಜಿಕ ರಚನೆಯಲ್ಲಿ ಸಾಂವಿಧಾನಿಕ ಹಸ್ತಕ್ಷೇಪದ ಒಂದು ಭಾಗವಾಗಿತ್ತು. ವ್ಯವಸ್ಥಿತವಾಗಿ ಯಾರಿಗೆ ಭೂಮಿಯನ್ನು ನಿರಾಕರಿಸಲಾಗಿತ್ತೋ, ಅಂತಹವರಿಗೆ ಒಂದು ಮೂಲಭೂತ ಉತ್ಪಾದನಾ ಸಂಪನ್ಮೂಲವನ್ನು ಮರುಹಂಚಿಕೆ ಮಾಡಲು ಇದು ದಾರಿ ಮಾಡಿಕೊಟ್ಟಿತು. ಈ ಮಂಜೂರಾತಿಗಳಲ್ಲಿನ ಪರಭಾರೆ ನಿಷೇಧ ಷರತ್ತುಗಳು (ನಾನ್-ಅಲಿಯನೇಷನ್), ಸಕ್ರಿಯವಾಗಿ ರಕ್ಷಿಸದ ಹೊರತು ಈ ಮರುಹಂಚಿಕೆಯು ತಲೆಕೆಳಗಾಗುತ್ತದೆ ಮತ್ತು ಆರಂಭದಲ್ಲಿ ಭೂಹೀನತೆಗೆ ಕಾರಣವಾಗಿದ್ದ ಅದೇ ಜಾತಿ ಮತ್ತು ಆರ್ಥಿಕ ಶಕ್ತಿಗಳು, ನಿಯಂತ್ರಿಸದಿದ್ದರೆ ಮತ್ತೆ ಭೂಹೀನತೆಯನ್ನು ಸೃಷ್ಟಿಸುತ್ತವೆ ಎಂಬ ತಿಳುವಳಿಕೆಯ ಗುರುತಾಗಿದ್ದವು.

ಈಗ ನಿಖರವಾಗಿ ಅದೇ ಸಂಭವಿಸಿದೆ. ಪಿ.ಟಿ.ಸಿ.ಎಲ್ ಕಾಯ್ದೆಯನ್ನು ನಿಷ್ಪರಿಣಾಮಕಾರಿಯಾಗಿಸಿದಾಗ, ಈ ಸಾಂವಿಧಾನಿಕ ಯೋಜನೆಯ ಭಾಗವಾಗಿ ಮಂಜೂರು ಮಾಡಲಾದ ಭೂಮಿಗಳು ಮತ್ತೆ ಆರ್ಥಿಕವಾಗಿ ಪ್ರಬಲವಾಗಿರುವ ವರ್ಗಗಳ ವಶಕ್ಕೆ ಮರಳುತ್ತವೆ. ಮಂಜೂರಾತಿಗಳು ಉಲ್ಟಾ ಆಗುತ್ತವೆ. ಮರುಹಂಚಿಕೆಯು ರದ್ದಾಗುತ್ತದೆ.

ಪಿ.ಟಿ.ಸಿ.ಎಲ್ ಕಾಯ್ದೆಯ ದುರ್ಬಲಗೊಳ್ಳುವಿಕೆಯು ಪ್ರತಿ-ಸುಧಾರಣೆಯ (ಕೌಂಟರ್-ರಿಫಾರ್ಮ್) ಒಂದು ಕಾರ್ಯವಿಧಾನವಾಗಿ ಕೆಲಸ ಮಾಡಿದೆ. ಇದು ಭೂಸುಧಾರಣೆಯ ಹಂಚಿಕೆ ಯೋಜನೆಯನ್ನು ತಲೆಕೆಳಗು ಮಾಡಲು ಅವಕಾಶ ಮಾಡಿಕೊಟ್ಟಿದೆ. ಈ ಹಿಮ್ಮುಖ ಬದಲಾವಣೆಯ ಫಲಾನುಭವಿಗಳು ಯಾರೋ ಆಕಸ್ಮಿಕರಲ್ಲ. ಟೆಸ್ಟಿಮೋನಿಗಳಾದ್ಯಂತ ನಿರಂತರವಾಗಿ ಕಂಡುಬರುವಂತೆ, ಅವರು ರಾಜಕೀಯ ಪ್ರಭಾವ, ಕಾನೂನು ಸಂಪನ್ಮೂಲಗಳು ಮತ್ತು ಸುದೀರ್ಘ ಮೊಕದ್ದಮೆಗಳನ್ನು ನಡೆಸುವ ಸಾಮರ್ಥ್ಯ ಹೊಂದಿರುವ, ಐತಿಹಾಸಿಕವಾಗಿ ಪ್ರಬಲ ಜಾತಿಗಳು ಮತ್ತು ಸಮುದಾಯಗಳಿಗೆ ಸೇರಿದ ವ್ಯಕ್ತಿಗಳಾಗಿದ್ದಾರೆ. ಇದರ ನಷ್ಟವನ್ನು ಅನುಭವಿಸುತ್ತಿರುವವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳ ಸದಸ್ಯರಾಗಿದ್ದಾರೆ, ಇವರ ಭೂಹೀನತೆಯು ಈಗ ಸಾಲಬಾಧೆ, ಸ್ಥಳಾಂತರ ಮತ್ತು ವರ್ಷಗಳ ಕಾಲದ ವಿಫಲ ಮೊಕದ್ದಮೆಗಳ ಪರಿಣಾಮಗಳಿಂದ ಮತ್ತಷ್ಟು

ಉಲ್ಬಣಗೊಂಡಿದೆ.

ಸಂವಿಧಾನವು ಯಾವುದನ್ನು ನಿರ್ಮೂಲನೆ ಮಾಡಲು ಬಯಸಿದ್ದವೋ, ಕಾನೂನು ಸಂಸ್ಥೆಗಳ ಮೂಲಕ ಅದೇ ಜಾತಿ ಆಧಾರಿತ ಭೂ ಕೇಂದ್ರೀಕರಣವನ್ನು ಮರುಸೃಷ್ಟಿಸುತ್ತಿರುವುದಕ್ಕೆ ಇದು ಉದಾಹರಣೆಯಾಗಿದೆ. ಲಿಂಗಪ್ಪ ಪೋಚಣ್ಣ (ಮೇಲೆ ಉಲ್ಲೇಖಿಸಿದ) ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ಇಂತಹ ಶಾಸನಗಳು ಆರ್ಥಿಕ ಅಸಮಾನತೆಗಳನ್ನು ನಿವಾರಿಸುವ ಮತ್ತು ಅಸಮಾನರ ನಡುವಿನ ವಹಿವಾಟುಗಳಿಂದ ಉಂಟಾಗುವ ಅನ್ಯಾಯವನ್ನು ಸರಿಪಡಿಸುವ ಉದ್ದೇಶವನ್ನು ಹೊಂದಿವೆ ಎಂಬುದನ್ನು ಗುರುತಿಸಿದೆ. ನ್ಯಾಯಾಲಯಗಳು ಈ ಉದ್ದೇಶವನ್ನು ದುರ್ಬಲಗೊಳಿಸುವ ಸಿದ್ಧಾಂತಗಳನ್ನು ಅನ್ವಯಿಸಿದಾಗ ಮತ್ತು ಆಡಳಿತಗಾರರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ವಿಫಲರಾದಾಗ, ಕಾನೂನು ಸಂಸ್ಥೆಗಳು 'ವಿತರಣಾತ್ಮಕ ನ್ಯಾಯ'  ಸಾಧನಗಳಾಗುವ ಬದಲು, ಅದನ್ನು ನಾಶಪಡಿಸುವ ಸಾಧನಗಳಾಗುತ್ತವೆ. ( ವಿತರಣಾತ್ಮಕ ನ್ಯಾಯ"  ಎಂದರೆ, ಭೂಮಿಯಂತಹ ಸೀಮಿತ ಸಂಪನ್ಮೂಲಗಳ ಹಂಚಿಕೆ ಮತ್ತು ಮಾಲೀಕತ್ವದಲ್ಲಿ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ನ್ಯಾಯಯುತ ಪಾಲು ದೊರಕುವಂತೆ ಮಾಡುವ ತತ್ವ.)

ಐತಿಹಾಸಿಕವಾಗಿ ಭೂಮಿಯಿಂದ ವಂಚಿತರಾದವರಿಗೆ ಭೂಮಿ ದೊರಕುವಂತೆ ಮಾಡುವುದು ಮತ್ತು ಭೂಮಿ ಮತ್ತೆ ಕೆಲವೇ ಪ್ರಬಲ ವರ್ಗಗಳ ಕೈಯಲ್ಲಿ ಕೇಂದ್ರೀಕರಿಸುವುದನ್ನು ತಡೆಯುವುದು ಇದರ ಪ್ರಮುಖ ಉದ್ದೇಶವಾಗಿದೆ.

ಆದ್ದರಿಂದ, ನಮ್ಮ ಮುಂದಿರುವ ಪ್ರಶ್ನೆಯು ಕೇವಲ ಒಂದು ಶಾಸನದ ಅನುಷ್ಠಾನದ ಬಗ್ಗೆ ಮಾತ್ರವಲ್ಲ. ಇದು ಎಸ್‌ಸಿ/ಎಸ್‌ಟಿ ಸಮುದಾಯಗಳಿಗೆ ಸಾಮಾಜಿಕ ಮತ್ತು ಆರ್ಥಿಕ ನ್ಯಾಯದ ಸಾಂವಿಧಾನಿಕ ಭರವಸೆಯನ್ನು ಗೌರವಿಸಬೇಕೇ ಅಥವಾ ಕೈಬಿಡಬೇಕೇ ಎಂಬ ಪ್ರಶ್ನೆಯಾಗಿದೆ. ಈ ವರದಿಯಲ್ಲಿ ದಾಖಲಿಸಲಾದ ವಿವಿಧ ವಿಧಾನಗಳ  ಮೂಲಕ ಪಿ.ಟಿ.ಸಿ.ಎಲ್ ಕಾಯ್ದೆಯನ್ನು  ವ್ಯವಸ್ಥಿತವಾಗಿ ದುರ್ಬಲಗೊಳಿಸಿರುವುದು,  ಒಂದು ಗಂಭೀರ ಸ್ವರೂಪದ ಸಾಂವಿಧಾನಿಕ ವೈಫಲ್ಯವಾಗಿದೆ.

**5. ಶಿಫಾರಸುಗಳು**

ಎಸ್‌ಸಿ/ಎಸ್‌ಟಿ (SC/ST) ಸಮುದಾಯಗಳಿಗೆ ವಿತರಣಾ ನ್ಯಾಯವನ್ನು ಒದಗಿಸುವ ಸಾಂವಿಧಾನಿಕ ಸಾಧನವಾಗಿ ಜಾರಿಗೆ ತರಲಾದ ಪಿ.ಟಿ.ಸಿ.ಎಲ್ (PTCL) ಕಾಯ್ದೆಯು, ಎರಡು ಪರಸ್ಪರ ಪೂರಕವಾದ ವೈಫಲ್ಯದ ಮೂಲಗಳಿಂದಾಗಿ ಹೆಚ್ಚಾಗಿ ನಿಷ್ಪರಿಣಾಮಕಾರಿಯಾಗಿದೆ ಎಂಬುದನ್ನು ಈ ವರದಿಯ ಸಂಶೋಧನೆಗಳು ಸ್ಥಾಪಿಸುತ್ತವೆ. ಮೊದಲನೆಯದಾಗಿ, ಕಾಯ್ದೆಯ ಪರಿಹಾರಾತ್ಮಕ ಉದ್ದೇಶದಿಂದ ದೂರ ಸರಿದ ತೀರ್ಪುಗಳು. ಎರಡನೆಯದಾಗಿ, ಕಾಯ್ದೆಯಡಿ ರಾಜ್ಯದ ಮೇಲಿರುವ ಕರ್ತವ್ಯಗಳನ್ನು ಮತ್ತು ಆಡಳಿತ ವ್ಯವಸ್ಥೆ ನಿರ್ವಹಿಸದೆ  ಹಿಂದೆ ಸರಿದಿರುವುದು.

ಸಾರ್ವಜನಿಕ ಅಹವಾಲಿನಲ್ಲಿ ಕೇಳಿಬಂದ ಟೆಸ್ಟಿಮೋನಿಗಳು ಈ ವೈಫಲ್ಯದ ಮಾನವೀಯ ಪರಿಣಾಮಗಳನ್ನು ದಾಖಲಿಸುತ್ತವೆ: ಸಾಮಾಜಿಕ ಮತ್ತು ಆರ್ಥಿಕ ನ್ಯಾಯದ ಕ್ರಮವಾಗಿ ತಮಗೆ ಮಂಜೂರು ಮಾಡಲಾದ ಭೂಮಿಯಿಂದ ವಂಚಿತರಾದ ಕುಟುಂಬಗಳು, ದಶಕಗಳ ಕಾಲ ಮತ್ತು ಅಪಾರ ಸಂಪನ್ಮೂಲಗಳನ್ನು ವ್ಯಯಿಸಿ ಕಾನೂನು ಹೋರಾಟ ನಡೆಸಿದರೂ, ಕಾನೂನು ಅವರ ಪರವಾಗಿದ್ದರೂ ಸಹ  ಇಂದಿಗೂ ನ್ಯಾಯ ಸಿಗದೆ ಭೂಹೀನರಾಗಿಯೇ ಉಳಿದಿದ್ದಾರೆ.

ಎಸ್‌ಸಿ/ಎಸ್‌ಟಿ ಸಮುದಾಯಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ಉತ್ತೇಜಿಸಲು ಹಾಗೂ ಸಾಮಾಜಿಕ ಅನ್ಯಾಯ ಮತ್ತು ಎಲ್ಲಾ ರೀತಿಯ ಶೋಷಣೆಗಳಿಂದ ಅವರನ್ನು ರಕ್ಷಿಸಲು ಕರ್ನಾಟಕ ಸರ್ಕಾರವು ಸಂವಿಧಾನದ 46ನೇ ವಿಧಿಯ ಅಡಿಯಲ್ಲಿ ಸಾಂವಿಧಾನಿಕ ಬಾಧ್ಯತೆಯನ್ನು ಹೊಂದಿದೆ. ಈ ಕೆಳಗಿನ ಶಿಫಾರಸುಗಳನ್ನು ಆ ಬಾಧ್ಯತೆಯನ್ನು ಉದ್ದೇಶಿಸಿ ನೀಡಲಾಗಿದೆ.

**5.1 ಸುಪ್ರೀಂ ಕೋರ್ಟ್ ಮುಂದೆ ಇರುವ ಮರುಪರಿಶೀಲನಾ ಅರ್ಜಿ**

ಪ್ರಸ್ತುತ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವ 'ನೆಕ್ಕಂಟಿ ರಾಮಲಕ್ಷ್ಮಿ' ತೀರ್ಪಿನ ಮರುಪರಿಶೀಲನಾ ಅರ್ಜಿಯಲ್ಲಿ  ರಾಜ್ಯ ಸರ್ಕಾರವು ಸಂಪೂರ್ಣ ಮತ್ತು ಪರಿಣಾಮಕಾರಿ ಪ್ರಾತಿನಿಧ್ಯವನ್ನು ಖಚಿತಪಡಿಸಿಕೊಳ್ಳಬೇಕು.

**5.2 ಉನ್ನತ ಮಟ್ಟದ ಸಮಿತಿ**

ಪಿ.ಟಿ.ಸಿ.ಎಲ್ ಕಾಯ್ದೆಯ ಅನುಷ್ಠಾನದ ಕುರಿತು ಅಧ್ಯಯನ ಮಾಡಲು ಮತ್ತು ಅದರ ಉದ್ದೇಶ ಈಡೇರುವುದನ್ನು ಖಚಿತಪಡಿಸಿಕೊಳ್ಳಲು ಶಿಫಾರಸುಗಳನ್ನು ಮಾಡಲು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ರಾಜ್ಯ ಸರ್ಕಾರವು ತಕ್ಷಣವೇ ಉನ್ನತ ಮಟ್ಟದ ಸಮಿತಿಯನ್ನು ರಚಿಸಬೇಕು. ಸಮಿತಿಯು ಕಾಯ್ದೆಯ ಅನುಷ್ಠಾನದ ಮೇಲೆ ಕರ್ನಾಟಕ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನ ತೀರ್ಪುಗಳ ಪ್ರಭಾವವನ್ನು ಪರಿಶೀಲಿಸಬೇಕು, ಮತ್ತು ಕಾಯ್ದೆಯ ಉದ್ದೇಶದಿಂದ ದೂರ ಸರಿದ ತೀರ್ಪುಗಳನ್ನು ಸರಿಪಡಿಸಲು ಅಗತ್ಯವಿರುವ ಶಾಸಕಾಂಗ ತಿದ್ದುಪಡಿಗಳು ಸೇರಿದಂತೆ ಕಾನೂನು ಮತ್ತು ಅದರ ಅನುಷ್ಠಾನ ಎರಡನ್ನೂ ಬಲಪಡಿಸಲು ಕ್ರಮಗಳನ್ನು ಶಿಫಾರಸು ಮಾಡಬೇಕು.

**5.3 ಪರ್ಯಾಯ ಭೂಮಿ ನೀಡುವ ಮೂಲಕ ಭೂಮಿ ಕಳೆದುಕೊಂಡವರ ಪುನರ್ವಸತಿ**

ನೆಕ್ಕಂಟಿ ರಾಮಲಕ್ಷ್ಮಿ ತೀರ್ಪಿನ ಕಾರಣದಿಂದಾಗಿ, ವಿಳಂಬದ ಆಧಾರದ ಮೇಲೆ ತಮ್ಮ ಭೂಮಿಯಿಂದ ವಂಚಿತರಾದ ನೂರಾರು ಕುಟುಂಬಗಳಿಗೆ ಅದೇ ಜಿಲ್ಲೆಯಲ್ಲಿ ಪರ್ಯಾಯ ಭೂಮಿಯನ್ನು ಒದಗಿಸಬೇಕು, ಇದರಿಂದಾಗಿ ಕಾಯ್ದೆಯ ಮೂಲ ಉದ್ದೇಶವನ್ನು ಎತ್ತಿಹಿಡಿದಂತಾಗುತ್ತದೆ.

**5.4 ಮಂಜೂರಾತಿದಾರರಿಗೆ ಕಾನೂನು ನೆರವು ಮತ್ತು ಸರ್ಕಾರದ  ಬೆಂಬಲ**

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಪಿ.ಟಿ.ಸಿ.ಎಲ್

ಪ್ರಕರಣಗಳನ್ನು ಕಾನೂನು ನೆರವಿಗಾಗಿ ಆದ್ಯತೆಯ ವರ್ಗವೆಂದು ಪರಿಗಣಿಸಬೇಕು. ಸಹಾಯಕ ಕಮಿಷನರ್ (AC), ಜಿಲ್ಲಾಧಿಕಾರಿ (DC), ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಮುಂದೆ ನಡೆಯುವ ನಡಾವಳಿಗಳಲ್ಲಿ ಮಂಜೂರಾತಿದಾರರು ಮತ್ತು ಅವರ ಕಾನೂನುಬದ್ಧ ವಾರಸುದಾರರನ್ನು ಪ್ರತಿನಿಧಿಸಲು ಪಿ.ಟಿ.ಸಿ.ಎಲ್ ಕಾನೂನಿನಲ್ಲಿ ತರಬೇತಿ ಪಡೆದ ಸಮಿತಿ ವಕೀಲರನ್ನು (ಪ್ಯಾನಲ್ ಲಾಯರ್ಸ್) ಪ್ರತ್ಯೇಕವಾಗಿ ನಿಯೋಜಿಸಬೇಕು.

ರಾಜ್ಯ ಸರ್ಕಾರವು ಹೆಚ್ಚುವರಿಯಾಗಿ, ಪಿ.ಟಿ.ಸಿ.ಎಲ್ ನಡಾವಳಿಗಳನ್ನು ಮೇಲ್ವಿಚಾರಣೆ ಮಾಡಲು ಮತ್ತು ಮಂಜೂರಾತಿದಾರರಿಗೆ ಸಾಂಸ್ಥಿಕ ಬೆಂಬಲವನ್ನು ಒದಗಿಸಲು ಸಮಾಜ ಕಲ್ಯಾಣ ಇಲಾಖೆಯೊಳಗೆ ಪ್ರತ್ಯೇಕ ಕಾನೂನು ಕೋಶವನ್ನು (ಲೀಗಲ್ ಸೆಲ್) ಸ್ಥಾಪಿಸಬೇಕು.

### 5.5. ಸೆಕ್ಷನ್ 8 ರ ಅನುಷ್ಠಾನ: ಕ್ರಿಮಿನಲ್ ಮೊಕದ್ದಮೆ

ಕಾಯ್ದೆಯ ಉಲ್ಲಂಘನೆಯಾಗಿ ಮಂಜೂರಾದ ಭೂಮಿಯನ್ನು ಖರೀದಿಸಿದ ಖರೀದಿಗಾರರ ವಿರುದ್ಧ ಸೆಕ್ಷನ್ 8 ರ ಅಡಿಯಲ್ಲಿ ಕ್ರಿಮಿನಲ್ ಕಾನೂನು ಕ್ರಮಗಳನ್ನು ಪ್ರಾರಂಭಿಸಲು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಬೇಕು. ಸೆಕ್ಷನ್ 8 ಅನ್ವಯವಾಗುವ ಪ್ರಕರಣಗಳನ್ನು ಗುರುತಿಸಲು ಮತ್ತು ಇನ್ನು ಮುಂದೆ ವಿಳಂಬ ಮಾಡದೆ ಮೊಕದ್ದಮೆ ಹೂಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ರಾಜ್ಯ ಸರ್ಕಾರ ನಿರ್ದೇಶನ ನೀಡಬೇಕು. ಈ ಅಕ್ರಮ ವಹಿವಾಟುಗಳಿಗೆ ನೆರವು ನೀಡುವ ಗ್ರಾಮ ಆಡಳಿತಾಧಿಕಾರಿಗಳು (ವಿಲೇಜ್ ಅಕೌಂಟೆಂಟ್ಸ್), ಕಂದಾಯ ನಿರೀಕ್ಷಕರು (ರೆವೆನ್ಯೂ ಇನ್ಸ್‌ಪೆಕ್ಟರ್ಸ್) ಮತ್ತು ತಹಶೀಲ್ದಾರರು ಸೇರಿದಂತೆ ಅಧಿಕಾರಿಗಳು ಸಹ ತನಿಖೆಯನ್ನು ಎದುರಿಸಬೇಕು ಮತ್ತು ತಪ್ಪಿತಸ್ಥರೆಂದು ಕಂಡುಬಂದಲ್ಲಿ ಕ್ರಮ ಎದುರಿಸಬೇಕು.

### 5.6 ಸೆಕ್ಷನ್ 6 ರ ಅನುಷ್ಠಾನ: ನೋಂದಣಿಗೆ ನಿಷೇಧ

ಮಂಜೂರಾದ ಭೂಮಿಗಳ ವರ್ಗಾವಣೆ ನೋಂದಣಿಯನ್ನು ನಿಷೇಧಿಸುವ ಸೆಕ್ಷನ್ 6 ಅನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸುತ್ತೋಲೆ ಮತ್ತು ಅಧಿಸೂಚನೆಯ ಮೂಲಕ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಬೇಕು. ಕರ್ನಾಟಕ ಸರ್ಕಾರವು ದಿನಾಂಕ 16/09/2023 ರ ಸುತ್ತೋಲೆ ಸಂಖ್ಯೆ RD 38 LGP 2023 ರ ಮೂಲಕ ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ಎಸ್‌ಸಿ/ಎಸ್‌ಟಿ ಸಮುದಾಯಗಳಿಗೆ ಮಂಜೂರು ಮಾಡಲಾದ ಎಲ್ಲಾ ಭೂಮಿಗಳನ್ನು 'ಮಂಜೂರಾದ ಭೂಮಿಗಳು' ಎಂದು ಗುರುತಿಸಲು ಸುಲಭವಾಗುವಂತೆ ಗುರುತು (ಫ್ಲಾಗ್) ಮಾಡಲು ನಿರ್ದೇಶಿಸಿದೆ. ನೋಂದಣಿ ಮಹಾ ಪರಿಶೀಲಕರು (ಇನ್ಸ್‌ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್) ಉಪನೋಂದಣಾಧಿಕಾರಿಗಳಿಗೆ (ಸಬ್-ರಿಜಿಸ್ಟ್ರಾರ್) ನೋಂದಣಿ ಸಮಯದಲ್ಲಿ ಮಂಜೂರಾದ ಭೂಮಿಯನ್ನು ಹೇಗೆ ಗುರುತಿಸಬೇಕು ಮತ್ತು ಅಂತಹ ಭೂಮಿಯನ್ನು ವರ್ಗಾಯಿಸುವ ಯಾವುದೇ ದಾಖಲೆಯ ನೋಂದಣಿಯನ್ನು ಹೇಗೆ ನಿರಾಕರಿಸಬೇಕು ಎಂಬ ಬಗ್ಗೆ ನಿರ್ದಿಷ್ಟ ನಿರ್ದೇಶನಗಳನ್ನು ನೀಡಬೇಕು.

**5.7 ಪಿ.ಟಿ.ಸಿ.ಎಲ್ ಕಾಯ್ದೆ ಮತ್ತು ಉದ್ದೇಶದ ಕುರಿತು ಕಂದಾಯ ಅಧಿಕಾರಿಗಳಿಗೆ ತರಬೇತಿ**

ಗ್ರಾಮ ಆಡಳಿತಾಧಿಕಾರಿ, ಕಂದಾಯ ನಿರೀಕ್ಷಕ, ತಹಶೀಲ್ದಾರ್, ಸಹಾಯಕ ಕಮಿಷನರ್ ಮತ್ತು ಜಿಲ್ಲಾಧಿಕಾರಿವರೆಗಿನ ಕಂದಾಯ ಅಧಿಕಾರಿಗಳಿಗೆ ಕಾಯ್ದೆ, ಅದರ ಉದ್ದೇಶ ಮತ್ತು ಸಂಬಂಧಿತ ತೀರ್ಪುಗಳ ಕುರಿತು ತರಬೇತಿಯನ್ನು ನೀಡಬೇಕು. ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಹೊರಡಿಸಲಾದ ಸುತ್ತೋಲೆಗಳು, ಉದಾಹರಣೆ ದಿನಾಂಕ 17/09/2009 ರ RD 74 LGP 2009 (ಕಾಣೆಯಾದ ಕಡತಗಳನ್ನು ಮರುನಿರ್ಮಾಣ ಮಾಡಲು ಸಮಿತಿಗಳನ್ನು ರಚಿಸುವುದು), ದಿನಾಂಕ 16/09/2023 ರ ಸುತ್ತೋಲೆ ಸಂಖ್ಯೆ RD 38 LGP 2023 ( ಪಿ.ಟಿ.ಸಿ.ಎಲ್ ಭೂಮಿಗಳನ್ನು ಗುರುತು ಮಾಡುವುದು) ಮತ್ತು ಇತ್ಯಾದಿ ಸುತ್ತೋಲೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಅವರಿಗೆ ತಿಳಿಸಬೇಕು

**5.8. ಕಂದಾಯ ಅಧಿಕಾರಿಗಳಿಗೆ ನಿರ್ದೇಶನಗಳು**

ಪಿ.ಟಿ.ಸಿ.ಎಲ್ ಪ್ರಕರಣಗಳನ್ನು ಗುಣಲಕ್ಷಣಗಳ (ಮೆರಿಟ್ಸ್) ಆಧಾರದ ಮೇಲೆ ವಿಚಾರಣೆ ನಡೆಸಿ ನಿರ್ಧರಿಸಬೇಕು ಮತ್ತು ವಿಳಂಬದ ಕಾರಣಗಳಿಗಾಗಿ ವಜಾಗೊಳಿಸಬಾರದು ಎಂದು ನಿರ್ದೇಶಿಸಿ ತಕ್ಷಣವೇ ಎಲ್ಲಾ ಸಹಾಯಕ ಕಮಿಷನರ್‌ಗಳು (AC) ಮತ್ತು ಡೆಪ್ಯುಟಿ ಕಮಿಷನರ್ ಗಳಿಗೆ (DC) ಸುತ್ತೋಲೆಯನ್ನು ಹೊರಡಿಸಬೇಕು. ಪ್ರಸ್ತುತ ಬಾಕಿ ಇರುವ ಮತ್ತು ಭವಿಷ್ಯದ ಎಲ್ಲಾ ಅರ್ಜಿಗಳಲ್ಲಿ 2023ರ ತಿದ್ದುಪಡಿಯನ್ನು ಜಾರಿಗೆ ತರಲು ಸುತ್ತೋಲೆಯಲ್ಲಿ ನಿರ್ದೇಶಿಸಬೇಕು.

**5.9 ಕಾಯ್ದೆಯ ಅನುಷ್ಠಾನ**

ಕರ್ನಾಟಕ ಸರ್ಕಾರವು 2023ರ ತಿದ್ದುಪಡಿ ಸೇರಿದಂತೆ ಪಿ.ಟಿ.ಸಿ.ಎಲ್ ಕಾಯ್ದೆಯನ್ನು ಅದರ ಅಕ್ಷರ ಮತ್ತು ಆಶಯಗಳೆರಡರಲ್ಲೂ ಜಾರಿಗೊಳಿಸುವುದನ್ನು ಖಚಿತಪಡಿಸಿ ಕೊಳ್ಳಬೇಕು. ಎಸ್‌ಸಿ/ಎಸ್‌ಟಿ ಮಂಜೂರಾತಿದಾರರು ಮತ್ತು ಅವರ ಕಾನೂನುಬದ್ಧ ವಾರಸುದಾರರಿಗೆ ಕಾಯ್ದೆಗೆ ವಿರುದ್ಧವಾಗಿ ಮಂಜೂರಾದ ಭೂಮಿಯನ್ನು ಪರಭಾರೆ ಮಾಡಲಾಗಿರುವ ಆ ಭೂಮಿಯ ಸ್ವಾಧೀನವನ್ನು ಮರಳಿ ಕೊಡಿಸುವುದನ್ನು ಮತ್ತು ಈ ನಿಟ್ಟಿನಲ್ಲಿ ಅವರಿಗೆ ಎಲ್ಲಾ ಸಾಂಸ್ಥಿಕ ನೆರವು ನೀಡುವುದನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ ನಿರ್ದೇಶನ ನೀಡಬೇಕು.

---

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ( ಕೆಲವು ಭೂಮಿಗಳ ಪರಭಾರೆ ನಿಷೇಧ) ಕಾಯಿದೆ, 1978 (PTCL ಕಾಯ್ದೆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮಂಜೂರಾದ ಭೂಮಿಯನ್ನು ಸಾಮಾಜಿಕ ಹಾಗೂ ಆರ್ಥಿಕವಾಗಿ ಪ್ರಬಲ ವರ್ಗಗಳ ಅತಿಕ್ರಮಣ ಮತ್ತು ಕಬಳಿಕೆಯಿಂದ ರಕ್ಷಿಸಲು ರೂಪಿಸಲಾದ ಮಹತ್ವದ ಸಾಮಾಜಿಕ ನ್ಯಾಯದ ಕಾನೂನಾಗಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಆಡಳಿತಾತ್ಮಕ ನಿರ್ಲಕ್ಷ್ಯ, ನ್ಯಾಯಾಂಗದ ಕೆಲವು ದ್ವಂದ್ವ ಪೂರಿತ ತೀರ್ಪುಗಳ ಮತ್ತು ಕಾಯ್ದೆಯ ಜಾರಿಯಲ್ಲಿನ ವೈಫಲ್ಯಗಳಿಂದ ಈ ಕಾಯಿದೆಯ ಉದ್ದೇಶವೇ ಕ್ರಮೇಣ ದುರ್ಬಲಗೊಳ್ಳುತ್ತಿದೆ.

ಈ ವರದಿಯು ಪಿಟಿಸಿಎಲ್ ಕಾಯಿದೆಯ ದುರ್ಬಲಗೊಳಿಸುವಿಕೆ ಕೇವಲ ಕಾನೂನು ಜಾರಿಯ ವೈಫಲ್ಯವಲ್ಲ, ಅದು ಭಾರತದ ಸಂವಿಧಾನವು ನೀಡಿರುವ ಸಾಮಾಜಿಕ ನ್ಯಾಯದ ಭರವಸೆಯ ಮೇಲಿನ ಗಂಭೀರ ಹೊಡೆತವಾಗಿದೆ ಎಂಬುದನ್ನು ದಾಖಲಿಸುತ್ತದೆ. ಆಡಳಿತದ ನಿಷ್ಕ್ರಿಯತೆ, ಅಸಾಮಾನತೆ ಮತ್ತು ದ್ವಂದ್ವ ಪೂರಿತ ಮತ್ತು ವಿಭಿನ್ನ ತೀರ್ಪುಗಳ ಪರಿಣಾಮವಾಗಿ, ಭೂ ಮರುಹಂಚಿಕೆಯ ಸಾಂವಿಧಾನಿಕ ಉದ್ದೇಶವು ಹಿಮ್ಮೆಟ್ಟುತ್ತಿದ್ದು, ಭೂಮಿ ಮತ್ತೆ ಐತಿಹಾಸಿಕವಾಗಿ ಪ್ರಬಲ ವರ್ಗಗಳ ಕೈಗೆ ಮರಳುತ್ತಿದೆ. ಮತ್ತೊಂದೆಡೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬಗಳು ಒಕ್ಕಲೆಬ್ಬಿಸುವಿಕೆ, ಹಲವು ವರ್ಷಗಳ ಕಾಲದ ನ್ಯಾಯಾಂಗಗಳಿಗೆ ಅಲೆದಾಟ ಹಾಗು ಅದರ ಪರಿಣಾಮವಾಗಿ ಸಾಲದ ಹೊರೆಯನ್ನು ಎದುರಿಸುತ್ತ ಸಂಕಷ್ಟದಲ್ಲಿ ಸಿಲುಕಿದ್ದಾರೆ.

ನಮ್ಮ ಮುಂದಿರುವ ಪ್ರಶ್ನೆ ಕೇವಲ ಒಂದು ಕಾಯ್ದೆಯದ್ದಲ್ಲ. ಬದಲಿಗೆ ಪರಿಶಿಷ್ಟ ಜಾತಿ ಹಾಗು ಪಂಗಡಗಳಿಗೆ ಸಂವಿಧಾನ ನೀಡಿರುವ ಸಾಮಾಜಿಕ ಹಾಗು ಆರ್ಥಿಕ ನ್ಯಾಯದ ಭರವಸೆಯನ್ನು ಎತ್ತಿಹಿಡಿಯುತ್ತೇವೋ ಅಥವಾ ಕೈಬಿಡುತ್ತೇವೋ ಎಂಬ ಪ್ರಶ್ನೆಯನ್ನು ಈ ವರದಿ ನಮ್ಮ ಮುಂದೆ ಇಡುತ್ತದೆ.


ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

**ಅಖಿಲ ಭಾರತ ನ್ಯಾಯಕ್ಕಾಗಿ ವಕೀಲರ ಸಂಘ (AILAJ)**
**ಮಂಥನ್ ಲಾ**
**ಪರ್ಯಾಯ ಕಾನೂನು ವೇದಿಕೆ**
**ಪಿಟಿಸಿಎಲ್ ಕಾಯ್ದೆ ಭೂಮಿ ವಂಚಿತರ ಹೋರಾಟ ಸಮಿತಿ**